ಕರ್ಮವೀರ

ಹುಬ್ಬಳ್ಳಿ ತಾ. ೧೪—೨—೧

ಸಂಪುಟ ೨೦]   [ಸಂಚಿಕೆ ೨

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು :
ಪ. ರಾ. ಪುರೋಹಿತ]

ಸಂಸ್ಥಾಪಕರು :
[ರಂ. ರಾ. ದಿವಾಕರ

ಬಲ್ಲವರ ನುಡಿಗಳು -

ನರಕದಲ್ಲಿ ಅಹಂಕಾರವಲ್ಲದೆ
ರೇನೂ ಸುಡುವದಿಲ್ಲ.

—ಜರ್ಮನ್ ತತ್ವಜ್ಞಾನಿ

★


ಮನುಜ ಮನುಜಗು ಬಹುದು
ರಾಷ್ಟ್ರರಾಷ್ಟ್ರಕು ಬಹುದು
ಒಮ್ಮೆ ನಿರ್ಧರಿಪ ಕಾಲ
ದಿಟಕು ಸಟೆಗೂ ನಡುವೆ
ಘಡಿದ ಸಂಗ್ರಾಮದಲಿ
ಅವ ಕಡೆ ತನ್ನ ವೇಳೆ.

—ಜೆ. ಆರ್. ಲೋವೆಲ್

★

ಕ್ರೋಧ ಮತ್ಸರಗಳಿಂದ
ರ್ಮುಕ್ತವಾದ ಕ್ಲೇಶಸಹನೆಯ
ರ್ಯೋದಯದ ಮುಂದೆ ಕಲ್ಲಿ
ಥ ಹೃದಯವೂ ಕರಗಲೇ
ಬೇಕು, ಘೋರ ಅಜ್ಞಾನವೂ
ಶವಾಗಲೇಬೇಕು.

—ಮಹಾತ್ಮಾ ಗಾಂಧಿ



ಅಧ್ಯಕ್ಷ ಉತ್ತಂಗಿಯವರು

ಕಲಬುರಗಿಯಲ್ಲಿ ಜರುಗಿದ ೩೨ನೆ ಕನ್ನಡ ಸಾಹಿತ್ಯಸಮ್ಮೇಲನದ ಅಧ್ಯಕ್ಷ ರಾದ ರೆವರೆಂಡ್ ಚನ್ನಪ್ಪ ಉತ್ತಂಗಿ ಯವರದು ಸರ್ವಜ್ಞ ವಚನಗಳ ವಿಷಯದಲ್ಲಿ ಅಧಿಕಾರ ವಾಣಿ.

ಪರಿಚಯಕ್ಕೆ ಪುಟ ೫ ನೋಡಿರಿ.

ಕಲಬುರ್ಗಿ ಸಮ್ಮೇಲನದ ಕಾರ್ಯಕಲಾಪಗಳು



KARMAVEER

ತಿರುಳುಗನ್ನಡ ನಮ್ಮ ರಕ್ತಗತವಾಗಬೇಕು

ಏಕೀಕರಣದ ಉದ್ದೇಶ ಸಾಂಸ್ಕೃತಿಕ ಹೊರತು ರಾಷ್ಟ್ರಘಾತಕವಲ್ಲ
ಕ್ರೈಸ್ತಬಾಂಧವರಿಗೆ ಕಿವಿಮಾತು

೩೨ ನೆ ಸಾಹಿತ್ಯಸಮ್ಮೇಲನದಲ್ಲಿ ಅಧ್ಯಕ್ಷ ರೆವರೆಂಡ್ ಉತ್ತಂಗಿಯವರ ಭಾಷಣ

ಆದಿಕವಿಗಳಾದ ನೃಪತುಂಗ-ಪಂಪ-ರನ್ನಾದಿಗಳು ತಮ್ಮ ಕಾವ್ಯಗಳಲ್ಲಿ ಕನ್ನಡ ನಾಡನ್ನು ಕೊಂಡಾಡಿರುವರು. ಸಂಸ್ಕೃತ ಕಾವ್ಯಕಲೆಯನ್ನು ಆದರ್ಶವಾಗಿಟ್ಟುಕೊಂಡ ಈ ಕವಿಗಳು ಕನ್ನಡ ನಾಡಿನ ಹೆಸರೆತ್ತಿರುವುದು "ತಿರುಳುಗನ್ನಡದೊಳ್ಳಾಗಿ; ಆ ಕನ್ನಡವು ಇಂದು ನಮ್ಮ ಕಣ್ಮರೆಯಾಗಿದೆ. ತಿರುಳುಗನ್ನಡಕ್ಕಾಗಿ ಹಸಿದಿರುವ ಕನ್ನಡಿಗರು ಇಂದು ಅದನ್ನು ನಿರಕ್ಷರಿಗಳಾದ ಹಳ್ಳಿಗರು, ಹೆಂಗಸರು, ಆಡಗೂಲಜ್ಜಿಗಳಿಂದ ತಿಳಿದುಕೊಳ್ಳಬೇಕಾಗಿದೆ. ನಾನು ಈ ಕಾರ್ಯವನ್ನು ನನ್ನ ವಯಸ್ಸಿನ ಮೂವತ್ತನೆಯ ವರ್ಷದಿಂದ ಕೈಕೊಂಡು ಇಂದಿಗೂ ಅದೇ ವೃತ್ತಿಯಲ್ಲಿರುವುದರಿಂದ ನನಗೆ "ತಿರುಳುಗನ್ನಡ ತಿರುಕ" ನೆಂದು ಹೆಸರು.

ಕನ್ನಡ ಸಂಸ್ಕೃತಿಯ ಪ್ರಾಚೀನತೆ

ಅನುಭಾವ ಪ್ರಧಾನವಾದ ಕನ್ನಡ ಸಂಸ್ಕೃತಿಗೆ ದ್ರಾವಿಡ ಸಂಸ್ಕೃತಿಯೇ ಮೂಲ. ಅದರ ಪ್ರಾಚೀನತೆಯನ್ನು ಕುರಿತು ಇಲ್ಲಿ ಕೆಲವು ಸಂಗತಿಗಳನ್ನು ಹೇಳಬಯಸುತ್ತೇನೆ.

"ಮಾನವನು ಕಾಡುಬಿಟ್ಟು ನಾಡಿಗೆ ಬಂದು ನಾಡಿನಲ್ಲಿ ಕಟ್ಟಿದ ಮೊತ್ತಮೊದಲನೆಯ ಪಟ್ಟಣಕ್ಕೆ ಉರ್ ಎಂದು ಹೆಸರು. ಈ ಹೆಸರು ಬೈಬಲ್ಲ ಗ್ರಂಥದಲ್ಲಿಯೂ ಉಲ್ಲೇಖವಾಗಿದೆ. ಈ ಉರ್ ಕನ್ನಡದ ಊರ್-ಊರು ಎಂಬ ಪದೋಚ್ಚಾರಕ್ಕೆ ಸರಿಯಾಗಿದೆ. ಇದಲ್ಲದೆ ಹಳಗನ್ನಡದಲ್ಲಿ ಊರ್ ಎಂಬ ಶಬ್ದವು ಧಾತುವಾಗಿದ್ದು ಅದಕ್ಕೆ ನೆಲಸು ಎಂಬ ಅರ್ಥವೂ ಇದೆ. ನಮ್ಮ ಹಿಂದುಸ್ತಾನದಲ್ಲಿ ಊರು ಎಂಬ ಪದದಿಂದ ಅಂತ್ಯವಾಗುವ ಊರುಗಳನ್ನು ಲೆಕ್ಕಿಸಿದರೆ ಅಂಥವು ಕೆಲವು ಸಾವಿರಕ್ಕೆ ಮಿಕ್ಕಬಹುದು. ಇದಲ್ಲದೆ ಮೋಹೆಂಜೋದಾರೋ ಮತ್ತು ಹರಪ್ಪ ಎಂಬ ಸ್ಥಳಗಳಲ್ಲಿ ಈಗ ದೊರೆಯುವ ಚಿತ್ರಲಿಪಿಯಲ್ಲಿಯ ಕಣ್-ಕಣ್ಣನ್-ಕಣ್ಣನೀರ್ ಎಂಬ ಶಬ್ದಗಳಿಗೆ ಕ್ರಮವಾಗಿ ಕಣ್ಣು, ಕಣ್ಣುಳ್ಳವ, ಕಣ್ಣುಳ್ಳವರು ಎಂದರ್ಥವಾಗುತ್ತದೆ. ಕಣ್ಣನೀರ್ ಎಂಬ ಶಬ್ದವು ಕನ್ನಡ ಜನಾಂಗವನ್ನೂ ಕಣ್ಣನ್ ಎಂಬ ಶಬ್ದವು ಕನ್ನಡಿಗರ ದೇವನಾದ ಶಿವನನ್ನೂ ಸೂಚಿಸುತ್ತವೆಂದು ಫಾದರ್ ಹೆರಾಸರ ಅಭಿಪ್ರಾಯ. ಇವುಗಳಲ್ಲಿ ಕಣ್ಣನ್ ಎಂಬ ಶಬ್ದವು ಶಿವಸೂಚಕವಾಗಿದೆ ಎಂಬುದರಲ್ಲಿ ತಿಲಾಂಶವೂ ಸಂದೇಹವಿಲ್ಲ. ಯಾಕೆಂದರೆ ಶಿವನಿಗೆ ಕನ್ನಡದಲ್ಲಿ ಮುಕ್ಕಣ್ಣ, ಹಣೆಗಣ್ಣ ಮುಂತಾದ ಹೆಸರುಗಳು ರೂಢಿಯಲ್ಲಿರುವವಲ್ಲದೆ ಕನ್ನಡಿಗ ಎಂಬುದೊಂದು ನಾಮವಿಶೇಷವಿದ್ದಂತೆ ಹಳಗನ್ನಡ ನಿಘಂಟಿನಿಂದ ತಿಳಿದು ಬರುತ್ತದೆ ಕಣ್-ಅದಿಗ-ಕಣ್ಣದಿಗ. ಕನ್ನದಿಗ ಎಂದರೆ ಅಂಗಾಲಲ್ಲಿ ಕಣ್ಣುಳ್ಳವನೆಂದು ಅರ್ಥ.

ಅನುಭಾವ ಸಂಸ್ಕೃತಿಯೇ ಕನ್ನಡ ಸಂಸ್ಕೃತಿ

"ಅನುಭಾವವೆಂದರೆ ಅನುರೂಪವಾದ ಭಾವನೆಯನ್ನು ಹೊಂದುವುದು ಇಲ್ಲವೆ ತಾನು ಮತ್ತೊಂದರಂತೆ ಆಗುವದು. ಇದಕ್ಕೆ ತಾದಾತ್ಮ್ಯವೆಂದೆನ್ನುತ್ತಾರೆ. ತನ್ನ ಸ್ವಂತ ದೇವರನ್ನು ಪ್ರಾಣದಂತೆ ಭಾವಿಸುವುದೇ ಪ್ರಾಣಲಿಂಗಿಸ್ಥಳ ಇದಕ್ಕೆ ಭಕ್ತಿಯೇ ಮೊದಲು. ಐಕ್ಯ, ಇಲ್ಲವೆ ಸಾಮರಸ್ಯವೇ ಅಂತ್ಯವಾಗಿದೆ. ಸಾಮರಸ್ಯದಲ್ಲಿ ಹೃದಯವು ಕದಡಿ ಕರಗಿ ಹೋಗುವುದರಿಂದ ಅನುಭಾವವು ರಸ ರೂಪವಾಗಿ ಹರಿಯುತ್ತಿರುತ್ತದೆ. ಸಕಲ ತರದ ಸಾಹಿತ್ಯದ ಉಗಮವು ಇಲ್ಲಿಯೆ.

"ಅನುಭಾವ ಸಂಸ್ಕೃತಿಯ ಇನ್ನೊಂದು ಮುಖ್ಯ ಲಕ್ಷಣವೆಂದರೆ ಸಮದರ್ಶಿತ್ವ. "ಸರ್ವತ್ರ ಸಮದರ್ಶಿತ್ವಂ" ಎಂಬುದು ಗೀತೆಯ ಮಾತು. ನಾವು ಅನುಭಾವದಲ್ಲಿ ಆಳಕ್ಕಿಳಿದಂತೆ ಅದು ಹೆಚ್ಚು ಹೆಚ್ಚು ವಿಕಾಸವಾಗುತ್ತ- ವಿಶಾಲವಾಗುತ್ತ ಹೋಗುವದು. ಅಹಿಂಸೆ, ವಿಶ್ವಪ್ರೇಮ, ವಿಶ್ವಬಾಂಧವ್ಯ ಇವು ಒಳ ಬೆಳಗಿನ ಅನುಭಾವದ ಕಿರಣಗಳು. ಭರತ ಖಂಡದ ಜನತೆಯ ಹೃದಯ ಪೀಠವನ್ನು ಆಕ್ರಮಿಸಿ ಅಖಿಲ ಜಗತ್ತನ್ನೇ ಬೆರಗುಗೊಳಿಸಿದ ಮಹಾತ್ಮಾ ಗಾಂಧಿಯವರ ದಿವ್ಯ ಶಕ್ತಿ ಅನುಭಾವದ್ದು."

ಆ ಮೇಲೆ ಅಧ್ಯಕ್ಷರು ವಚನಕಾರರ ಶೈಲಿಯ ವಿಸ್ತಾರವಾದ ವಿವೇಚನೆ ಮಾಡಿ, ಅನುಭಾವ ಸಂಸ್ಕೃತಿಯ ವೈಖರಿಯೆ ವಚನಗಳ ಮೂಲವೆಂದು ಹೇಳಿ ಅದಕ್ಕೂ ಮಹಾತ್ಮಾ ಗಾಂಧಿ, ಕ್ರಿಸ್ತ, ಬುದ್ಧ, ಮಹಮದರ ಅನುಭವೋಕ್ತಿ ಶೈಲಿಗಳಿಗೂ ಇರುವ ಸಾಮ್ಯವನ್ನು ತೋರಿಸಿಕೊಟ್ಟರು. ದಾಸ ಸಾಹಿತ್ಯಕ್ಕೂ ಅನುಭಾವವೇ ಮೂಲ. ಅನುಭಾವಕ್ಕೂ ಆನಂದಕ್ಕೂ ಗಾಯನಕ್ಕೂ ನಿಕಟವಾದ ಸಂಬಂಧವಿದೆ. ಆ ಆನಂದದ ಭಾಷೆಯೆ ದಾಸರ ಕೀರ್ತನಗಳು ಆಧುನಿಕ ಕವಿ ಲೇಖಕರನೇಕರ ಕೃತಿಗಳಲ್ಲಿಯೂ ಬಸವೇಶ್ವರರ ವಚನಗಳ ಅನುಭಾವದ ಮಿಂಚನ್ನು ಕಾಣಬಹುದಾಗಿದೆ.

ಸಾಂಸ್ಕೃತಿಕ ಐಕ್ಯವೇ ಏಕೀಕರಣ ಬೇಡಿಕೆಯ ಉದ್ದೇಶ

"ಭಾರತದ ಸರ್ವಾಂಗಗಳೆಲ್ಲ ಪರಿಪುಷ್ಟವಾಗಿ ಬೆಳೆಯದೆ ಅದರ ಸರ್ವಾಂಗೀಣ ಉನ್ನತಿ ಸಾಧ್ಯವಾಗದು. ದಕ್ಷಿಣಾಪಥಕ್ಕೆ ನಮ್ಮ ನಾಡು ಹೃದಯಸ್ವರೂಪವಾಗಿದೆ. ಭಾರತದ ಸರ್ವಾಂಗಗಳಿಗೂ ಸರ್ವ ಜೀವನಾಡಿಗಳಿಗೂ ಸತ್ವಪುಷ್ಟವಾದ ರಕ್ತವನ್ನು ಕನ್ನಡ ನಾಡು ಹಿಂದಿನಂತೆ ಇಂದೂ ಪೂರೈಸಬೇಕಾಗಿದೆ. ಬಲವಾದ ಹಾಗೂ ವಿಶಾಲವಾದ ಹೃದಯವಿಲ್ಲದೆ ಹೊಸ ರಾಷ್ಟ್ರರಚನೆಯಾಗಲಾರದು. ಇದು ಸಾಧ್ಯವಾಗಬೇಕಾದರೆ ಕನ್ನಡದ ಎಲ್ಲ ಜನತೆಯು ಒಂದೆಡೆಗೆ ಬಂದು ತನ್ನ ಸಾಂಸ್ಕೃತಿಕ ಬಲವನ್ನು ಹೆಚ್ಚಿಸಿಕೊಳ್ಳಬೇಕು. ಇದೇ ಕರ್ನಾಟಕ ಏಕೀಕರಣದ ಮುಖ್ಯ ಉದ್ದೇಶ. ಭಾಷಾವಾರ ಪ್ರಾಂತೀಕರಣ ತತ್ವವು ಕೇವಲ ಸಾಂಸ್ಕೃತಿಕ ಸ್ವರೂಪದ್ದಾಗಿರುವದರಿಂದ ಅದು ರಾಷ್ಟ್ರದ ಸಂಸ್ಕೃತಿ ಸಂವರ್ಧನೆಗೆ ಪೋಷಕವಾಗುವದೇ ಹೊರತು ವಿಘಾತಕವಾಗುವದಿಲ್ಲ. ದರ್ ಸಮಿತಿಯ ವರದಿಯಲ್ಲಿ ಭಾಷಾವಾರ ತತ್ವವನ್ನು ಕುರಿತು ಬಂದಿರುವ ಉದ್ಗಾರಗಳು ಅನುಚಿತ ಹಾಗೂ ಅಸಂಬದ್ಧವಾಗಿದೆ.

ಸರದಾರ ಪಟೇಲರು ಮೈಸೂರು ಕೊಡಗುಗಳ ಸಮಸ್ಯೆಗಳನ್ನೆತ್ತಿ ಕನ್ನಡಿಗರಾದ ನಾವು ಯಾವ ದಿಕ್ಕಿನಲ್ಲಿ ಹೇಗೆ ಕಾರ್ಯಮಾಡಬೇಕೆಂಬುದನ್ನು ಸೂಚಿಸಿದ್ದಾರೆ. ಮೈಸೂರು ಕರ್ನಾಟಕದಲ್ಲಿ ಸೇರಬೇಕೋ ಕರ್ನಾಟಕವು ಮೈಸೂರಲ್ಲಿ ಸೇರಬೇಕೋ- ಎಂಬುದು ಜಟಿಲ ಪ್ರಶ್ನೆಯೆಂದು ಸರದಾರರ ಅಭಿಪ್ರಾಯ. ನನ್ನ ಮಟ್ಟಿಗೆ ಹೇಳಬೇಕೆಂದರೆ ಇದು ಗಂಡಹೆಂಡಿರ ಜಗಳ. ಆದುದರಿಂದ ಮೈಸೂರವರೂ ಕರ್ನಾಟಕದವರೂ ಒಂದಾಗಿ ಈ ಜಗಳವನ್ನು ಬಗೆಹರಿಸಿಕೊಳ್ಳದೆ ಗತ್ಯಂತರವಿಲ್ಲ. ಈ ಸಂದರ್ಭದಲ್ಲಿ ನಾನು ಈ ಸಮಸ್ಯೆಯ ವಿವರಗಳಿಗೆ ಕೈಹಾಕದೆ ಇಷ್ಟು ಮಾತ್ರ ಹೇಳಬಲ್ಲೆ. ಯಾರು ಏನೇ ಹೇಳಲಿ, ಕರ್ನಾಟಕದ ಏಕೀಕರಣವು ಕನ್ನಡಿಗರ ಜನ್ಮಸಿದ್ಧ ಹಕ್ಕು. ಏಕತಂತ್ರ ಅಖಂಡ ಕರ್ನಾಟಕವು ನಿರ್ಮಾಣವಾಗಲೇಬೇಕು, ನಿರ್ಮಾಣವಾಗುವದು. ಇದರಲ್ಲಿ ಎಷ್ಟು ಮಾತ್ರವೂ ಸಂದೇಹವಿಲ್ಲ. ಆದರೆ ಈ ವಿಷಯದಲ್ಲಿ ನಾವು ಆದರ್ಶ ರೀತಿಯಲ್ಲಿ ನಡೆದುಕೊಳ್ಳೋಣ.

ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ಆದರ್ಶಗಳು

ನಮ್ಮ ಈ ಪ್ರಾಂತೀಕರಣದ ಮೊದಲ ಹೆಜ್ಜೆಯಾಗಿ ಕರ್ನಾಟಕ ವಿಶ್ವವಿದ್ಯಾಲಯವು ಇನ್ನು ಕೆಲವೇ ದಿನಗಳಲ್ಲಿ ಸ್ಥಾಪಿತವಾಗಲಿದೆ.

ಕನ್ನಡ ಜನತೆಯ ಸಂಸ್ಕೃತಿ ವಿಕಾಸಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಮೈಸೂರು ವಿಶ್ವವಿದ್ಯಾಲಯ— ಹೀಗೆರಡು ವಿಶ್ವವಿದ್ಯಾಲಯಗಳು ನಮಗೆ ದೊರೆತಂತಾಗುವದು. ಈ ಎರಡೂ ವಿಶ್ವವಿದ್ಯಾಲಯಗಳು ಪರಸ್ಪರ ಪೋಷಕವಾಗಿಯೂ ಪೂರಕವಾಗಿಯೂ ಕಾರ್ಯಮಾಡುತ್ತ ನಾಡುಕಟ್ಟುವ ಧ್ಯೇಯೋದ್ದೇಶದಲ್ಲಿ ಏಕವಾಗಬೇಕಾಗಿದೆ.

ಮೊದಲನೆಯದಾಗಿ, ನಾಡಿನ ಎಲ್ಲ ಜನತೆಯ ಸಂಸ್ಕೃತಿ ವಿಕಾಸವೇ ನಮ್ಮ ವಿಶ್ವವಿದ್ಯಾಲಯದ ಗುರಿ. ಜನಸಾಮಾನ್ಯರನ್ನು ಕಡೆಗಣಿಸಿ ಕೇವಲ ಕೆಲ ಜನರನ್ನಷ್ಟೆ ಗಮನಿಸಿದ್ದಾದರೆ ಅದು ವಿಶ್ವವಿದ್ಯಾಲಯದ ಹೆಸರಿಗೆ ತಕ್ಕುದಾಗಲಾರದು. ಜನತೆಯ ಜೀವನಮಟ್ಟವು ಹೇಗೆ ಸುಧಾರಿಸೀತು ಎಂಬುದನ್ನು ಯೋಚಿಸುವುದೂ ಆದರ್ಶ ವಿಶ್ವವಿದ್ಯಾಲಯದ ಆದ್ಯ ಕರ್ತವ್ಯವಾಗಿದೆ.

ಎರಡನೆಯದಾಗಿ, ಕರ್ನಾಟಕ ವಿಶ್ವವಿದ್ಯಾಲಯವು ಪ್ರಾಚೀನ ಭಾರತೀಯ ಗುರುಕುಲ ಪದ್ಧತಿಯ ತತ್ವಗಳನ್ನು ಇಂದಿನ ಪರಿಸ್ಥಿತಿಗೆ ಒಗ್ಗುವಂತೆ ತುಸು ಮಾರ್ಪಡಿಸಿ ಅವುಗಳನ್ನು ಪುನರುಜ್ಜೀವನಗೊಳಿಸುವದು ತೀರ ಅವಶ್ಯ.

ಕೊನೆಯದಾಗಿ, ನಮ್ಮ ನಾಡಿನ ಸಂಸ್ಕೃತಿ ಪ್ರತೀಕಗಳಾದ ಕರ್ನಾಟಕ ಸಂಗೀತ, ಚಿತ್ರಕಲೆ, ಶಿಲ್ಪ-ಮೊದಲಾದ ಲಲಿತ ಕಲೆಗಳ ಸಂರಕ್ಷಣ ಹಾಗೂ ಸಂವರ್ಧನೆಗಳು ಕರ್ನಾಟಕ ವಿಶ್ವವಿದ್ಯಾಲಯದ ಕಾರ್ಯಕ್ಷೇತ್ರದಲ್ಲಿ ಸಮಾವೇಶವಾಗಬೇಕಾದುದು ಕ್ರಮಪ್ರಾಪ್ತ ವಿಷಯವೇ ಆಗಿದೆ. ಲಲಿತ ಕಲೆಗಳಲ್ಲಿದ್ದ ಕನ್ನಡಿಗರ ಸಹಜ ಪ್ರವೃತ್ತಿ ಹಾಗು ಅಭಿರುಚಿಗಳನ್ನು ಜಾಗೃತಪಡಿಸಿ ಶುದ್ಧಗೊಳಿಸಿದಲ್ಲಿ ನಮ್ಮ ಜನತೆಯ ಸಂಸ್ಕೃತಿ ಉಜ್ವಲವಾಗುವುದು.

ಕನ್ನಡಕ್ಕೆ ಪ್ರಥಮ ಸ್ಥಾನ

ಇನ್ನು ಕನ್ನಡ ನುಡಿಯು ಶಿಕ್ಷಣದ ಬೋಧಭಾಷೆ ಮಾತ್ರವಲ್ಲದೆ ನಮ್ಮ ಪ್ರಾಂತದ ಆಡಳಿತ ಹಾಗೂ ವ್ಯವಹಾರದ ಭಾಷೆಯೂ ಆಗಲಿರುವುದರಿಂದ ಅದರ ಮಹತ್ವವು ಇಮ್ಮಡಿಯಾಗಲಿದೆ. ಆದುದರಿಂದ ಪ್ರಾಂತೀಯ ಇಲ್ಲವೆ ಪ್ರಾದೇಶಿಕ ಭಾಷೆಯಾಗಿರುವ ಕನ್ನಡಕ್ಕೆ ಪ್ರಥಮ ಸ್ಥಾನವೂ ರಾಷ್ಟ್ರಭಾಷೆಯಾದ ಹಿಂದೀ ನುಡಿಗೆ ದ್ವಿತೀಯ ಸ್ಥಾನವೂ ಅಂತರ್ರಾಷ್ಟ್ರೀಯ ಖ್ಯಾತಿಯನ್ನು ಪಡೆದ ಆಂಗ್ಲ ಭಾಷೆಗೆ ತೃತೀಯ ಸ್ಥಾನವೂ ಸಲ್ಲಬೇಕೆಂದು ನನ್ನ ಅಭಿಪ್ರಾಯ. ಹೀಗಾಗಿ ಈಗಿನಿಂದಲೇ ನಮ್ಮ ನುಡಿಯ ಭಾಂಡಾರವನ್ನು ಅಭಿವೃದ್ಧಿಪಡಿಸಿಕೊಳ್ಳುವ ವಿಧಾನಗಳನ್ನು ನಾವು ಯೋಚಿಸಬೇಕಾಗುತ್ತದೆ.

ನಮ್ಮ ನುಡಿಯ ಸಂಪತ್ತು-ತಿರುಳ್ಗನ್ನಡ

ನಾನು "ತಿರುಳುಗನ್ನಡದ ತಿರುಕ". ಈ ವಿಚಾರದಲ್ಲಿ ನನ್ನ ಅನುಭವದ ಹಾದಿಯನ್ನೇ ತಮ್ಮ ಮುಂದಿರುವೆ. ಮೊದಲು ನಾವೆಲ್ಲ ತಿರುಳುಗನ್ನಡದ ಕವಿಯನ್ನು ಅರಿತುಕೊಳ್ಳಬೇಕು. ಎಂದರೆ ನಮ್ಮಲ್ಲಿ ಈಗ ಬಳಕೆಯಿಲ್ಲದೆ ಮೂಲೆಗುಂಪಾಗಿ ಬಿದ್ದಿರುವ ದೇಸಿಯ ಕನ್ನಡಕ್ಕೆ ಜೀವತಿರುಗುವದು. ಆಗ ಅದರ ಶಬ್ದ ಸಂಪತ್ತು, ನುಡಿಗಟ್ಟು, ಪದಪ್ರಯೋಗ, ಬಳಿಕೆ ಮಾತಿನ ಶೈಲಿ ಮೊದಲಾದುವನ್ನು ಉದ್ಧರಿಸಿ ಸಂಸ್ಕರಿಸಿ ಮತ್ತೆ ಬೆಳಕಿಗೆ ತರುವ ಉತ್ಸಾಹವು ನಮ್ಮಲ್ಲಿ ಸ್ವಾಭಾವಿಕವಾಗಿ ಹುಟ್ಟುವದು. ಶಿಕ್ಷಣ ಸಂಪರ್ಕವಿಲ್ಲದ ಹೆಂಗಸರ ಹಾಗು ಹಳ್ಳಿಗರ ಬಾಯಲ್ಲಿ, ಹಳೆಯ ಕಾವ್ಯಗಳಲ್ಲಿ ವಚನಕಾರರು, ದಾಸರು ಲಾವಣಿಕಾರರು ಮೊದಲಾದ ಜಾನಪದರ ಸಾಹಿತ್ಯದಲ್ಲಿ, ಗಾದೆ-ಒಗಟು-ಕಥೆ ಹಾಡುಗಳಲ್ಲಿ ಸೂರೆಯಾಗಿರುವ ಈ ತಿರುಳುಗನ್ನಡದ ಸಮೃದ್ಧಿಯನ್ನು ನಾವು ಕಂಡುಹಿಡಿದು ಕಲೆಹಾಕಿ ಬಳಕೆಗೆ ತರುವ ಪ್ರಯತ್ನವನ್ನು ಅವ್ಯಾಹತವಾಗಿ ನಡೆಸಬೇಕು ತಿಳಿಗನ್ನಡವು ನಮ್ಮ ರಕ್ತವಾಗಬೇಕು. ಅದು ಬರೆಹದಲ್ಲಿ ಬಳಕೆ ಮಾತಿನಲ್ಲಿ, ಭಾಷಣಗಳಲ್ಲಿ ಪತ್ರಿಕೆಗಳಲ್ಲಿ ಹರಿದಾಡಬೇಕು. ನುಡಿಯ ಬೆಳವಣಿಗೆಯ ದೃಷ್ಟಿಯಿಂದ ನಮ್ಮ ಬಳಿಯ ಶಬ್ದ ಸಂಪತ್ತೆಲ್ಲವನ್ನೂ ಹೊರತೆಗೆಯಬೇಕು. ಆದರೆ ಇಂದಿನ ವೈಜ್ಞಾನಿಕ, ರಾಜಕೀಯ, ತಾತ್ವಿಕ—ಮೊದಲಾದ ಕ್ಷೇತ್ರಗಳಲ್ಲಿಯ ತೀವ್ರ ಪ್ರಗತಿಗೆ ನಮ್ಮ ತಿರುಳುಗನ್ನಡದ ಶಬ್ದ ಭಾಂಡಾರವು ಸಾಲದೆ ಹೋಗಬಹುದು. ಆ ಪಕ್ಷದಲ್ಲಿ ನಮ್ಮ ನುಡಿಯ ಸಾಕುತಾಯಿಯಾದ ಸಂಸ್ಕೃತದಿಂದಲೂ. ಅದು ಸಾಲದಿದ್ದಲ್ಲಿ ಇಂದಿನ ಜಗತ್ತಿನಲ್ಲಿ ಮುಂದುವರಿದ ಹಾಗೂ ಅತ್ಯಂತ ಪ್ರಭಾವಶಾಲಿಯಾಗಿರುವ ಆಂಗ್ಲ ಭಾಷೆಯಿಂದಲೂ ನಾವು ಹೇರಳವಾಗಿ ಶಬ್ದ ಸಂಗ್ರಹವನ್ನು ಕೊಳ್ಳಲು ಅವ ಅಡ್ಡಿಯೂ ಇಲ್ಲ.

ಭಾರತದ ಇನ್ನಿತರ ಪ್ರಾಂತ ಭಾಷೆಗಳೂ ಕನ್ನಡದ ನೆರೆಹೊರೆಯಲ್ಲಿರುವ ದ್ರಾವಿಡ ಭಾಷೆಗಳೂ ಈ ವಿಷಯದಲ್ಲಿ ನಮಗೆ ತುಂಬಾ ನೆರವಾಗಬಹುದಾಗಿದೆ. ನುಡಿಯನ್ನು ಸಮೃದ್ಧಿಪಡಿಸುವ ವಿಚಾರದಲ್ಲಿ ಮಡಿವಂತಿಕೆಯ ಕಲ್ಪನೆ ಬೇಡ. ಹೊರಗಿನ ಸಂಪತ್ತನ್ನು ತುಂಬಿಕೊಳ್ಳುವ ಭರದಲ್ಲಿ ನಮ್ಮ ನುಡಿಯ ಸೊಲ್ಲು ನಮಗೆ ಎರವಾಗದಂತೆ, ಚೆಲುವು ಹದಗೆಡದಂತೆ ನೋಡಿಕೊಳ್ಳುವದೂ ಅಷ್ಟೇ ಮಹತ್ವದ್ದಾಗಿದೆ.

ನಮ್ಮ ಸಾಹಿತ್ಯ— ಹಳೆಯದು ಮತ್ತು ಹೊಸದು

ಹಳೆಯ ಸಾಹಿತ್ಯ ನಮ್ಮ ಪೂರ್ವಾರ್ಜಿತ ಆಸ್ತಿ. ಅದರ ಅಗ್ಗಳಿಕೆಯ ಅರಿವು ಕನ್ನಡಿಗರಿಗೆ ಇನ್ನೂ ಸಾಕಷ್ಟು ಆದಂತಿಲ್ಲ. ಈ ಕಾರಣದಿಂದಲೇ ನಾವು ಪರಭಾಷಾ ಸಾಹಿತ್ಯಗಳ ಮುಂದೆ ಕೈಯೊಡ್ಡಿ ನಿಂತಿದ್ದೇವೆ. ಬಗಲಲ್ಲಿ ಕೂಸಿಟ್ಟುಕೊಂಡು ಊರೆಲ್ಲ ಹುಡುಕಿದಂತೆ ನಮ್ಮ ಗತಿಯಾಗಿದೆ.

ಹಳೆಗನ್ನಡ ಸಾಹಿತ್ಯದಲ್ಲಿ ನಾಡಿನ ಮಹಾವ್ಯಕ್ತಿಗಳ ಮತ್ತು ರಾಜ್ಯ ಸಾಮ್ರಾಜ್ಯಗಳ ಚರಿತ್ರಾತ್ಮಕ ಹಾಗೂ ಐತಿಹಾಸಿಕ ಅಂಶಗಳು ಸೂಕ್ಷ್ಮವಾಗಿ ಅದರಲ್ಲಿ ಹುದುಗಿಕೊಂಡಿವೆ. ಈ ಎಲ್ಲದರ ವಿವರವಾದ ಮತ್ತು ಶಾಸ್ತ್ರೀಯವಾದ ಅಭ್ಯಾಸವು ಇಂದು ನಡೆಯಬೇಕು.

ಎರಡನೆಯದಾಗಿ, ಈ ಅಭ್ಯಾಸದ ತಿಳಿವನ್ನು ಕನ್ನಡ ಜನ ಸಾಮಾನ್ಯರಲ್ಲಿ ಹರಡಬೇಕಾದ ಕಾಲವೀಗ ಸನ್ನಿಹಿತವಾಗಿದೆ.

ಇತ್ತೀಚೆಗೆ ಹೊಸ ಸಾಹಿತ್ಯ ಹೇರಳವಾಗಿ ನಿರ್ಮಾಣವಾಗುತ್ತಿದೆ; ವಿವಿಧ ರೂಪದಲ್ಲಿ ಬೆಳೆಯುತ್ತಿದೆ.

ಆದರೆ ಕೇವಲ ಲಲಿತ ಸಾಹಿತ್ಯವೊಂದೇ ಸಾಲದು. ಇಂದಿನ ವಿಜ್ಞಾನ ಯುಗದ ವೇಗವಾಗಿ ಓಡುತ್ತಿರುವ ಪ್ರಪಂಚದೊಡನೆ ಸರಿಸಮನಾಗಿ ಹೆಜ್ಜೆಹಾಕಬೇಕಾದರೆ ಜ್ಞಾನದಾಯಕ ಸಾಹಿತ್ಯವೂ ಸಮೃದ್ಧವಾಗಿ ನಮಗೆ ಬೇಕು ಇದು ದೊಡ್ಡ ಕೆಲಸ. ಒಬ್ಬಿಬ್ಬರಿಗೆ ನೀಗುವಂಥದಲ್ಲ. ಸಂಘ—ಸಂಸ್ಥೆಗಳೇ ಈ ಕಾರ್ಯವನ್ನು ನಿರ್ವಹಿಸಬೇಕಾಗುವದು.

ಇನ್ನೂ ಮಾಡಬೇಕಾದ ಕಾರ್ಯ ಅಪಾರವಿದೆ. ತಿರುಳ್ಗನ್ನಡದ ಅರ್ಥಕೋಶ, ಮೇಳನುಡಿ- ಜೋಡುನುಡಿ- ಮಾರುನುಡಿ- "ದೇಸಿ"ಯ ನುಡಿಗಟ್ಟು (idioms)- ಮೊದಲಾದವುಗಳ ಪ್ರತ್ಯೇಕ ಕೋಶಗಳು, ಅಚ್ಚಗನ್ನಡ ಶಬ್ದೋತ್ಪತ್ತಿ- ನಿಘಂಟು, ಒಗಟು- ಗಾದೆ- ಬೆಡಗು- ಸುಭಾಷಿತಗಳ ಸಂಗ್ರಹಗಳು, ವಿವಿಧ ಜ್ಞಾನಕೋಶಗಳು ಇವು ಅತ್ಯವಶ್ಯವಾಗಿವೆ.

ಜನಪದ ಸಾಹಿತ್ಯ ಸಂಗ್ರಹ ಕಾರ್ಯವು ವಿಲಂಬವಾದರೆ ಈ ಆಸ್ತಿ ನಮ್ಮ ಕೈಬಿಟ್ಟು ಹೋಗುವ ಸಂಭವವಿದೆ. ಕೋಶ- ನಿಘಂಟುಗಳ ಕಾರ್ಯಕ್ಕಿಂತ ಜಾನಪದ ಸಾಹಿತ್ಯ ಸಂಗ್ರಹದ ಕಾರ್ಯವು ಮೊದಲು ಹಾಗೂ ಹೆಚ್ಚು ತೀವ್ರವಾಗಿ ಸಾಗುವುದು ಅತ್ಯಗತ್ಯ.

ಲಿಪಿ-ಸಂಸ್ಕರಣ

ಈ ವರೆಗೆ ವಿವರಿಸಿದ ಗ್ರಂಥರಾಶಿಯು ಬಹು ತ್ವರಿತವಾಗಿಯೂ ವಿಪುಲವಾಗಿಯೂ ಉದಿಸಬೇಕಾದರೆ ಕನ್ನಡದ ಲೇಖನ ಮತ್ತು ಮುದ್ರಣ ಕಲೆಯಲ್ಲಿ ಮೊದಲು ಸುಧಾರಣೆಯಾಗಬೇಕು. ಟೈಪ್‌ರಾಯಿಟರ್- ಲಿನೋಟೈಪುಗಳಂಥ ಆಧುನಿಕ ಯಂತ್ರ ಸೌಕರ್ಯಗಳ ಲಾಭವು ಕನ್ನಡಕ್ಕೆ ಇನ್ನೂ ದೊರೆಯದಿರುವುದು ನಮ್ಮ ಪ್ರಗತಿಗೆ ದೊಡ್ಡದೊಂದು ಕಾಲ್ತೊಡಕು.

ನಮ್ಮ ಲಿಪಿಯ ಅಂದಚಂದವು ಕೆಡದಂತೆ ಅದು ಯಂತ್ರ ಸೌಕರ್ಯಕ್ಕೊಗ್ಗುವಂತೆ ಅದರಲ್ಲಿ ಮಾರ್ಪಾಡು ನಡೆಯಬೇಕು. ಈ ಬಗ್ಗೆ ನಡೆದಿರುವ ಪ್ರಯತ್ನಗಳು ಬೇಗನೇ ಸಿದ್ಧಿಯನ್ನೈದಬೇಕು.

ನನ್ನ ಕ್ರೈಸ್ತ ಬಾಂಧವರಿಗೊಂದು ಮಾತು

ಈ ಸಂದರ್ಭದಲ್ಲಿ ನನ್ನ ಕ್ರೈಸ್ತ-ಬಾಂಧವರಿಗೊಂದು ಮಾತನ್ನು ಹೇಳಬಯಸುತ್ತೇನೆ. ನನ್ನ ಪ್ರೀತಿಯ ಬಾಂಧವರೇ! ಯೇಸುಕ್ರಿಸ್ತನ ತತ್ವಗಳೆಲ್ಲ ಅನುಭಾವದವು. ಪಾಶ್ಚಾತ್ಯರಲ್ಲಿ ನಿಜವಾದ ಕೆಲವು ಕ್ರೈಸ್ತ ಭಕ್ತರು ಮಹಾತ್ಮರು ಬದುಕಿದ್ದ ಕಾಲದಲ್ಲಿ ಮಹಾನುಭಾವ ಯೇಸುವಿನ ತತ್ವಗಳನ್ನು ಕೃತಿಯಲ್ಲಿ ಕಾಣಲು ಭಾರತಕ್ಕೆ ಬರಬೇಕಾಗುತ್ತಿತ್ತು. ಭಾರತದ ಅಂಗವಾದ ಕನ್ನಡನಾಡು ಅನುಭಾವದ ಬೀಡು, ಕನ್ನಡನುಡಿ ಅನುಭಾವದ ಕಿಡಿ. ಹೀಗಾಗಿ

–೬ನೆಯ ಪುಟಕ್ಕೆ

ದರ್ಬಾನ್ ಗಲಭೆಯ ಹಿನ್ನೆಲೆ

ವರ್ಣವೈವಿಧ್ಯ—ಬಿಳಿಯರ ಶ್ರೇಷ್ಠೋಹಂಬುದ್ಧಿ—ಸವರ್ಣರ ಕಾಫರಜೀವನ—ಆಫ್ರಿಕನ್ನರ ಅನೈಕಮತ್ಯ ಮತ್ತು ಅಜ್ಞಾನ—ಭಾರತೀಯರ ಬಗ್ಗೆ ಜೂಲೂ ಭಾವನೆ—ಸರಕಾರದ ಅನಾಗರಿಕ ಧೋರಣ

ವರ್ಣಸಂಕರದ ನೆಲೆವೀಡಾದ ದಕ್ಷಿಣ ಆಫ್ರಿಕದಲ್ಲಿ ಡಾ. ಮಾಲನ್ನರ ಸರಕಾರವು ಮೊದಲಿಂದಲೂ ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಶ್ವೇತೇತರರನ್ನು ಪ್ರತ್ಯೇಕವಾಗಿ ಅನಾನುಕೂಲ ಪರಿಸ್ಥಿತಿಯಲ್ಲಿ ಇಡುತ್ತ ಬಂದ ಭೇದನೀತಿಯನ್ನು ಮತ್ತಷ್ಟು ಉಗ್ರತರವಾಗಿ ಅನುಸರಿಸಲು ಸೊಂಟಕಟ್ಟಿ ನಿಂತಿರುವುದರ ಜೊತೆಗೆ ಕುಹಕಿಗಳು ಆಫ್ರಿಕನ್ನರ ಹಿತ್ತಾಳೆಕಿವಿಗೆ ವಿಷವೂದಿ ಭಾರತೀಯರ ಬಗ್ಗೆ ದ್ವೇಷಹುಟ್ಟಿಸುವುದೂ ಜೂಲೂ ಜನರ ವಿಚಿತ್ರ ಮನೋವೃತ್ತಿ ಮತ್ತು ಮಂದಮತಿತ್ವಗಳೂ ದರ್ಬಾನ್ ಗಲಭೆಗೆ ಕಾರಣಗಳಾದವೆಂದು ತಿಳಿದುಬರುತ್ತದೆ.

ದಕ್ಷಿಣ ಆಫ್ರಿಕವು ನಾಲ್ಕು ಪ್ರಾಂತಗಳ ಒಂದು ಒಕ್ಕೂಟ. ಡಚ್ ಈಸ್ಟ್ ಇಂಡಿಯಾ ಕಂಪನಿಯವರು ಇಟ್ಟ ಡಚ್ಚರು, ಹಾಟೆಂಟಾಟರು, ಡಚ್ ಪ್ರದೇಶಗಳಿಂದ ಕರೆತಂದ ಏಶಿಯನ್ ಅಪರಾಧಿಗಳು, ಭಾರತದಿಂದ ಬಹಿಷ್ಕೃತರಾದ ದೊಡ್ಡ ದೊಡ್ಡ ರಾಜಕೀಯ ಅಪರಾಧಿಗಳು, ಹಾಲೆಂಡಿನ ಅನಾಥಾಲಯದಿಂದ ವಲಸೆ ಬಂದ ತರುಣಿಯರು ಫ್ರೆಂಚ್ ಹ್ಯೂಗನಾಟರು ಮತ್ತು ಇತರ ಗುಳೇ ಬಂದ ಡಚ್ಚರು ಇವರೇ ಹಲವಾರು ಶತಕಗಳ ಹಿಂದೆ ದಕ್ಷಿಣ ಆಫ್ರಿಕದಲ್ಲಿ ತಳವೂರಿದವರು.

ವಿಯನ್ನದ ಕಾಂಗ್ರೆಸ್ಸಿನ ನಂತರ ಬ್ರಿಟಿಶ್ ಗುಳೇಕಾರರು ಬರತೊಡಗಿದರು. ಆಗ ಅಂದರೆ ೧೮೧೫ರಲ್ಲಿ ಹಾಲೆಂಡು ಬ್ರಿಟಿಶರಿಗೆ ದ. ಆಫ್ರಿಕದ ಬಟೇವಿಯನ್ ಪ್ರಜಾರಾಜ್ಯವನ್ನು ಒಪ್ಪಿಸಿತು. ಕ್ರಿಮಿಯದ ಯುದ್ಧದಲ್ಲಿ ಬ್ರಿಟಿಶರೊಟ್ಟಿಗೆ ಹೋರಾಡಿದ ಜರ್ಮನರಿಗೆ ಅಲ್ಲಿ ಸ್ಥಳಮಾಡಿ ಕೊಡಲಾಯಿತು. ೧೮೬೦ ಮತ್ತು ಅನಂತರ ಕಬ್ಬಿನ ಗದ್ದೆಗಳಲ್ಲಿ ಕೆಲಸಮಾಡಲು ಭಾರತೀಯರನ್ನು ನಾತಾಳಕ್ಕೆ ಕರೆಲಾಯಿತು. ಭಾರತೀಯರು ಮಧ್ಯಯುಗದ ಕಾಲದಿಂದಲೂ ಮಸಾಲೆ ಸಾಮಾನು ಮುಂತಾದವುಗಳನ್ನು ಜಾಂಜಿಬಾರಿನ ಮೂಲಕ ಆಫ್ರಿಕಕ್ಕೊಯ್ದು ಮಾರುವ ರೂಢಿಯಿಟ್ಟುಕೊಂಡಿದ್ದುದಲ್ಲದೆ ಅಂದಿನಿಂದ ಅಲ್ಲಲ್ಲಿ ನೆಲೆಸುತ್ತಲೂ ಬಂದಿದ್ದರು. ಅಂದು ಹೇಗೋ ಇಂದೂ ಹಿಂದೀಯರು ಸಾಮಾನ್ಯವಾಗಿ ವ್ಯಾಪಾರವೃತ್ತಿಯಲ್ಲಿ ಇರತಕ್ಕವರಾಗಿದ್ದಾರೆ. ಇವರಲ್ಲದೆ ಮೂಲನಿವಾಸಿಗಳ ದಾಸಸ್ತ್ರೀಯರಿಗೂ ಯುರೋಪ್ಯರಿಗೂ ಹುಟ್ಟಿದ ಮಿಶ್ರಕುಲದವರೂ ಅಲ್ಲಿ ಕಾಣಸಿಗುತ್ತಾರೆ.

ಕುಲಭೇದ ನೀತಿಯಲ್ಲೂ ಒಂದು ವಿಚಿತ್ರ ರೀತಿ ದಕ್ಷಿಣ ಆಫ್ರಿಕದಲ್ಲಿ ಕಂಡುಬರುತ್ತದೆ. ಅಮೇರಿಕನ್ನರಿಗಿಂತ ದ. ಆಫ್ರಿಕದ ಬಿಳಿಯರು ಸವರ್ಣರನ್ನು ಹೆಚ್ಚು ದಯೆಯಿಂದ ನೋಡುತ್ತಾರೆಂದು ಐರಿಶ್ ಬಾಕನ್ನನು ಬರೆಯುತ್ತಾನೆ. ಅಲ್ಪಸ್ವಲ್ಪ ಕರಿಯತನ ಕುಲದಲ್ಲಿದ್ದರೆ ದ. ಆಫ್ರಿಕ ಕ್ಷಮಿಸುತ್ತದೆ. ಆದರೆ ಅಮೇರಿಕದಲ್ಲಿ ಅದನ್ನು ಬೇಟೆಯಾಡಿ ಬಿಸುಡಲಾಗುತ್ತದೆ ಎನ್ನುತ್ತಾನೆ ಅವನು ಕರಿಯಕುಲಕ್ಕೆ ಸೇರಿದವನೆಂಬ ಸಂಶಯ ಬಂದರೂ ತೊಗಲು ಬೆಳ್ಳಗಿದ್ದರೆ ದ. ಆಫ್ರಿಕದಲ್ಲಿ ಹೇಗೂ ಪಾರಾಗಬಹುದು! ಅಂಥವನಿಗೆ ಬಿಳಿಯರ ನಡುವೆ ಉದ್ಯೋಗ ಸಿಗಬಹುದು, ಬಿಳಿಯರೊಡನೆ ವಿವಾಹವಾಗಬಹುದು. ಬೆಳ್ಳಗಿದ್ದದ್ದೆಲ್ಲ ಹಾಲೆಂಬುದೇ ಅಲ್ಲಿಯ ಬಿಳಿಯರ ದರ್ಶನವೆಂದು ತೋರುತ್ತದೆ! ಒಮ್ಮೊಬ್ಬಾತ (ಇಲ್ಲವೆ ಒಬ್ಬಾಕೆ) ಕಪ್ಪೆಂದು ಕಾಣಿಸಿದ್ದೇ ಆದರೆ ಕೃಷ್ಣತನು ಕಾಫರನಿಗೆ ಬರತಕ್ಕ ಸರ್ವ ದುರ್ಗತಿಗಳೂ ಅವನನ್ನು ಸುತ್ತುವರಿಯುವುವು; ಅವನು ಒಳ್ಳೆಯ ಹೊಟೇಲಿಗೆ ಹೋಗಲಾರ, ಬಿಳಿಯರೊಡನೆ ಪ್ರಯಾಣ ಮಾಡಲಾರ, ಯಾವುದಾದರೊಂದು ನಗರದಲ್ಲಿರಬೇಕಾದರೆ ಅವನಿಗೊಂದು "ಪಾಸ್" ಇರಬೇಕು; ಅಲ್ಲಿ ಅವನು ಉಗ್ರವಾದ ನಿರ್ಬಂಧಗಳಿಗೆ ಒಳಗಾಗಿ ಬಾಳಬೇಕು; ಅವನಿಗೆ ಮತಾಧಿಕಾರವಿಲ್ಲ, ಉತ್ತಮ ಮದ್ಯವನ್ನು ಯಾರೂ ಅವನಿಗೆ ಮಾರರು. ಬೃಹಸ್ಪತಿಯಿರಲಿ, ಕುಬೇರನಿರಲಿ— ಔದ್ಯಮಿಕ, ಸಾಮಾಜಿಕ, ಶೈಕ್ಷಣಿಕ ಅಥವಾ ಇತರ ಕ್ಷೇತ್ರಗಳಲ್ಲಿ ಅವನು ಸ್ವತಂತ್ರ ನಾಗರಿಕನಂತೆ ಬಾಳಲು ಅರ್ಹನಾಗುವದಿಲ್ಲ.

ಬಿಳಿಯರೇ ಆಳಲರ್ಹರು

ಬಿಳಿಯರೇ ಆಳಬೇಕೆಂಬುದು ಅಲ್ಲಿಯ ಬಿಳಿಯ ಸರಕಾರದ ಧೋರಣ ಮತ್ತು ಅದು ಕುಲಶುದ್ಧಿಯನ್ನು ಕಾಪಾಡುವುದರಲ್ಲಿ ಹಿಟ್ಲರೀ ಕ್ರಮವನ್ನು ಅನುಸರಿಸಲು ಸದಾ ಸಿದ್ಧವಿದೆ. ಕರಿಯರಿರುವುದು ಬಿಳಿಯರಿಗಾಗಿ ಎಂದು ಅದರ ಮತ. ಶ್ವೇತೇತರರೆಲ್ಲರೂ ಕಾಫರರು. ಅವರಿಗೆ ಚಿಕ್ಕಪುಟ್ಟ ಬಂಜೆ ನೆಲವನ್ನು ಅಲ್ಲಲ್ಲಿ ಕೊಡಲಾಗಿದೆ. ಅವರು ನೂರಕ್ಕೆ ೭೩ ರಷ್ಟಿದ್ದರೂ ಅವರಿಗೆ ಯಾವ ಸ್ಥಾನಮಾನವೂ ಇಲ್ಲ. ಆದರೆ ಹಕ್ಕುಗಳಿಲ್ಲ ದಾಕ್ಷಿಣ್ಯ ಬಾಧ್ಯತೆ ಕಡಿಮೆಯಿದೆ ಎಂದು ಯಾರೂ ತಿಳಿದುಕೊಳ್ಳಬಾರದು. ಅವರು ಬಿಳಿಯರಂತೆಯೇ ತೆರಿಗೆ ಕೊಡಬೇಕು. ಅದು ಸಾಧ್ಯವಾಗದಲ್ಲಿ ಅವರು ಗಣಿಗಳಲ್ಲಿ ದುಡಿಯಲು ಹೋಗಬೇಕು ಇಲ್ಲವೆ ನಗರಗಳಲ್ಲಿ ಹೋಗಿ ಕೂಲಿ ಮಾಡಬೇಕು ಹಾಗಾಗಿ ಅವರು ಜೋಹಾನ್ಸಬರ್ಗಿನ ರಸ್ತೆಗಳಲ್ಲಿ ಕುಚೇಲರಾಗಿ—ಭಾರೀ ಹೆಚ್ಚಿನ ಸಂಬಳವೆಂದರೆ—ತಿಂಗಳಿಗೆ ೫ ಪೌಂಡುಗಳನ್ನು ಸಂಪಾದಿಸಿಕೊಂಡು ಹರಕುಮುರುಕಾದ ಬಯಲುನೆಲದ ಗುಡಿಸಲುಗಳಲ್ಲಿ ಕಾಫರ ರೊಟ್ಟಿ ಮತ್ತು ಕಾಫರ ಮದ್ಯವನ್ನು ಸೇವಿಸಿ ಬದುಕಬೇಕು.

ಆಫ್ರಿಕನ್ನರ ಅಜ್ಞಾನ

ಕುಲಭೇದ ನೀತಿಯ ಮೂಲ ದ್ರಷ್ಟಾರನು ಜನರಲ್ ಹರ್ಟ್ಜೋಗ್. ಡಾ ಮಾಲನ್ನರೀಗ ಅದನ್ನು ಅವಾಲಿನಲ್ಲಿ ತರುವ ಅವ್ಯರ್ಗಳಾಗಿ ಸೊಂಟಕಟ್ಟಿನಿಂತಿದ್ದಾರೆ. ಈ ದುರ್ನಯದ ವಿರುದ್ಧವಾಗಿ ದ. ಆಫ್ರಿಕದಲ್ಲಿ ಗಾಂಧಿಯವರು ೨೧ ವರ್ಷಗಳ ಕಾಲ ಹೋರಾಡಿದ್ದು ಜಗದ್ವಿಖ್ಯಾತವಾಗಿದೆ ಆದರೂ ಅಲ್ಲಿಯ ಬಿಳಿಯರ ಮದ ಇಳಿದಿಲ್ಲ ಮೊನ್ನಿನ ದರ್ಬಾನ್ ಗಲಭೆಗೆ ಕಾರಣವನ್ನು ಹೇಳುವಾಗ ಎಲ್ಲರೂ ಸವರ್ಣರಲ್ಲಿಯ ಈ ರೀತಿಯ ವೈರ ಆಶ್ಚರ್ಯಕರ ಎನ್ನುತ್ತಾರೆ. ಇದಕ್ಕೆ ಆಫ್ರಿಕನ್ನರ ಮೂಲಭೂತ ಅಜ್ಞಾನವೇ ಪ್ರಧಾನ ಕಾರಣವೆಂಬುದನ್ನು ದರ್ಬಾನಿನ ಪತ್ರಕಾರನೊಬ್ಬನು "ದಿ ನ್ಯೂ ಸ್ಟೇಟ್ಸ್‌ಮನ್ ಎಂಡ್ ನೇಶನ್ಸ್" ನಲ್ಲಿ ಬರೆದಿರುತ್ತಾನೆ ಆಫ್ರಿಕನ್ನರಲ್ಲಿಯ ನೀಗ್ರೋ ಜೂಲೂ ಮೊದಲಾದ ಜನರ ಸಂಘಟನೆಗಳು ಎರಡಿವೆ. ಒಂದು ಸವರ್ಣರ ರಾಷ್ಟ್ರೀಯ ಸಂಘ. ಇದು ಸರಕಾರದ ಧೋರಣವನ್ನು ವಿರೋಧಿಸದೆ ಸಲಹೆ ಕೊಡುವ ಅಪ್ರಯೋಜಕ ಕೆಲಸ ಮಾಡುತ್ತಿದೆ ಇನ್ನೊಂದು ಈ ಸಂಘದ ಸವರ್ಣ ಮಂತ್ರಣಸಮಿತಿಯ ವಿರುದ್ಧವಾಗಿ ಸಂಘಟಿತವಾದ ಸಂಘ. ಈ ಎರಡನೆಯದು ಸರ್ವರಿಗೂ ಸಮಾನವಾದ ಹಕ್ಕು ಬಾಧ್ಯತೆಗಳಿರಬೇಕೆಂಬ ಧೋರಣೆ ಹಿಡಿದಿದೆ. ಇದರಲ್ಲಿ ಪ್ರಗತಿಪರ ಬುದ್ಧಿವಂತರು ಸದಸ್ಯರಾಗಿದ್ದಾರೆ ಹೀಗೆ ಒಕ್ಕಟ್ಟಿಲ್ಲದ ಆಫ್ರಿಕನ್ನರಲ್ಲಿ ಬಿಳಿಯರು ಅತಿ ಸುಲಭವಾಗಿ ಭೇದಬೀಜವನ್ನು ಬಿತ್ತಲು ಶಕ್ತರಾದರು.

ಜೂಲೂ ಜನರ ಚಿತ್ತವೃತ್ತಿ

ಮಂದಮತಿಗಳಾದ ಜೂಲೂ ಜನರು ಬಿಳಿಯರೆಂದರೆ ತೋಳ್ಬಲದಿಂದ ತಮ್ಮನ್ನು ಗೆದ್ದು ಆಳುತ್ತಿರುವ ವೀರ ಕುಲದವರಾದುದರಿಂದ ಸ್ವಾಭಾವಿಕವಾಗಿ ಅವರು ವಿಶೇಷ ಹಕ್ಕುಗಳಿಗೆ ಅರ್ಹರೆಂದು ತಿಳಿದಿದ್ದಾರಂತೆ. ಹಾಗಲ್ಲದೆ ಭಾರತೀಯರು ಜರ್ಮನಿಯ ಯೆಹೂದಿಗಳಂತೆ, ಇಂಡೋನೇಶಿಯದಲ್ಲಿಯ ಅರಬರಂತೆ, ಮಲಯದಲ್ಲಿಯ ಚೀನೀಯರಂತೆ ಶ್ವೇತೇತರರಿದ್ದೂ ಕೇವಲ ಯುಕ್ತಿಬಲದಿಂದ ತಮಗೆ ಟೊಪ್ಪಿ ಹಾಕಿ ಹಣಗಳಿಸಿದ ಲಾಭಬಡಕರು ಎಂದು ತಿಳಿದು ಆ ಜನರು ಮತ್ಸರಗ್ರಸ್ತರಾಗಿದ್ದಾರೆಂದು ತಿಳಿಯುತ್ತದೆ. ಸವರ್ಣರಾದರೂ ಭಾರತೀಯರು ತಮಗಿಂತ ಹೆಚ್ಚಿನವರೆಂಬ ಠೆಂಕಾರದಿಂದ ವರ್ತಿಸುತ್ತಾರೆಂದು ಅವರ ಭಾವನೆ. ಈ ಬೆಂಕಿಗೆ ಕಿಡಿಗೇಡಿ ಯುರೋಪ್ಯರು ಆಗೀಗ ಗಾಳಿ ಹಾಕುತ್ತಾರೆ. ಸರಕಾರೀ ಅಧಿಕಾರಿಗಳು ಕಂಡೂ ಕಾಣದ ಅರ್ಧ ಔದಾಸೀನ್ಯವನ್ನು ತಳೆದಿದ್ದಾರೆ. ಇಂಥ ವಾತಾವರಣದಲ್ಲಿ ಭಾರತೀಯ ವ್ಯಾಪಾರಿಯೊಬ್ಬನು ಕಾರಣಾಂತರದಿಂದ ಒಬ್ಬ ಜೂಲೂ ಹುಡುಗನಿಗೆ ಪೆಟ್ಟು ಕೊಟ್ಟದ್ದೇ ಆ ಕ್ರೂರಾವೇಶದ ಕೊಲೆಸುಲಿಗೆಗೆ ಪ್ರಚೋದಕವಾಯಿತು, ಕುಂಟು ನೆವವಾಯಿತು. ಬಾಯಿಂದ ಬಾಯಿಗೆ ಅತ್ಯುಕ್ತಿದರ್ಪಣದಲ್ಲಿ ಆ ಸುದ್ದಿ ಸಹಸ್ರಗುಣ ವಿಕಾಸಗೊಂಡಿ ಕ್ಷಣಾರ್ಧದಲ್ಲಿ ಕಾಳ್ಗಿಚ್ಚಿನಂತೆ ಹಬ್ಬಿ ಜಾತಿಯುದ್ಧ ಆರಂಭವಾದುದು ಹಲವರಿಗೆ ಕಲ್ಪನಾತೀತವೆನಿಸಿತು. ಉಕ್ತ ಪತ್ರಕಾರನೆನ್ನುವಂತೆ ಸರಕಾರವು ತೊಡೆತಟ್ಟಿ ನಿಂತಿದೆ [illegible] ಬಿಳಿಯರಿಗೆ ಶತಮಾನಗಳಿಂದ ಸಾಧ್ಯವಾದ [illegible] ಯಾರು [illegible] ತಮ್ಮ ಸಂಪತ್ತನ್ನು ಕಾಪಾಡಿ [illegible] ರೋಗಿ ಬಾಳುತ್ತಿದ್ದಾರೆ [illegible] ಹೇಳುವ ಹಾಗೆ [illegible] ಆ [illegible] ಯಕ್ಷಪ್ರಶ್ನೆ, ಹಾಗೆ ದ್ವೇಷವನ್ನು ಬೆಳೆಸಲು ಗುಪ್ತವಾಗಿ ಯತ್ನಿಸುವ [illegible] ರಾದ ಪ್ರಚಾರವನ್ನು ಪಡೆಯುತ್ತಲೇ [illegible] ಮೇಲೆ ಪತ್ರೇಯ ಹೇಳಬೇಕು? [illegible] ಮೇಲೆ ಪುನರ್ವಸತೀಕರಣದ ಸಿದ್ಧತೆ [illegible] ಬಂದಿತು. [illegible] ಯರೂ ಆಫ್ರಿಕನ್ನರೂ ಒಮ್ಮತದಿಂದ [illegible] ಪ್ರತಿಭಟಿಸಿದ್ದೂ ಉಂಟು. ಈ ಪ್ರಕರಣ [illegible] ಯರ ಕಾರ್ಯವನ್ನು ಬದಿಗೊತ್ತಿ ಬುದ್ಧಿಯುಳ್ಳ ಬಹುಸಂಖ್ಯ ಆಫ್ರಿಕನ್ನರು ಹಿಂದೀಯರತ್ತ ಸ್ನೇಹಹಸ್ತ ನೀಡಿದ್ದು ಪ್ರಕಾಶವಾಯಿತು ಆದರೆ ಮಾಲನ್ನರ ಮನೋಮಾಲಿನ್ಯವೇನು [illegible] ದೀತು? ಅವರದು ಕುರುಡು ಹಿಡಿದ [illegible] ತಾ ಕಂಡದ್ದಕ್ಕೇ ಮೂರು ಕೋಡಿದೆ ಎಂಬ ಶಾಠ್ಯ. ೨೦ ಲಕ್ಷ ಬಿಳಿಯರು ೮೦ ಲಕ್ಷ ಸವರ್ಣರನ್ನು ಅಸ್ಪೃಶ್ಯ ಗುಲಾಮರಂತೆ ನಡೆಸಿಕೊಳ್ಳಬೇಕು ಮತ್ತು ಹಕ್ಕುಗಳಿಗಾಗಿ ಹೋರಾಡಲು ಯಾರಾದರೂ ಹೊರಟರೆ ಅವರನ್ನು ಕಮ್ಯೂನಿಸ್ಟರೆಂದು ಬಹಿಷ್ಕರಿಸಬೇಕು— ಇದೇ ಮಾಲನ್ನರ ವೈಜ್ಞಾನಿಕ ಮಾರ್ಗ. ಸಂಯುಕ್ತ ರಾಷ್ಟ್ರಸಂಘದ ಬುದ್ಧಿವಾದವನ್ನು ಕೂಡ ಕಡೆಗಣಿಸಿದ ಅವರಿಗೆ ಇನ್ನಾರು ಬುದ್ಧಿ ಹೇಳಬಲ್ಲರು? ಇಂಡೋನೇಶಿಯದ ಬಗ್ಗೆ ಒಮ್ಮತಕ್ಕೆ ಬಂದ ಏಶಿಯನ್ ರಾಷ್ಟ್ರಗಳು ದಕ್ಷಿಣ ಆಫ್ರಿಕದ ವರ್ಣಭೇದ ನೀತಿಯನ್ನು ನಿರ್ಮೂಲಗೊಳಿಸಲು ಉಪಾಯಾಂತರವನ್ನು ಹುಡುಕಿ ಒಕ್ಕಟ್ಟಿನಿಂದ ಕಾರ್ಯ ಮಾಡಲಾರವೆ? ಸವರ್ಣರಿಗಿನ್ನು ಅನ್ಯಮಾರ್ಗವಿಲ್ಲ ಭಾರತದ ಮುಖ್ಯಮಂತ್ರಿ ಪಂಡಿತ ನೆಹರೂರಿಗೇ ಇಂಥ ಪ್ರಶ್ನೆಗಳಲ್ಲಿ ಕಾಳಜಿ; ಕೈಯಿಕ್ಕದೇ ಇಲ್ಲವೆ ಮತ್ತಾರು [illegible] ಸದ್ಯ: ಈ ಕೆಲಸವನ್ನು ಸಾಧಿಸಲು ಶಕ್ತರಾಗಲಾರರು. ಇನ್ನೊಂದು ದಿಲ್ಲಿ ಪರಿಷತ್ತು ವರ್ಣಭೇದ ಭೂತದ ಉಚ್ಚಾಟನೆಗಾಗಿ ಕೂಡುವುದು ಅತ್ಯವಶ್ಯಕವೆಂಬ ಪಕ್ಕ ಶ್ವೇತೇತರರ ಹಿಂತವಾದ ಏಶಿಯದ ಯಾವ ಜನಾಂಗ ರಾಷ್ಟ್ರವೂ ಒಪ್ಪದಿರದು.

—ಅರ್ಜುನ

ಡಾ. ಸನ್ ಫೋರ ರಾಜೀನಾಮೆ

ಚೀನದ ಮುಖ್ಯ ಮಂತ್ರಿಗಳಾದ ಡಾ. ಸನ್ ಫೋರು ಈ ದಿನ ಮುಂಜಾನೆ ರಾಜೀನಾಮೆಯಿತ್ತರು ಡಾ. ಸನ್ ಫೋರು ಚೀನದ ಯುಆನದಲ್ಲಿ (ಶಾಸನ ಸಭೆ) ಅಧ್ಯಕ್ಷರಾದ ಜನರಲ್ ಲಿ ಟೆಂಗ ಚೀನರು ತಮ್ಮ ಮಂತ್ರಿಮಂಡಳದ ರಾಜೀನಾಮೆಯನ್ನು ಸ್ವೀಕರಿಸುವರೆಂದು ಸಾರಿದರು. ಸವಸ್ಯರು ಡಾ. ಸನ್ ಫೋರನ್ನು ಅಭಿನಂದಿಸಿದರು.

ಕಲಬುರ್ಗಿಯಲ್ಲಿ

೩೨ನೆಯ ಕನ್ನಡ ಸಾಹಿತ್ಯ ಸಮ್ಮೇಲನ

ಏಕೀಕರಣ ಪರಿಷತ್ತಿನಲ್ಲಿ ಕಿಡಿಗಳು— ಮೈಸೂರು ವಿಲಯನದ ಬೇಡಿಕೆ— ಹೈದರಾಬಾದದ ವಿಭಜನೆಯಾಗಲಿ



ಶ್ರೀ ಶರಣಗೌಡ ಇನಾಮದಾರರು
ಏಕೀಕರಣ ಪರಿಷತ್ತಿನ ಸ್ವಾಗತಾಧ್ಯಕ್ಷ

ಮುವ್ವತ್ತೆರಡನೆಯ ಕನ್ನಡ ಸಾಹಿತ್ಯ ಸಮ್ಮೇಲನ ರಿವರೆಂಡ ಉತ್ತಂಗಿಯವರ ಅಧ್ಯಕ್ಷತೆಯಲ್ಲಿ ಕಲಬುರ್ಗಿಯಲ್ಲಿ ಮೊನ್ನೆ ತಾ ೫-೬-೭ ದಿನಗಳಲ್ಲಿ ಸಾಂಗವಾಯಿತು. ಅದರ ಅಂಗವಾಗಿ ಎಂದಿನಂತೆ ಸಾಹಿತ್ಯ ಗೋಷ್ಠಿ, ಮಹಿಳಾ ಗೋಷ್ಠಿಗಳಲ್ಲದೆ ಏಕೀಕರಣ ಪರಿಷತ್ತು ಈ ಪ್ರದರ್ಶನಗಳೂ ಜರುಗಿದವು. ಪ್ರತಿಷ್ಠಿತ ಸಾಹಿತಿಗಳು, ಮುಂದಾಳುಗಳು, ಪ್ರತಿನಿಧಿ ಪ್ರೇಕ್ಷಕರಿಂದ ಸಭಾಮಂಟಪ ಕಿಕ್ಕಿರಿದು ಹೋಗಿತ್ತು. ಈ ಅಧಿವೇಶನಕ್ಕಾಗಿ ವಿಶೇಷವಾಗಿ ಏರ್ಪಡಿಸಲ್ಪಟ್ಟಿದ್ದ ಮಂಟಪಕ್ಕೆ ವಲ್ಲಭನಗರವೆಂದ ನಾಮಕರಣ ಮಾಡಲ್ಪಟ್ಟಿತ್ತು.

ಹೈದರಾಬಾದ ಕನ್ನಡಿಗರಿಗೆ ಹೊಸತಾಗಿ ದೊರೆತ ಸ್ವಾತಂತ್ರ್ಯದ ಸ್ಫೂರ್ತಿ ಸಮ್ಮೇಲನದಲ್ಲಿ ಸ್ಪಷ್ಟವಾಗಿ ಕಾಣಬರುತ್ತಿತ್ತು. ಅನೇಕ ವರ್ಷಗಳ ಹಿಂದೆ ದಿವಂಗತ ಬಿ. ಎಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಸಮ್ಮೇಲನ ಇದೇ ಊರಲ್ಲಿ ಜರಗಿದಾಗಿನ ಬಿಗುಪಿನ ವಾತಾವರಣ ಈಗ ಲೇಶವಾದರೂ ಕಾಣಬರುತಿರಲಿಲ್ಲ. ಏಕೀಕರಣ ಸಮ್ಮೇಲನದಲ್ಲಿ ಹೈದರಾಬಾದವನ್ನು ಭಾಷಾನ್ವಯವಾಗಿ ಒಡೆದು ಹಂಚಬೇಕೆಂಬ ಬೇಡಿಕೆ ಮುಂದೊಡ್ಡಲ್ಪಟ್ಟರೂ ಉದ್ಘಾಟಕ, ಸ್ವಾಗತಾಧ್ಯಕ್ಷರೇ ಮೊದಲಾದವರ ಭಾಷಣಗಳಲ್ಲಿ ನಿಜಾಮರ ಸ್ವೈರರಾಜ್ಯ ಕಾಲದ "ವಿಷಪೂರಿತ" ವಾತಾವರಣದ ಉಲ್ಲೇಖಗಳಿದ್ದರೂ ಹೊಸ ನಿರ್ಭಯತೆಗೆ ಪ್ರದರ್ಶನಗಳಾಗಿದ್ದವು. ಹಳ್ಳೇರಿ, ಪೋಲೀಸ ಬ್ಯಾಂಡಿನವರೇ "ಉದಯವಾಗಲಿ ನಮ್ಮ ಚಲುವ ಕನ್ನಡನಾಡು" ಗೀತೆಯನ್ನು ಸಮ್ಮೇಲನಾರಂಭದಲ್ಲಿ ಬಾರಿಸಿದರೆಂದ ಮೇಲೆ ಕೇಳಬೇಕೆ ?

ಶ್ರೀ ಜಿನರಾಜ ಹೆಗಡೆಯವರ ಹಸ್ತದಿಂದ ಎಲ್ಲಕ್ಕೂ ಮೊದಲು ಒಕ್ಕೂಟ ಧ್ವಜದ ಆರೋಹಣವಾಯಿತು. ಹೈದರಾಬಾದ ಸಂಸ್ಥಾನದ ಕಂದಾಯ ಮಂತ್ರಿ ಶ್ರೀ ಮಂಗಲಂ ಶೇಷಾದ್ರಿ, ಕಲಬುರ್ಗಿ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ ಘಾಟಗೆ ಮೊದಲಾದ ಅಧಿಕಾರಿಗಳೂ ರೆ. ಉತ್ತಂಗಿ, ಶ್ರೀ ಚಂದ್ರಶೇಖರ ಶಾಸ್ತ್ರಿ ಮೊದಲಾದ ಸಾಹಿತಿ ಪ್ರತಿಷ್ಠಿತರೂ ಹಾಜರಿದ್ದರು.

ಪ್ರಾಂತೀಯತೆಗೆ ಮಿತಿಯುಂಟು

ರಾಜ ಸೇವಾಸಕ್ತ ಮಂಗಲಂ ಶೇಷಾದ್ರಿಯವರು ಸಮ್ಮೇಲನದ ಉದ್ಘಾಟನೆ ಮಾಡಿದರು. ಶ್ರೀ ತಿರುಮಲೆ ತಾತಾಚಾರ್ಯ ಶರ್ಮರು ಅವರ ಪರಿಚಯ ಮಾಡಿಕೊಟ್ಟ ನಂತರ ಶ್ರೀ ಶೇಷಾದ್ರಿಯವರು ಕರ್ನಾಟಕದಲ್ಲಿ ಕಲಬುರ್ಗಿಯ ಹಿರಿಮೆಯನ್ನು ಬಣ್ಣಿಸಿ ಕನ್ನಡ ಸಂಸ್ಕೃತಿಯ ಪುನರುಜ್ಜೀವನಕ್ಕೆ ಪ್ರತಿಕೂಲವಾಗಿದ್ದ ಸಂಸ್ಥಾನದ "ವಿಷಪೂರಿತ ವಾತಾವರಣ" ಹೋಗಿ, ಕಳೆದುಹೋದ ಮುಗುಳು ಕೈಗೆ ಬಂದು ನಾವು "ಆನಂದ ಕಂದಿಲ"ಗಳಾಗಿರುವೆವೆಂದರು. ಸಂಸ್ಕೃತಿಯ ಪುನರುಜ್ಜೀವನವನ್ನು ಪೂರ್ಣವಾಗಿ ಹೊಂದಬೇಕಾದರೆ ಆಗಬೇಕಾದ ಕಾರ್ಯಗಳನ್ನು ಹಿಡಿಸಿ, ಆದರೆ ಪ್ರಾಂತೀಯ ಭಾವನೆಗೊಂದು ಮರ್ಯಾದೆಯುಂಟೆಂಬದನ್ನು ಮರೆಯಕೂಡದೆಂದು ಸಮ್ಮೇಲನದವರಿಗೆ ಹೇಳಿದ್ದರೆ ನಾವು "ಕರ್ನಾಟಕ ಪರಾಙ್ಮುಖ"ರಾದಂತಾಗುವದೆಂದು ಅವರು ಅಭಿಪ್ರಾಯಪಟ್ಟರು. ವಿಜಯನಗರ ರಾಜರ ಕಾಲದಲ್ಲಿ ಸಂಕುಚಿತತೆಯಿಂದ ದೂರವಾಗಿ ಐಕ್ಯಭಾವನೆಯನ್ನುಂಟು ಮಾಡಿದ ಕನ್ನಡಿಗರ ಪರಂಪರೆಗೆ ಇದು ಅನುಗುಣವಾಗಿಯೆ ಇದೆ. ನಮ್ಮ ಪ್ರಾಂತೀಯತೆ ರಾಷ್ಟ್ರೀಯ ಋಣಾನುಬಂಧಕ್ಕೆ ಪೋಷಕವಾಗಿರಬೇಕು.

ಸ್ವಾಗತಾಧ್ಯಕ್ಷ ಶ್ರೀ ಸಿದ್ಧಯ್ಯ ಪುರಾಣಿಕರು ತಮ್ಮ ದಿಗ್ದರ್ಶನದಲ್ಲಿ ಸಿದ್ಧರಾಮೇಶ್ವರ, ಶರಣ ಬಸವೇಶ್ವರ, ಕಲ್ಯಾಣದ ಬಸವೇಶ್ವರರ ಪಾದರೇಣುವಿನಿಂದ ಪುನೀತವಾದ ಹೈದರಾಬಾದ ಕನ್ನಡ ಪ್ರದೇಶಗಳ ಐತಿಹಾಸಿಕ ಸಾಂಸ್ಕೃತಿಕ ಮೇಲ್ಮೆಯನ್ನು ರೇಖಿಸಿದರು. ಸಾಹಿತ್ಯದ ಕಾರ್ಯವನ್ನು ನಿರ್ದೇಶಿಸುತ್ತ ಅವರು, ಅಪೂರ್ಣತೆ, ಅಸಂತೋಷ, ಔದಾಸೀನ್ಯಗಳನ್ನು ಕಳೆದು ರಸಜೀವನದ ಕಡೆ ಮನುಷ್ಯನನ್ನು ಒಯ್ಯುವದು, ಅದರ ಧ್ಯೇಯವಾಗಿರಬೇಕೆಂದರು. ಅದಕ್ಕೆ ನಮ್ಮ ಬಾಳು ದೊಡ್ಡದಾಗ ಬೇಕು, ಜೀವನ ಉದಾತ್ತವಾಗಬೇಕು.

ವ್ಯಾಕರಣತೀರ್ಥ ಶ್ರೀ ಚಂದ್ರಶೇಖರ ಶಾಸ್ತ್ರಿಯವರು ಅಧ್ಯಕ್ಷ ಉತ್ತಂಗಿಯವರ ಪರಿಚಯ ಮಾಡಿಕೊಟ್ಟ ನಂತರ ಅಧ್ಯಕ್ಷರು ತಮ್ಮ ಸುದೀರ್ಘ ಭಾಷಣವನ್ನು ಧ್ವನಿವರ್ಧಕದ ಮೂಲಕ ಕುಳಿತುಕೊಂಡೇ ಓದಿದರು.

ಅದರ ಸಾರವನ್ನು ಎರಡನೆ ಪುಟದಲ್ಲಿ ಕಾಣಬಹುದು.

ಸಾಹಿತ್ಯಗೋಷ್ಠಿ

ಅದೇ ದಿನ (ತಾ. ೫) ಸಂಜೆ ಶ್ರೀ ಮಾಸ್ತಿ ನರಸಿಂಗರಾಯರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಗೋಷ್ಠಿ ನಡೆಯಿತು. ಶ್ರೀ ತವಗದ ಭೀಮಸೇನರಾಯರು ತಮ್ಮ ಸ್ವಾಗತ ಭಾಷಣದಲ್ಲಿ ಸಾಹಿತ್ಯ ಸಮ್ಮೇಲನದಲ್ಲೊಂದು ಸಾಹಿತ್ಯ ಗೋಷ್ಠಿಯನ್ನೇರ್ಪಡಿಸುವ ಔಚಿತ್ಯವನ್ನು ಸಮರ್ಥಿಸಿದರು. ಹಿತದಿಂದ ಸಹಿತವಾದುದು ಸಾಹಿತ್ಯವೆಂದು ಅವರ ಅಭಿಪ್ರಾಯವಾಗಿತ್ತು. ಸಾಹಿತ್ಯದ ಉದ್ದೇಶ ಲೋಕಹಿತ; ಪ್ರಯೋಜನ ಆತ್ಮತೃಪ್ತಿ. ಜೀವನವಿಂದು ವಿಸ್ತೃತವಾಗಿದ್ದು ಸಮಕಾಲೀನ ಜೀವನವನ್ನು ಕುರಿತ ಸಾಹಿತ್ಯದ ಆವಶ್ಯಕತೆ ಹೆಚ್ಚಾಗಿದೆಯೆಂದು ಅವರು ಹೇಳಿದರು.

ಶ್ರೀ ಬೇಂದ್ರೆ ದತ್ತರಾಯರು ಗೋಷ್ಠಿಯನ್ನು ಉದ್ಘಾಟಿಸಿ, ಕೇಂದ್ರಮತ್ತು ಪ್ರಾಂತವಾದಿಗಳಲ್ಲಿ ಸಾಮರಸ್ಯವನ್ನು ಪ್ರತಿಪಾದಿಸಿದರು. ಉಸ್ಮಾನಿಯಾ ವಿಶ್ವವಿದ್ಯಾಲಯದ ಪ್ರೊ. ಪದ್ಮನಾಭ ಪುರಾಣಿಕರು ಶ್ರೀ ಮಾಸ್ತಿಯವರ ಪರಿಚಯ ಮಾಡಿಕೊಟ್ಟರು.

ಅಧ್ಯಕ್ಷರಾದ ಶ್ರೀ ನರಸಿಂಗರಾಯರು ಸ್ವಯಂ ಮನುಷ್ಯನೇ ಸಾಹಿತ್ಯ. ಅವನಲ್ಲಿಯ ಭಾವನಾತ್ಮಕ ವೃತ್ತಿ ಮತ್ತು ಮಾನಸಿಕ ಪ್ರತಿಕ್ರಿಯೆಗಳೇ ಸಾಹಿತ್ಯದ ಉತ್ಪತ್ತಿಯನ್ನು ಪ್ರಚೋದಿಸುತ್ತವೆಯೆಂದರು. ಕಲಾಮಯ ಪರಿಪೂರ್ಣ ಜೀವನವನ್ನು ತಂದುಕೊಡುವವನೇ ಕವಿ. ಮಾನವನ ಬಾಳನ್ನು ರೂಪಿಸುವಲ್ಲಿ ಸಾಹಿತ್ಯ ತನ್ನ ಧ್ಯೇಯ ಸಾಧನೆ ಮಾಡಬೇಕೆಂದು ಅವರು ಪ್ರತಿಪಾದಿಸಿ, ಗದ್ಯಪದ್ಯ ಲೇಖಕರು ವಹಿಸಬೇಕಾದ ಎಚ್ಚರವನ್ನು ಮನಗಾಣಿಸಿಕೊಟ್ಟರು.

ಸಾಹಿತ್ಯಗೋಷ್ಠಿ ತಾ. ೭ಕ್ಕೆ ಮುಕ್ತಾಯವಾಯಿತು. "ವಾಙ್ಮಯದ ಮುಖಾಂತರ ರಾಷ್ಟ್ರೀಯ ಪ್ರಚಾರ" ವನ್ನು ಕುರಿತು ನಡೆದ ವಿಚಾರ ಸಂಕಿರಣದಲ್ಲಿ ಶ್ರೀ ವಿ. ಬಿ. ನಾಯಕ, ಪಾಟೀಲ ಪುಟ್ಟಪ್ಪ, ಕಟಟರಾಳ ಕೃಷ್ಣರಾಯರೇ ಮೊದಲಾದವರು ಭಾಗವಹಿಸಿದ್ದರು. ಪ್ರೊ. ಬೇಂದ್ರೆ, ಪ್ರೊ. ಮುಗಳಿ ಮೊದಲಾದವರ ಕವಿತಾ ವಾಚನವೂ ಕಾರ್ಯಕ್ರಮಕ್ಕೆ ಕಳೆಯೇರಿಸಿತ್ತು.

ಮಹಿಳಾಧ್ಯಕ್ಷ ಬೇಕು !

ಮಹಿಳಾಗೋಷ್ಠಿಯನ್ನು ಶ್ರೀಮತಿ ಎಸ್. ಆರ್. ಲಕ್ಷ್ಮಮ್ಮನವರು ತಾ. ೬ ಮಧ್ಯಾಹ್ನ ಉದ್ಘಾಟಿಸಿದರು. ಶ್ರೀಮತಿ ಚೆನ್ನಮ್ಮಾ ಮಹಗಾಂ ಅವರು ಪ್ರತಿನಿಧಿಗಳನ್ನು ಸ್ವಾಗತಿಸಿದರು. ಅಧ್ಯಕ್ಷರಾಗಿದ್ದ ಶ್ರೀಮತಿ ಗೌರಾದೇವಿ ಇಂಚಲಮಠರು ಪುರುಷ ಜಾತಿಯ ತಲೆಯ ಮೇಲೆ ಹಲವು ಅಪರಾಧಗಳನ್ನು ಹೊರಿಸಿದರು. ಪುರುಷರು ಸ್ತ್ರೀ ಸಂಸ್ಕೃತಿಗೇ ಮೊರೆ ಹೋಗಬೇಕಾಗುವದೆಂದು ಅವರು ಎಚ್ಚರಿಸಿದರು. ಸ್ತ್ರೀಯರಿಗೆ ಪುರುಷರ ದಾಕ್ಷಿಣ್ಯ ಸಹಾನುಭೂತಿಗಳಿದ್ದರೆ ಸಾಲದೆಂದವರೇ ಮಹಿಳೆಯರಿಗೆ ಉತ್ತೇಜನ ಕೊಡಲು ಸಾಹಿತ್ಯ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಮುಂದಿನ ವರ್ಷ ಮಹಿಳೆಯರಿಗೆ ಕೊಡಬೇಕೆಂದು ಅಪೇಕ್ಷಿಸಿದರವರು.


ಮೈಸೂರು ಲೀನವಾಗಲಿ !

ಆದರೆ ಕರ್ನಾಟಕದಲ್ಲಿರುವ ವಿರೋಧಾಭಾಸಗಳನ್ನು ಎಲ್ಲಕ್ಕಿಂತ ಹೆಚ್ಚು ಎತ್ತಿ ತೋರಿಸಿದ ಕಾರ್ಯಕ್ರಮವೆಂದರೆ ಏಕೀಕರಣ ಪರಿಷತ್ತು. ಏಕೀಕರಣವೇ ಎಲ್ಲರ ಗುರಿಯಾಗಿತ್ತೆಂಬಲ್ಲಿ ಯಾವ ಸಂಶಯವೂ ಇದ್ದಿಲ್ಲ. ಆದರೆ ಮೈಸೂರಿನ ವಿಲಯನದ ಪ್ರಶ್ನೆ ಬಂದಾಗ ಮಾತ್ರ ಮೈಸೂರು ಪ್ರತಿನಿಧಿಗಳು ತಮಗಾದ ಉದರಶೂಲೆಯನ್ನು ಬಚ್ಚಿಟ್ಟುಕೊಳ್ಳಲಾರದೆ ಹೋದರು. ಆದರೆ ಹೈದರಾಬಾದನ್ನು ಒಡೆದು ಹಂಚಿಹಾಕಬೇಕೆಂಬ ಬಗ್ಗೆ ಮಾತ್ರ ಅವರಿಗೇನೂ ಸಂಶಯವಿರಲಿಲ್ಲ. ಇತ್ತ ಡೊಮೀನಿಯನ್ ಕರ್ನಾಟಕದ ಮುಖಂಡರು—ಅವರಲ್ಲಿ ಕೆಲವರು ಕೆಲವೇ ವಾರ ಕೆಳಗೆ ಮೈಸೂರು ಮಹಾರಾಜರನ್ನು "ತಲೆಯ ಮೇಲೆ ಹೊತ್ತುಕೊಳ್ಳಲು" ಸಿದ್ಧವಾದ ಗೊತ್ತುವಳಿಗೆ ಕಾರಣರಾದವರೇ ಇದ್ದರು — ಈಗ ಅರಸೊತ್ತಿಗೆಗೆ ಬದ್ಧವಿರೋಧವನ್ನು ತೋರಿ ಮೈಸೂರಿನ ವಿಲಯನಬೇಕೆಂದು ಒಂಟಿಗಾಲ ಮೇಲೆ ನಿಂತಿದ್ದರು! ಈ (ಹನ್ನೆರಡನೆ) ಏಕೀಕರಣ ಪರಿಷತ್ತು ಅಂಗೀಕರಿಸಿದ ಗೊತ್ತುವಳಿ ಹರಿಹರದ ಗೊತ್ತುವಳಿಯನ್ನು ತಿರುಗುಮುರುಗು ಮಾಡಿತೆಂದೇ ಹೇಳಬೇಕು.

ತಾ. ೬ ಮುಂಜಾನೆ ಹತ್ತು ಗಂಟೆಗೆ ಪ್ರಾರಂಭವಾದ ಪರಿಷತ್ತು, ರಾತ್ರಿಯಲ್ಲಿ ವಿಲಯನ ಗೊತ್ತುವಳಿಯನ್ನು ಪಾಸುಮಾಡಿ ಕೊನೆಗೊಂಡಿತು. ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾದ ಈ ಪರಿಷತ್ತನ್ನು ಮೈಸೂರು ಘಟನಾ ಸಮಿತಿಯ ಅಧ್ಯಕ್ಷರಾದ ಶ್ರೀ. ಟಿ. ಸುಬ್ರಹ್ಮಣ್ಯಂ ಅವರು ಉದ್ಘಾಟಿಸಿದರು. ಅವರು ಕರ್ನಾಟಕ ಏಕೀಕರಣ ಅತ್ಯವಶ್ಯವಾದುದು, ಎಂದರು. ಹೈದರಾಬಾದಿನ ನಿಜಾಮರ "ದೌಲತ್ತಿ"ನಿಂದ ಪ್ರಜೆಗಳು ಪೀಡಿತರಾಗಿದ್ದಾರಾಗಿ ಅದರ ಕನ್ನಡ ಪ್ರದೇಶಗಳನ್ನು ಬೇರ್ಪಡಿಸಿ ಏಕೀಕೃತ ಕರ್ನಾಟಕದಲ್ಲಿ ಸೇರಿಸಬೇಕು. ಆದರೆ, ಸುಬ್ರಹ್ಮಣ್ಯಂ ಅಂದರು, ಮೈಸೂರರಸರು ಪ್ರಜೆಗಳ ಮನ್ನಣೆ ಪಡೆದಿದ್ದಾರೆ. ಆದ್ದರಿಂದ ಸದ್ಯದ ಪೀಳಿಗೆಯವರಾದ ಸಾಮಂತ ಮಹಾರಾಜರನ್ನು ಕಿತ್ತುಹಾಕಲು ಸಿದ್ಧರಿಲ್ಲ. ಮುಂದಿನ ತಲೆಮಾರಿನವರ ಮಾತು ನಾನು ಹೇಳಲಾರೆ. ನಿಜವಾಗಿ ನನ್ನ ಮಗನೇ ಮನೆಯಲ್ಲಿ ಒಮ್ಮೊಮ್ಮೆ ಕೇಳುತ್ತಾನೆ, ಮೈಸೂರರಸನನ್ನು ಏಕೆ ಕಿತ್ತು ಹಾಕಬಾರದು? ಎಂದು. ಕೊನೆಗೆ ಅವರು ಡೊಮೀನಿಯನ್ ಕನ್ನಡಿಗರಿಗೆ ತಾಳ್ಮೆಯನ್ನು ಉಪದೇಶಿಸಿದರು.

ಸ್ವಾಗತಾಧ್ಯಕ್ಷ ಶ್ರೀ ಶರಣಗೌಡ ಇನಾಮದಾರರು ಪ್ರಾಂತೀಕರಣವನ್ನು ಸಮರ್ಥಿಸಿದ್ದಲ್ಲದೆ ಹೈದರಾಬಾದು ಭಾಷಾನ್ವಯವಾಗಿ ವಿಲಯನ ಹೊಂದಬೇಕೆಂದರು.

ಅಧ್ಯಕ್ಷ ನಿಜಲಿಂಗಪ್ಪನವರು ಸಂಸ್ಥಾನಗಳ ಸಮೀಕರಣಕ್ಕೆ ಕಾರಣರಾದ ಸರದಾರ ಪಟೇಲರನ್ನು ಅಧುನಿಕ ಪರಶುರಾಮನೆಂದು ಕರೆದು ಕ. ಪ್ರಾಂ. ಕಾಂಗ್ರೆಸ್ಸು ಮೈಸೂರರಸರನ್ನು ಘಟನಾತ್ಮಕ ಅರಸರನ್ನಾಗಿ ಒಪ್ಪಿದ್ದರ ಹಿನ್ನೆಲೆಯನ್ನು ವಿವರಿಸಿದರು.



ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರು
ಏಕೀಕರಣ ಪರಿಷತ್ತಿನ ಅಧ್ಯಕ್ಷರು

ಸಾಯಂಕಾಲ ಏಳು ಗಂಟೆಗೆ ಬಹಿರಂಗ ಅಧಿವೇಶನ ಪ್ರಾರಂಭವಾದಾಗ ಶ್ರೀಮತಿ ಸರೋಜಿನಿ ನಾಯಡು ಮೊದಲಾದವರ ನಿಧನದ ಬಗ್ಗೆ ದುಃಖಸೂಚಕ ಗೊತ್ತುವಳಿ, ಸಂಸ್ಥಾನಗಳ ವಿಲಯನ ಸಮೀಕರಣಗಳನ್ನು ಪ್ರಶಂಸಿಸುವ ಗೊತ್ತುವಳಿಗಳು ಅವಿರೋಧವಾಗಿ ಸ್ವೀಕೃತವಾದವು.

ಆ ಮೇಲೆ ಬಂತು ಶ್ರೀ ತಿ ರು ನೇಶ್ವಿಯವರ ವಿವಾದಕ್ಕೆ ಕಾರಣವಾದ ಏಕೀಕರಣ ಗೊತ್ತುವಳಿ. ಸ್ವತಃ ಗೊತ್ತುವಳಿಯೇನೋ ಹೆಚ್ಚು ಕಡಿಮೆ ನಿರಪಾಯಿಯೆ ಇತ್ತು: ಸಂಯುಕ್ತ ಕರ್ನಾಟಕ ರಚನೆಗೆ ಅವಶ್ಯಕ ಉಪಾಯಗಳನ್ನು ಕೈಕೊಳ್ಳಲು ಕೇಂದ್ರ ಸರಕಾರವನ್ನು ಕೇಳಿಕೊಳ್ಳುವದು ಅದರ ಆಶಯವಾಗಿತ್ತು. ಆದರೆ ಮಂಡಕರು, ಮೈಸೂರವರನ್ನು ಬಿಟ್ಟಾದರೂ ಇಲ್ಲವೆ ಅವರನ್ನು ಒತ್ತಾಯದಿಂದ ಸೆಳೆದುಕೊಂಡಾದರೂ ಏಕೀಕರಣವನ್ನು ಸಾಧಿಸಿಯೆ ತೀರುವೆವೆಂದು ಕೆಣಕುಮಾತುಗಳನ್ನಾಡಿ ವಿವಾದದ ಗಾಲಿಗೆ ಚಾಲನೆ ಕೊಟ್ಟುಬಿಟ್ಟರು. ಅವರದು ಅಂದು ಮುಂಜಾನೆಯ ಶ್ರೀ ಸುಬ್ರಹ್ಮಣ್ಯರ ಭಾಷಣಕ್ಕೆ ಉತ್ತರವಾಗಿ ಹೊರಹೊಮ್ಮಿದ ಉತ್ತೇಜಿತ ಭಾಷಣವಾದರೂ ಮೈಸೂರಿನ ಶ್ರೀ ಆರ್. ಎಸ್. ಆರಾಧ್ಯರು ತಮ್ಮ "ದೇಶ"ದ ಮುಂದಾಳುಗಳ ಮೇಲಾದ ಈ ಮೂದಲಿಕೆಯನ್ನು ಮಾಕೊರ್ಳ್ಳಲೆದ್ದು ಸಿಡಿನುಡಿದರು: ಮೈಸೂರಿನ ಮುಖಂಡರ ಮೇಲೆ ಬಾಣ ಎಸೆದಿದ್ದಾರೆ. ಅದನ್ನೆದುರಿಸುವ ಶಕ್ತಿ ನಮಗಿದೆ. ಮೈಸೂರವರು ನಾಗಾಲೋಟದಿಂದ ಓಡಲಾರರು. ಡೊಮೀನಿಯನ್ ಕನ್ನಡಿಗರು ಸ್ವಲ್ಪ ತಡೆಯಲಿ! ಇತ್ಯಾದಿ. ಆದರೆ ನಿಜವಾಗಿ ಅವರು ನೇಶ್ವಿಯವರ ಗೊತ್ತುವಳಿಗೆ ಬೆಂಬಲ ಕೊಡಲೆಂದೇ ಎದ್ದವರು!

ಆದರೆ ಹರಿಹರದಲ್ಲಿಯೆ ಅರಸೊತ್ತಿಗೆಗೆ ವಿರೋಧವೊಡ್ಡಲೆತ್ನಿಸಿದ್ದ "ವಿಶಾಲ ಕರ್ನಾಟಕ" ದ ಶ್ರೀ ಪಾಟೀಲ ಪುಟ್ಟಪ್ಪನವರಿಗೆ (ಏಕೀಕರಣ ಮಹಾಸಭೆಯ ಜತೆ ಕಾರ್ಯದರ್ಶಿ) ಗೊತ್ತುವಳಿ ಸಂದಿಗ್ಧವಾಗಿ ಕಂಡಿತು. ಅದನ್ನು ಹೆಚ್ಚು ಸ್ಫುಟವಾಗಿಸಲು ಅವರು "ಅವಶ್ಯ ಕ್ರಮ" ಗಳ ಸ್ಥಾನದಲ್ಲಿ "ಮೈಸೂರು ಸಂಸ್ಥಾನವನ್ನು ವಿಲಯನಗೊಳಿಸಿ" ಎಂಬ ಶಬ್ದಗಳನ್ನು ಹಾಕಬೇಕೆಂದು ತಿದ್ದುಪಡಿ ತಂದರು. ಅದಕ್ಕೆ ಸಾಮಾನ್ಯ ಬೆಂಬಲ ದೊರೆಯಿತು. ಶ್ರೀ ಗುದ್ಲೆಪ್ಪ ಹಳ್ಳಿಕೇರಿ, ತಿಪ್ಪಣ್ಣ ಶಾಸ್ತ್ರಿಗಳು ಮೂಲಗೊತ್ತುವಳಿಗೇ ಬೆಂಬಲ ಕೊಟ್ಟರು. ಆದರೆ ಪಾಟೀಲ ಪುಟ್ಟಪ್ಪನವರ ತಿದ್ದುಪಡಿಗೇ ಬಹುಮತ ದೊರೆತು ಅದನ್ನೊಳಗೊಂಡೇ ಗೊತ್ತುವಳಿ ಅಂಗೀಕೃತವಾಯಿತು.

ನೋಡಿಕೊಳ್ಳುವೆವು

ಜಯಘೋಷಗಳ ಪ್ರತಿಧ್ವನಿ ಲೀನವಾದ ಮೇಲೆ ಅಧ್ಯಕ್ಷರ ಅಪ್ಪಣೆ ಪಡೆದು ಶ್ರೀ ಸುಬ್ರಹ್ಮಣ್ಯರು ವ್ಯಗ್ರ ಭಾವದಿಂದ ಸಭೆಗೆ ಎಚ್ಚರಿಕೆ ಇತ್ತರು: ಏಕೀಕರಣದ ಕಾರ್ಯಸಾಧನೆಯ ಮಾರ್ಗ ಇದಿದ್ದಿಲ್ಲ. ಕೇಂದ್ರ ಸರಕಾರ ಸರ್ವಾಧಿಕಾರಿಯಲ್ಲ. ಮೈಸೂರರಸರನ್ನಿಟ್ಟುಕೊಳ್ಳಬೇಕೆಂದು ಮೈಸೂರು ಪ್ರಜೆಗಳು ನಿರ್ಧಾರ ಮಾಡಿದರೆ ಅವರ ಮೇಲೆ ಒತ್ತಾಯ ಹೇರಲು ತ್ರಿಮೂರ್ತಿಗಳಿಗೂ ಸಾಧ್ಯವಿಲ್ಲ!

ಕೂಗಿತೊಂದು ದನಿ: ನಿಮ್ಮ ಆಹ್ವಾನವನ್ನೆದುರಿಸುತ್ತೇವೆ !

ಪ್ರತ್ಯುತ್ತರಿಸಿದರು ಸುಬ್ರಹ್ಮಣ್ಯಂ: ಆಗಲಿ, ಆಗಲಿ. ನೀವೇನೋ ಏಕೀಕರಣದ ದಾರಿಯಲ್ಲಿ ಮುಳ್ಳು ಹಾಕಿದ್ದೀರಿ.

.೧೩ನೆಯ ಪುಟಕ್ಕೆ

ಅಧ್ಯಕ್ಷ ಉತ್ತಂಗಿ ಚನ್ನಪ್ಪನವರು

ಸೇವೆ, ತ್ಯಾಗ, ಹೋರಾಟಗಳ ಜೀವನ

ಇಜಿಪ್ತದ ರಾಣಿ ಕ್ಲಿಯೊಪಾತ್ರಾಳ ಮೂಗು ತುಸು ಉದ್ದಗಿದ್ದಾಗಿದ್ದರೆ ಜಗತ್ತಿನ ಇತಿಹಾಸವೇ ಬದಲಾಗುತಿತ್ತೆಂದು ಹೇಳುವುದುಂಟು. ಮೂವತ್ತೆರಡನೆ ಸಾಹಿತ್ಯ ಸಮ್ಮೇಲನದ ಕ್ರೈಸ್ತ ಅಧ್ಯಕ್ಷರಾದ ರೆವರೆಂಡ್ ಚೆನ್ನಪ್ಪ ದಾನಿಯೇಲಪ್ಪ ಉತ್ತಂಗಿಯವರ ಬಗ್ಗೆಯೂ ಹಾಗೆಯೆ ಹೇಳಬಹುದೆಂದು ತೋರುತ್ತದೆ. ಅವರು ತಮ್ಮ ಹೈಸ್ಕೂಲು ದಿನಗಳಲ್ಲಿ ಯೂಕ್ಲಿಡನೊಡನೆ ಜಗಳಾಡಿರದಿದ್ದರೆ ಇಂದು ಬಹಳ ಮಾಡಿ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಅವರ ಹೆಸರು ಕೇಳಿಬರುತಿರಲಿಲ್ಲ. ಅವರನ್ನು ಸಮ್ಮೇಲನದ ಪ್ರಥಮ ಕ್ರೈಸ್ತ ಅಧ್ಯಕ್ಷರಾಗಿ ಗೌರವಿಸುವ ಭಾಗ್ಯ ನಮಗೆ ಬರುತಿರಲಿಲ್ಲ.

ಅದು ಐವತ್ತು ವರ್ಷಗಳಿಗಿಂತಲೂ ಹಳೆಯ ಮಾತು. ಧಾರವಾಡದ ಬಾಸೆಲ್ ಮಿಶನ್ ಹೈಸ್ಕೂಲಿನ ''ದಡ್ಡ'' ಹುಡುಗನೊಬ್ಬನು ರೇಖಾಗಣಿತದ ಅಧ್ಯಾಪಕರೊಡನೆ ಗುದುಮುರಿಗೆ ಹಾಕುತಿದ್ದನು. ಯೂಕ್ಲಿಡನು ಬಿಂದುವಿಗೆ ಪರಿಮಾಣವಿಲ್ಲ, ರೇಷೆಗೆ ಉದ್ದಳತೆಯಲ್ಲದೆ ಅಗಲಳತೆಯುಲ್ಲೆಂದು ಹೇಳಿದ್ದನ್ನು ಪಾಪ, ಅಧ್ಯಾಪಕರು ತಾವು ಕಲಿತಂತೆ ಹುಡುಗರಿಗೂ ಕಲಿಸುತಿದ್ದರು. ದಡ್ಡ ಚನ್ನಪ್ಪನಿಗೆ ಅದು ಸರಿದೋರಲಿಲ್ಲ. ಅವನು ಪ್ರತಿವಾದಿಸಿದನು. ಪರಿಮಾಣವಿರಲೇ ಬೇಕು, ಅಗಲಳತೆಯಿರಲೇಬೇಕು, ನಮಗೆ ಅಳೆಯಲಿಕ್ಕೆ ಬರಲಿಕ್ಕಿಲ್ಲ ಅಷ್ಟೆ, ಇಲ್ಲದಿದ್ದರೆ ಅದನ್ನು ಎಳೆಯಲಿಕ್ಕೇ ಬರುತಿರಲಿಲ್ಲ, ಎಂದನವನು. ಆದರೆ ಕನಿಷ್ಠ ಮೂರುಸಾವಿರ ವರ್ಷದಿಂದ ಯಾವ ಆಧಾರದ ಮೇಲೆ ಗಣಿತ ಶಾಸ್ತ್ರದ ಮುಗಿಲಟ್ಟಳಿಗೆಯ ಭವನವೇ ಕಟ್ಟಲ್ಪಟ್ಟದೆಯೋ ಅದನ್ನು ನಿರಾಕರಿಸಲು ಸಹಜವಾಗಿ ಅಧ್ಯಾಪಕರು ಸಿದ್ಧರಾಗಲಿಲ್ಲ. ಆದುದರಿಂದ ಪ್ರತ್ಯಕ್ಷಕ್ಕೆ ವಿರುದ್ಧವಾಗಿರುವ ತತ್ವದ ಮೇಲೆ ನಿಂತ ಈ ಶಾಸ್ತ್ರವೇ ಸತ್ಯಕ್ಕೆ ದೂರವಾಗಿರಬೇಕೆಂದು ತೀರ್ಮಾನಿಸಿಕೊಂಡ ಚನ್ನಪ್ಪನವರು ಅದರ ಗೊಡವೆಯನ್ನೆ ಬಿಟ್ಟುಬಿಟ್ಟರು. ಮೆಟ್ರಿಕ್ ಪರೀಕ್ಷೆಗೆ ಹೋದಾಗ ರೇಖಾಗಣಿತದ ಉತ್ತರ ಪತ್ರದಲ್ಲಿ ಒಂದು ದೊಡ್ಡ ಶೂನ್ಯವನ್ನು ಬರೆದು ಕೊಟ್ಟು ಪ್ರತಿಯಾಗಿ ಶೂನ್ಯಾಂಕವನ್ನೇ ಸಂಪಾದಿಸಿದರು.

ಶಾಲಾಭ್ಯಾಸಂಗಕ್ಕೆ ಶರಣು

ಅಲ್ಲಿಗೆ ಅವರ ವಿದ್ಯಾಭ್ಯಾಸಕ್ಕೆ ಪೂರ್ಣವಿರಾಮ ದೊರೆಯಿತು. ಶಾಲೆಯ ಕಟ್ಟುನಿಟ್ಟಿನ ಶಿಕ್ಷಣ ಪದ್ಧತಿ ಅವರಿಗೆ ಒಗ್ಗಲಿಲ್ಲ. ಅದರ ಸಂಗಡಲೇ ಅವರ ಅತ್ಯಂತ ಮಮತೆಯ ವಿಷಯವಾದ ಯಂತ್ರಕಲೆಯು— ಅದರಲ್ಲಿ ಅವರ ಆಸಕ್ತಿ ಎಷ್ಟಿತ್ತೆಂದರೆ ಒಮ್ಮೆ ಬಹಳ ಚಿಕ್ಕಂದಿನಲ್ಲೇ ಪೆಂಡ್ಯುಲಂಗಡಿಯಾರದ ಪೆಂಡ್ಯುಲಂ ಸ್ಥಾನದಲ್ಲಿ ಕಿಸೆಗಡಿಯಾರವನ್ನು ತೂಗಹಾಕಿ ಎರಡರ ಸಮಯವೂ ಒಂದೇ ಸರಿಯಾಗುವದೋ ಇಲ್ಲವೋ ಎಂದು ಪರೀಕ್ಷಿಸಿದ್ದರಂತೆ!— ಉಚ್ಚಾಭ್ಯಾಸಕ್ಕೆ ಅವಕಾಶವೇ ದೊರೆಯಲಿಲ್ಲ. ಬದಲಾಗಿ ತಾಯಿಯ ಹರಕೆ ಪೂರೈಸಲು ಅವರು ಧರ್ಮೋಪದೇಶಕ ವೃತ್ತಿಯನ್ನು ಅವಲಂಬಿಸಬೇಕಾಯಿತು. ಈ ನಡುವೆ ಅವರಲ್ಲಿ ಕನ್ನಡ ಸಾಹಿತ್ಯಾಭ್ಯಾಸದ ಆಸಕ್ತಿಯುಂಟಾಗಿ, ಮುಖ್ಯವಾಗಿ ಸರ್ವಜ್ಞಕವಿಯ ತ್ರಿಪದಿಗಳನ್ನು ಶೇಖರಿಸಿ ಅದಕ್ಕೆ ಅತ್ಯಂತ ವಿದ್ವತ್ತಾಪೂರ್ಣವಾದ ಮುನ್ನುಡಿಯನ್ನು ಬರೆದು ಪ್ರಕಟಿಸುವ ಯೋಗವುಂಟಾಯಿತು. ಇದೆಲ್ಲ ಸ್ವತಃ ಉತ್ತಂಗಿಯವರಿಗೆ ಬಡತನ, ಬಹಿಷ್ಕಾರ ಕ್ರೋಧ ಮೊದಲಾದ ಕಹಿ ಫಲಗಳನ್ನು ಕೊಟ್ಟರೂ ಕನ್ನಡದ ಬಡತನವನ್ನು ದೂರೀಕರಿಸಲು ಎಡೆಮಾಡಿಕೊಟ್ಟಿತು. ಹೀಗೆ ಒಬ್ಬನ ಕ್ಲೇಶ ನಾಡಿನ ಭಾಗ್ಯಕ್ಕೆ ದಾರಿಯಾಯಿತು.

ಹಿರಿಯರ ಕತೆ

ಉತ್ತಂಗಿ ಕುಟುಂಬ ಕ್ರೈಸ್ತ ಧರ್ಮವನ್ನು ಅಂಗೀಕರಿಸಿದ್ದು ಇವರ ಅಜ್ಜ ಚನ್ನಪ್ಪನವರ ಕಾಲದಲ್ಲಿ. ಪುತ್ರ ಸಂತಾನದ ಅಭಾವದಿಂದ ಕೊರಗಿ ಅಂತರ್ಮುಖರಾಗಿದ್ದ ಇವರ ಅಜ್ಜಂದಿರಿಗೆ ಸ್ವಧರ್ಮದಲ್ಲಿ— ಅವರು ಲಿಂಗಾಯತರಾಗಿದ್ದರು— ಏನೋ ಕೊರತೆ ಕಾಣಿಸತೊಡಗಿದಾಗ ಕ್ರೈಸ್ತ ವೇದವಾದ "ಹೊಸ ಒಡಂಬಡಿಕೆ" ಆಕಸ್ಮಾತ್ತಾಗಿ ಕೈಗೆ ಬಿತ್ತು. ಒಳ್ಳೆಯ ಹಿರಿಮೆಯನ್ನಿತ್ತಿ ಹಿಡಿದ ಆ ಧರ್ಮಕ್ಕೆ ಅವರು ಮನಸೋತು, ದೀರ್ಘಕಾಲದ ಚಿಂತನೆಯ ನಂತರ ತಮ್ಮ ವಂಶಪರಂಪರಾಗತವಾದ ಗೌಡಿಕೆಗೆ ಶರಣು ಹೊಡೆದು ಉತ್ತಂಗಿಯಿಂದ (ಬಳ್ಳಾರಿ ಜಿಲ್ಲೆ) ಧಾರವಾಡಕ್ಕೆ ಪತ್ನೀ ಸಮೇತರಾಗಿ ಬಂದು ಬಾಸೆಲ್ ಮಿಶನ್‌ನವರಿಂದ ಕ್ರೈಸ್ತ ಧರ್ಮವನ್ನು ಅಂಗೀಕರಿಸಿದರು. ಆ ಮೇಲೆ ಅವರಿಗೆ ಇಬ್ಬರು ಗಂಡು ಮಕ್ಕಳಾದರು. ಅವರಲ್ಲಿ ಕಿರಿಯರೇ ನಮ್ಮ ಉತ್ತಂಗಿಯವರ ತಂದೆ. ಅವರು ಅಧ್ಯಾಪಕ ವೃತ್ತಿಯನ್ನವಲಂಬಿಸಿದ್ದರು. ಬಹುಕಾಲದ ವರೆಗೆ ಪುತ್ರಸಂತಾನವಿಲ್ಲದ್ದರಿಂದ ನಮ್ಮ ಉತ್ತಂಗಿಯವರ ತಾಯಿ ಗಂಡು ಹುಟ್ಟಿದರೆ ದೇವರ ಸೇವೆಗೆ ಮೀಸಲಿಡುವೆನೆಂದು ಹೊತ್ತ ಹರಕೆ ಫಲಿಸಿತು.

ನಿರಾಶೆ, ಹೋರಾಟ

ರೆವರೆಂಡ್ ಉತ್ತಂಗಿಯವರ ಜೀವನ ನಿರಾಶೆಗಳ ಒಂದು ಮಾಲೆಯಾಗಿತ್ತು, ಹೋರಾಟಗಳ ಕಳವೂ ಆಗಿತ್ತು. ಬಡತನವಂತೂ ಹುಟ್ಟಿನೊಡನೆ ಬಂದುದು ಇಂದಿಗೂ ಹಿಂಗಿಲ್ಲ. ಯಂತ್ರವಿಜ್ಞಾನಾಭ್ಯಾಸದ ಹಂಬಲ ಯೂಕ್ಲಿಡನೊಡನೆ ಬಂದ ವಿವಾದದಿಂದಲೂ ತಾಯಿ ದೇವರ ಸೇವೆಗೇ ಬಾಳನ್ನು ಮೀಸಲಿಡಬೇಕೆಂದು ಹಟಹಿಡಿದದ್ದರಿಂದಲೂ ಹುಸಿಯಾಯಿತು. ಧರ್ಮೋಪದೇಶದಿಂದ ದೇವರ ಸೇವೆ ಮಾಡುವಗೋಸ್ಕರ ಇಪ್ಪತ್ತೊಂದನೆ ವಯಸ್ಸಿನಲ್ಲಿ ಆ ಬಗ್ಗೆ ಶಿಕ್ಷಣ ಹೊಂದಲು ಮಂಗಳೂರಿಗೆ ಹೋದರು. ಲೌಕಿಕ ಶಿಕ್ಷಣದ ಕಬ್ಬಿಣದ ಕಟ್ಟಿನೊಳಗೆ ಹುದುಗಿರಲು ಇವರು ಹೇಗೆ ಒಪ್ಪಲಿಲ್ಲವೊ ಹಾಗೆಯೆ ಆ ವೈದಿಕ ಶಿಕ್ಷಣದ ಅಂಥ ಪರಂಪರೆಯೂ ಅವರಿಗೆ ಸರಿಹೋಗದೆ ಮಂಗಳೂರಿನ ದೈವಜ್ಞಾನ ಶಾಲೆಯ ಅಧಿಕಾರಿಗಳೊಡನೆ ಶಿಕ್ಷಣ ಸುಧಾರಣೆಗಾಗಿ ಘರ್ಷಣೆಗೆ ನಿಂತರು. ಮೇಲಾಗಿ ಹರ್ಬರ್ಟ್ ಸ್ಪೆನ್ಸರ್, ಪೇನ್, ವಾಲ್ಟೇರ್, ಇಂಗರ್ಸಲ್ ಮೊದಲಾದ ಯುರೋಪಿನ "ನಾಸ್ತಿಕ"ರ ತತ್ವಗ್ರಂಥಗಳನ್ನೂ ಇವರು ಓದುತಿದ್ದರು. ಅಧಿಕಾರಿಗಳ ಅಪ್ರೀತಿಗೆ ಉತ್ತಂಗಿಯವರು ಪಾತ್ರರಾದುದರಲ್ಲಿ ಆಶ್ಚರ್ಯವಿಲ್ಲ. ಈ ಸಂಧಿಯಲ್ಲಿ ಬಾಸೆಲ್ ಮಿಶನ್ ಶಾಲೆಯನ್ನು ತೊರೆದು ಕಲಕತ್ತೆಯ ಬಿಶಪ್ಸ ಕಾಲೇಜಿಗೆ ಹೋಗುವ ಪ್ರಯತ್ನ ಇನ್ನೇನು ಫಲಿಸಿತೆನ್ನುವಾಗ ಅವರಿಗೆ ಸಹಾಯ ಮಾಡಲೊಪ್ಪಿದ್ದ ಬಿಶಪ್ ಪಿಮ್ ಅವರು ಮೃತರಾದುದರಿಂದ ಆ ಆಸೆಯೂ ಮಣ್ಣಾಯಿತು. ಸ್ವಾತಂತ್ರ್ಯಪ್ರಿಯರಾದ ಉತ್ತಂಗಿಯವರು ದೈವಜ್ಞಾನ ಶಾಲೆಯ ಶಿಕ್ಷಣ ವಿಷಯಗಳಲ್ಲಿ ತಮಗೆ ಸರಿದೋರಿದವುಗಳನ್ನು ಮಾತ್ರ ಅಭ್ಯಸಿಸಿ ಉಳಿದವುಗಳನ್ನು ತೊರೆದುಬಿಟ್ಟರೂ ಅವರನ್ನು ಆ ಶಾಲೆಯವರು ಮೊದಲನೆ ವರ್ಗದಲ್ಲಿ ಪಾಸುಮಾಡಿ ಈ ಬಿರುಗಾಳಿಯನ್ನು ತಮ್ಮ ಗುಂಪಿನಲ್ಲೇ ಉಳಿಸಿಕೊಂಡರು!

ಬಾಸೆಲ ಮಿಶನಿನ ಆಶ್ರಯದಲ್ಲಿ ೩೩ ವರ್ಷ (೧೯೦೮-೧೯೪೧) ನಡೆಸಿದ ಅವರ ಧರ್ಮ ಸೇವೆಯಾದರೂ ಘರ್ಷಣಭೂಯಿಷ್ಠವಾಗಿಯೆ ಇತ್ತು. ಧಾರವಾಡ, ಹುಬ್ಬಳ್ಳಿ, ಹಾವೇರಿ, ಗದಗ ಮುಂತಾದೆಡೆಗಳಲ್ಲಿ ಅವರು ಕ್ರೈಸ್ತ ಧರ್ಮೋಪದೇಶದ ಕಾರ್ಯ ಮಾಡಿದ್ದಾರೆ. ಆ ಕಾಲದಲ್ಲಿ ಇವರು ಹರಿಜನರ ಮಧ್ಯದಲ್ಲಿಯೂ ದುಡಿದು ಅವರಿಗೆ ಪ್ರಿಯರಾಗಿದ್ದಾರೆ. ಎಲ್ಲ ಸರಿ, ಆದರೆ ಅವರು ಅಲ್ಲಿಯೂ ಸ್ವತಂತ್ರ ವೃತ್ತಿಯಿಂದಲೆ ಸಾಗಿದರು. ಪ್ರೊಟೆಸ್ಟಾಂಟ್ ಮಿಶನರಿಗಳ ಸ್ವಧರ್ಮ ಪ್ರಶಂಸೆ, ಪರಧರ್ಮ ನಿಂದೆಗಳಿಂದಲೇ ಧರ್ಮ ಪ್ರಸಾರಮಾಡಿ ಜನಸಂಖ್ಯೆ ಹೆಚ್ಚಿಸಿಕೊಳ್ಳುವ ಪ್ರವೃತ್ತಿ ಅವರಿಗೆ ಸರಿಹೋಗಲಿಲ್ಲ. ಅವರು ಪರಧರ್ಮಗಳಲ್ಲಿರುವ ಉತ್ತಮ ಗುಣಗಳನ್ನೂ ಎತ್ತಿ ಹಿಡಿದು ತಿಳಿವಳಿಕೆ ಮಾಡಿಕೊಟ್ಟು ನ್ಯಾಯಮಾರ್ಗದಿಂದ ಕ್ರಿಸ್ತಧರ್ಮವನ್ನು ಪ್ರಸಾರಗೊಳಿಸತೊಡಗಿದರು. ಅಜ್ಞರನ್ನು ಮರುಳುಮಾಡಿ ಸತ್ಯಸಂಗತಿಗಳನ್ನು ಹೇಳದೆ ಧರ್ಮಾಂತರ ಮಾಡಿಕೊಂಡರೆ ಅದು "ಧರ್ಮಾಂತರವಲ್ಲ, ಸ್ಥಳಾಂತರ" ಎಂದು ತಮ್ಮ ರೀತಿಯನ್ನು ಟೀಕಿಸಿದ ಪರಿಷ್ಕರಿಗೆ ಉತ್ತರಕೊಟ್ಟರು. ಈ ಸಂದರ್ಭದಲ್ಲಿಯೆ ಅವರು ಲೇಖನ ವೃತ್ತಿಯನ್ನು ಆರಂಭಿಸಿದುದು.

"ಹಿಂದೂ ಸಮಾಜ ಹಿತಚಿಂತಕ" "ಬನಾಸರಕ್ಕೆ ಬೆಳ್ಳ ಹೇಮಿನ ವಿನಂತಿ" ಎಂಬ ಪುಸ್ತಕಗಳನ್ನು ಆ ಕಾಲದಲ್ಲೆ ಇವರು ಪ್ರಸಿದ್ಧಗೊಳಿಸಿದರು. ಇವರು ಅನ್ಯಧರ್ಮಾಭ್ಯಾಸ ಮತ್ತು ಮತ್ತು ಅವುಗಳ ಗುಣ ಸಮರ್ಥನೆ ಮಾಡುವದರಿಂದ ಆಕ್ರೈಸ್ತರೆಂಬ ಕೋಲಾಹಲ ನಾಲ್ಕೂಕಡೆ ಎಬ್ಬಿದರೂ ಎದೆಗುಂದದೆ ನಿರ್ಭೀತರಾಗಿ ತಮ್ಮ ಮಾರ್ಗದ ನ್ಯಾಯ್ಯತೆಯನ್ನು ವಿವರಣೆಕ್ಕೆ ತಂದು ಕೊಟ್ಟಿದ್ದರಿಂದ ಪರಿಷ್ಕರಾದಿಯಾಗಿ ಎಲ್ಲ ಟೀಕಾಕಾರರೂ ತೆಪ್ಪಗಾಗಬೇಕಾಯಿತು. ಇದು ಕ್ರೈಸ್ತ ಧರ್ಮೋಪದೇಶಪದ್ಧತಿಯಲ್ಲಿ ಅವರು ಪ್ರವರ್ತಿಸಿದ ಕ್ರಾಂತಿಕಾರಿ ಪಲ್ಲಟ. ಕ್ರೈಸ್ತರನ್ನು ಅನ್ಯಧರ್ಮೀಯ ದೇಶ ಬಾಂಧವರ ಹೃದಯಕ್ಕೆ ಸಮೀಪಕ್ಕೆ ಒಯ್ದ ಅವರ ಸೇವೆ ಮಹತ್ವದ್ದಾದದ್ದು.

ಸರ್ವಜ್ಞನ ಪ್ರಭಾವ

ಸರ್ವಜ್ಞ ಕವಿಯೇ ಉತ್ತಂಗಿಯವರನ್ನು "ಉಂಟುಮಾಡಿದ"ನೆಂದು ಹೇಳಬೇಕು. ಅವರನ್ನು "ತಿರುಳುಗನ್ನಡತಿರುಕ"ನಾಗಿ ಮಾಡಿದ ಪುಣ್ಯ ಅವನದೆ. ಆಕಸ್ಮಾತ್ತಾಗಿ ಅವನ ತ್ರಿಪದಿಗಳ ಕಡೆಗೆ ಅವರ ಲಕ್ಷ್ಯ ಹೊರಳಿ ಅವನ ಅನುಭಾವಪೂರ್ಣವಾದ ತಿರುಳ್ಗನ್ನಡದ ಸರಳತೆ ಅವರ ಮನಸ್ಸನ್ನು ಸೆರೆಹಿಡಿದುಬಿಟ್ಟಿತು. ಅವನಿಂದಾಗಿ ಅವರು ಇಡಿ ವೀರಶೈವ ವಾಙ್ಮಯ, ತತ್ವಶಾಸ್ತ್ರಗಳನ್ನು ತಿರುವಿಹಾಕಿದರು. ಆಳವಾದ ಪೃಥಕ್ಕರಣ–ಏಕೀಕರಣ ಪದ್ಧತಿಗಳ ಅಭ್ಯಾಸದಿಂದ ಅವರು ಆ ಕವಿಗೆ ಅಪೂರ್ವವಾದ ಸೇವೆ ಸಲ್ಲಿಸಿದ್ದಾರೆ. ವ್ಯಾಕರಣ ತೀರ್ಥ ಚಂದ್ರಶೇಖರ ಶಾಸ್ತ್ರಿಗಳಂಥವರು ಈ ವಿಷಯದಲ್ಲಿ ಅವರೇ ಪ್ರಮಾಣಪುರುಷ. ಸೀಮಾಪುರುಷರಾಗಿರುವ ಮಾತನ್ನು ಮುಕ್ತಕಂಠದಿಂದ ಒಪ್ಪಿಕೊಂಡಿದ್ದಾರೆ. ಸರ್ವಜ್ಞನ ೫೦೦ ವಚನಗಳನ್ನು ಸಂಗ್ರಹಿಸಿ ಬಡತನವನ್ನು ಲೆಕ್ಕಿಸದೆ ಅವನ್ನು ಪ್ರಕಟಿಸಿದ ಅವರ ಸಾಹಸಕ್ಕೆ ಬೆಲೆಗೆ ಪಾಟಿಯಿಲ್ಲ. ಕವಿಯೊಬ್ಬ ಕವಿ ಅಸ್ಪೃಶ್ಯನಾದಾಗ ಸರ್ವಜ್ಞನಾಗಿಯೂ ತಮ್ಮ ಸ್ವಾಂತಸೆಂದು ದೇಶದಲ್ಲಿ ಅವರು ಮೆರೆಯುತ್ತಿದ್ದರು. ಸರ್ವಜ್ಞನ ತ್ರಿಪದಿಗಳ ಪರಿಷ್ಕರಣ ಮತ್ತು ಅದರ ಮುನ್ನುಡಿಯನ್ನು ಸಿದ್ಧಗೊಳಿಸಲು ಇವರು ಅವನ್ನು ೫೦೦೦ ಬಾರಿ ಓದಬೇಕಾಯಿತಂತೆ. ಅವರ ಅಗಾಧ ಪಾಂಡಿತ್ಯಕ್ಕೆ ಇದೊಂದೇ ಸಾಕ್ಷಿ ಸಾಲದೆ?

ಉತ್ತಂಗಿಯವರಿಗೆ ಅನುಕೂಲವಿದ್ದೂ ಭಾಗ್ಯ ದೊರೆತಿದ್ದರೂ ಅವರ ದೀರ್ಘಕಾಲದ– ಶಾಶ್ವತ ಅಸ್ವಸ್ಥತೆಯಿಂದು ಕೌಟುಂಬಿಕ ಜೀವನದ ರಸವನ್ನು ಕಸಿದುಬಿಟ್ಟಿದೆ. ಅವರಿಗಿಂದು ರಸವಾಯುಯೆಂದರೆ ಸರ್ವಜ್ಞ.

ನಾರಾಯಣ ವಾಮನ ತಿಲಕರ ಚರಿತ್ರೆ, ಭಗವದ್ಗೀತೆಯ ಇಂಗ್ಲೀಷ ಅಧ್ಯಯನಗ್ರಂಥ, ಲಿಂಗಾಯತ ಧರ್ಮದ ಬಗ್ಗೆ ಒಂದು ಇಂಗ್ಲೀಷ್ ಗ್ರಂಥ, ಪ್ರೇಮ ಮತ್ತು ತ್ಯಾಗದ ಬಗ್ಗೆ ಒಂದು ಇಂಗ್ಲೀಷ್ ಕಾವ್ಯ ಇವಲ್ಲದೆ ಹಲವು ಕನ್ನಡ ಇಂಗ್ಲೀಷ ಲೇಖನಗಳು ಉತ್ತಂಗಿಯವರ ಹೆಸರನ್ನು ಅಮರವಾಗಿ ಮಾಡಿವೆ. ೧೯೪೬ ರಲ್ಲಿ ಅವರ ಷಷ್ಠ್ಯಬ್ದ ಪೂರ್ತಿಯಾದಾಗ ಹುಬ್ಬಳ್ಳಿಯ ನಾಗರಿಕರು ಅವರನ್ನು ಒಂದು ಗ್ರಂಥ ಸಮರ್ಪಣೆಯಿಂದ ಸನ್ಮಾನಿಸಿದರು. ಇಂದು ೬೭ ವರ್ಷಗಳ ಸುದೀರ್ಘ ಅವಿಶ್ರಾಂತ ಸೇವಾಜೀವನದ ನಂತರ ಕರ್ನಾಟಕ ತನ್ನ ಸೇವಕರಿಗೆ ಕೊಡಬಲ್ಲ ಅತಿ ದೊಡ್ಡ ಗೌರವವಾದ ಸಮ್ಮೇಲನಾಧ್ಯಕ್ಷತೆ ಅವರಿಗೆ ದೊರೆತಿದೆ.

ಹಿರಿಯೋಲಗದಲ್ಲಿ ಒಂದು ವಾರ

ಕಳೆದ ವಾರದಲ್ಲಿ ಹಿರಿಯೋಲಗದಲ್ಲಿ ಜಾನ ಮತ್ತಾಯರ ಮುಂಗಡ ಪತ್ರದ ಚರ್ಚೆಯೆ ಬಹು ಕಾಲವನ್ನು ಆಕ್ರಮಿಸಿತ್ತು. ಸಾಮಾನ್ಯ ಚರ್ಚೆ ಮೂರು ದಿನಗಳ ವರೆಗೆ ನಡೆದು, ಸೋಮವಾರದಿಂದ ಬೇಡಿಕೆಗಳ ಮೇಲೆ ಮತಗಣನೆ ಪ್ರಾರಂಭವಾಯಿತು.

ಬೆಂಬಲಿಗರಿಲ್ಲ

ಡಾ. ಜಾನ್ ಮತ್ತಾಯರ ಮೊದಲನೆ ಮುಂಗಡ ಪತ್ರಕ್ಕೆ--ಸ್ವತಂತ್ರ ಭಾರತದ ಎರಡನೆಯದು—ಸಭೆಯಲ್ಲಿ ಗೆಳೆಯರೇ ಇರಲಿಲ್ಲ. ಬಂಡವಳಗಾರ ಗುಂಪಿನ ಸರ್ ಹೋಮಿ ಮೋದಿಯವರೇ ಹೆಚ್ಚು ಕಡಿಮೆ ಅದರ ಏಕಮಾತ್ರ ಬೆಂಬಲಿಗರಾಗಿದ್ದರೆಂದು ಹೇಳಬಹುದು. ಸಾಮಾನ್ಯವಾಗಿ ಟೀಕಾಜೀವಿಗಳಾದ ಪ್ರೊ. ಕೆ. ಟಿ. ಶಹಾ, ಟಿ. ಪ್ರಕಾಶಂ, ಬಿ. ಶಿವರಾವ ಮೊದಲಾದವರನ್ನು ಬಿಟ್ಟರೂ ಕಾಂಗ್ರೆಸ್ ಅಧ್ಯಕ್ಷ ಡಾ. ಪಟ್ಟಾಭಿ, ಆಚಾರ್ಯ ಕೃಪಲಾನಿ ಇವರಂಥ ಪಳಗಿದ ಹೊಣೆಗಾರ ಮುಂದಾಳುಗಳಿಂದಲೂ ಅದು ಖಂಡನೆಯನ್ನು ಸಹಿಸಬೇಕಾಯಿತು.

ಪಂ. ಹೃದಯನಾಥ ಕುಂಜರು ಅವರು ಎಂದಿನಂತೆ ತುಂಬ ವಿಚಾರಪೂರ್ಣ ಭಾಷಣ ಮಾಡಿ ಮಿತವ್ಯಯದ ಬಗ್ಗೆ ಅರ್ಥ ಮಂತ್ರಿಗಳು ತಳೆದ ಉದಾಸೀನ ಧೋರಣೆಯ ಬಗ್ಗೆ ವಿಷಾದಪಟ್ಟರು. ಅಂಚೆ ಕಾರ್ಡು ಪರದ ಹೆಚ್ಚಳ ಮಧ್ಯಮ ಮತ್ತು ಒರಟು ಬಟ್ಟೆಗಳ ಮೇಲಿನ ಸುಂಕಗಳನ್ನು ಅವರು ವಿರೋಧಿಸಿದರು. ಸಂರಕ್ಷಣ ವೆಚ್ಚದ ಬಗ್ಗೆ ಅವರದೇನೂ ಆಕ್ಷೇಪವಿದ್ದಿಲ್ಲವಾದರೂ ಸೈನಿಕರ ಸುಖ ಸೌಕರ್ಯಗಳ ಕಡೆ ಹೆಚ್ಚು ಗಮನ ಬೇಕೆಂದು ಹೇಳಿದರು. ಪ್ರೊ. ಶಹಾರು ಸಂರಕ್ಷಣ ವೆಚ್ಚದ ಸೂಕ್ಷ್ಮ ಪರಿಶೀಲನೆ ಅವಶ್ಯವೆಂದು ಹೇಳಿದರೆ ಅಗ್ನಿಭಕ್ಷಕ ಟಿ. ಪ್ರಕಾಶಂ ಅವರು ಬಡವರನ್ನು ಇನ್ನಷ್ಟು ಬಡವರಾಗಿಯೂ ಶ್ರೀಮಂತರನ್ನು ಮತ್ತೂ ಶ್ರೀಮಂತರಾಗಿಯೂ ಮಾಡುವ ಮುಂಗಡಪತ್ರವಿದೆಂದರು. ಬಡವರ ತಿಂ ಕತ್ತರಿಸಿ ಉದ್ದಿಮೆದಾರರಿಗೆ ಸವಲತ್ತು ಕೊಟ್ಟದ್ದನ್ನು ಶ್ರೀ ಮುಕುಟ ಬಿಹಾರಿಲಾಲರು ಖಂಡಿಸಿದರು. ಶ್ರೀ ಭಾರ್ಗವರು ನೋಟುಗಳನ್ನು ರದ್ದುಗೊಳಿಸಿ ಅತಿಪ್ರಸರಣವನ್ನು ತಡೆಯಬೇಕೆಂದರು. ಶ್ರೀ ಬಿ. ಶಿವರಾಯರು ಸೆಕ್ರೆಟೇರಿಯಟ್ ಕಚೇರಿಗಳಲ್ಲಿ ತಾನೇ ತಾನಾಗಿ ಮೆರೆಯುತಿರುವ ಅಸಾಮರ್ಥ್ಯವನ್ನು ಮಂತ್ರಿಗಳ ಲಕ್ಷ್ಯಕ್ಕೆ ತಂದುಕೊಟ್ಟರು. ಶ್ರೀ ಕೃಷ್ಣಚಂದ್ರರಿಗೆ ಇಂಥ ಮುಂಗಡ ಪತ್ರವನ್ನು ಶಾರಕೂನರೂ ಸಿದ್ಧಗೊಳಿಸಬಲ್ಲರೆನಿಸಿತು.

ಆಚಾರ್ಯ ಕೃಪಲಾನಿಯವರ ಭಾಷಣ ಅತ್ಯಂತ ಕಟು-ವ್ಯಂಗ್ಯವಾಗಿತ್ತು. ಕಾಂಗ್ರೆಸ್ಸು ಬಡವರಿಗೆ ಕೊಟ್ಟ ವಚನಗಳ ಸರ್ಪ ಹಳೆಯದಾಗಿದೆ. ಬಂಡವಳಗಾರರಿಗೆ ಹೊಸ್ಸ ಹೊಸ್ಸ ವಚನಗಳ ಡಲಾಗಿದೆ. ಅಂದ ಮೇಲೆ ಹೊಸ್ಸ ಹೊಸ್ಸ ವಚನವನ್ನ ಡಾ. ಮತ್ತಾಯರು ಪಾಲಿಸಿದ್ದು ನ್ಯಾಯ. (ನಗು). ನಮ್ಮ ಅಂತರ್‌ರಾಷ್ಟ್ರೀಯ ಸ್ಥಾನಮಾನ ಬೆಳೆದಿದೆ. ನಮಗೆ ಸ್ವದೇಶದಲ್ಲಿಗಿಂತಲೂ ಪರದೇಶಗಳಲ್ಲೆ ಹೆಚ್ಚು ಸ್ವರಾಜ್ಯ ಸಿಕ್ಕಿರುವಂತೆ ಕಾಣುತ್ತದೆ. ಅಂತೆಯೆ ಕಾಶ್ಮೀರದ ಅಂತರಿಕ ಪ್ರಶ್ನೆಯನ್ನು ಅಂತರ್‌ರಾಷ್ಟ್ರೀಯ ಸಂಸ್ಥೆಗೆ ಒಯ್ಯಲಾಯಿತು . . . ಮಹಾತ್ಮಾಗಾಂಧಿಯವರ ಕೊಲೆಯ ಪ್ರಕರಣದ ತೀರ್ಪಿನಲ್ಲಿ ನ್ಯಾಯಾಧೀಶರು, ಪೋಲೀಸರು ದಕ್ಷರಿದ್ದರೆ ಮಹಾತ್ಮರನ್ನುಳಿಸಬಹುದಾಗಿತ್ತೆಂದು ಹೇಳಿದ್ದಾರೆ. ಹೀಗಾಗಲು ಕಾರಣರಾದವರನ್ನು ದಂಡಿಸಲು ಸರಕಾರ ಏನು ಮಾಡುವದು? ಇಂಗ್ಲಂಡ ಅಥವಾ ಜಪಾನದಲ್ಲಿ ಹೀಗಾಗಿದ್ದರೆ ಹೊಣೆಗಾರ ಅಧಿಕಾರಿ ಆತ್ಮಹತ್ಯೆ ಮಾಡಿಕೊಳ್ಳುತಿದ್ದ . . . ಮಹಾತ್ಮರು ಬಯಸಿದ ಪ್ರಜಾಸತ್ತೆ ಇಲ್ಲಿ ಸ್ಥಾಪಿಸಲ್ಪಡಬೇಕಾದರೆ ಮೊದಲು ಆಡಳಿತವನ್ನು ಸುಧಾರಿಸಬೇಕು, ಎಂದು ಅವರು ಹೇಳಿದರು.

"ಬಡವರನ್ನು ಸುಲಿಯುವ ಪತ್ರ" ವೆಂಬ ವಿಲಾದ ಟೀಕೆಗಳಲ್ಲದೆ ಉದ್ದಿಮೆಗಳ ರಾಷ್ಟ್ರೀಕರಣದ ಬಗ್ಗೆ ಅನಿಶ್ಚಿತವಾದ ಧೋರಣವನ್ನು ಸರಕಾರದವರು ತಳೆಯುದುದು ತುಂಬ ಟೀಕೆಗಳಿಗೆ ಕಾರಣವಾಯಿತು. ಸಾಮ್ಯವಾದಿ ಅಥವಾ ಬಂಡವಲವಾದಿ ಇವುಗಳಲ್ಲೊಂದು ಹಾದಿಯನ್ನಾರಿಸಿಕೊಳ್ಳದೆ ಹೊಯ್ದಾಡುತಿರುವದೇ ಎಲ್ಲ ತೊಂದರೆಗಳ ಮೂಲವೆಂದು ಪಂ. ಕುಂಜರು, ಡಾ. ಪಟ್ಟಾಭಿ ಮೊದಲಾದವರು ಅಭಿಪ್ರಾಯಪಟ್ಟರು.

—ರೆ—ರೆ—ರೆ

ಸಮರ್ಥಕರಾರೂ ಇಲ್ಲದಿರುವಾಗ ಅರ್ಥ ಮಂತ್ರಿಗಳು ತಮ್ಮನ್ನು ತಾವೇ ಸಮರ್ಥಿಸಿಕೊಳ್ಳದೆ ವಿಧಿಯಿರಲಿಲ್ಲ. ಅದನ್ನು ಅವರು ರಭಸದಿಂದಲೆ ಮಾಡಿಕೊಂಡರು. ಅವರು ಭವಿಷ್ಯತ್ತಿನ ಚಿತ್ರವನ್ನೂ ಸುಂದರವಾಗಿ ಬರೆದರು. ಆದರೆ ಅದು ಅನೇಕ "ರೆ" ಗಳಿಂದ ತುಂಬಿ ಹೋಗಿತ್ತು. ಕಾಶ್ಮೀರದಲ್ಲಿ ಪರಿಸ್ಥಿತಿ ಚುಕ್ತಿ ಹದಗೆಡದಿದ್ದರೆ, ಪ್ರಾಂತಿಕ ಸರಕಾರಗಳು ಧಾನ್ಯ ಎತ್ತುವಳಿಯನ್ನು ಸುಧಾರಿಸಿದರೆ, ಅನಿರೀಕ್ಷಿತ ಘಟನೆಗಳು ಸಂಭವಿಸದಿದ್ದರೆ, ಮತ್ತೊಂದು ಯುದ್ಧದ ಪರಿಸ್ಥಿತಿ ಪ್ರಾಪ್ತವಾಗದಿದ್ದರೆ, ಇನ್ನೊಂದು ಆರ್ಥಿಕ ದುಸ್ಥಿತಿ ಬಂದೊದಗದಿದ್ದರೆ, ಮುಂದಿನ ವರ್ಷದ ಮುಂಗಡ ಪತ್ರಿಕೆಯ ಕಾಲಕ್ಕೆ ಆರ್ಥಿಕ ಪರಿಸ್ಥಿತಿ ಸುಧಾರಿಸಿದ್ದು ಕಂಡುಬರಬಹುದು.... ಮತ್ತಾಯರು ಉದ್ದಿಮೆದಾರರನ್ನು ಕುರಿತು, ಒಂದು ಎಚ್ಚರಿಕೆ ಕೊಟ್ಟರು: ಸರಕಾರದ ಪರವಾಗಿ ಇವರಿಗೆ ಅಭಯ ಕೊಡುವದೇ ಈ ಮುಂಗಡ ಪತ್ರಿಕೆಯ ಉದ್ದೇಶ. ಇದಕ್ಕೆ ಸಾಲದೆಂದು ಗೊಣಗುಟ್ಟಿದರೆ ಅವರ ಮನೋವೃತ್ತಿಯುಳ್ಳ ಏನೋ ದೋಷವಿದೆಯೆಂದಾಗುವದು. ಇದು ಉದ್ದಿಮೆಗಾರರಿಗೊಂದು ಆಹ್ವಾನ... ಇತ್ಯಾದಿ.

(ಮ ನೇ ಪುಟಕ್ಕೆ)

ಹೋಳಿ ಹುಣ್ಣಿವೆ

(ರಾಮಕೃಷ್ಣ ಹೆಗಡೆ, ಕಾಶೀವಿದ್ಯಾಪೀಠ)

ಹೋಳೀಹುಣ್ಣಿವೆಯು ಹಿಂದುಗಳ ದೊಡ್ಡ ಹಬ್ಬಗಳಲ್ಲೊಂದು. ಹಿಂದುಸ್ತಾನದ ಈ ತುದಿಯಿಂದ ಆ ತುದಿಯ ವರೆಗೂ ಈ ಹಬ್ಬವು ಬಹು ಉತ್ಸಾಹ ಆನಂದಗಳೊಡನೆ ಆಚರಿಸಲ್ಪಡುತ್ತದೆ. ಅದರೂ ಉತ್ತರ ಭಾರತದಲ್ಲಿ ಇದಕ್ಕೆ ಮಹತ್ವ ಹೆಚ್ಚು.

ಹೋಳಿಯಲ್ಲಿ ಹುಡುಗರ ಹಾರಾಟವೇ ಹೆಚ್ಚು. ಅಂದು ಅವರಿಗೆ ಪೂರ್ಣ ಸ್ವತಂತ್ರತೆ. ಅವರ ಹುಂಡಾಟಿಕೆಯು ಆ ದಿನ "ಎವರೆಸ್ಟ"ಗೆ ಮುಟ್ಟಿರುತ್ತದೆ! ಅದಕ್ಕಾಗಿಯೇ ಇರಬೇಕು, ಮಗುವು ತೀರಾ ಹಟ ಮಾಡಿದಾಗ ತಾಯಿಯು, "ಏನು ಹೋಳಿಹೊಯ್ಯುತ್ತೀಯೋ?" ಎಂದು "ಹೋಳಿ"ಯ ನೆನಪು ಮಾಡಿ ಗದರಿಸುವಳು.

ಹೀನರ ಹಬ್ಬ!

ಪ್ರಾಚೀನ ಕಾಲದಲ್ಲಿ ವರ್ಣಕ್ಕೆ ಅನುಸಾರವಾಗಿ ಹಬ್ಬಗಳೂ ವಿಭಾಗಿಸಲ್ಪಟ್ಟಿದ್ದವಂತೆ. ಬ್ರಾಹ್ಮಣರದು ಚತುರ್ದಶಿ, ಕ್ಷತ್ರಿಯರದು ವಿಜಯಾದಶಮಿ ವೈಶ್ಯರದು ದೀಪಾವಳಿ ಮತ್ತು ನಾಲ್ಕನೆಯವರ ಪಾಲಿಗೆ ಹೋಳಿಹುಣ್ಣಿವೆ. ಆದರೆ ಇಂದು ವರ್ಣಗಳು ಕಲಬೆರಿಕೆಯಾಗಿ ಹೋಗಿರುವಂತೆ ಈ ಭೇದದ ಅಸ್ತಿತ್ವವೂ ಅಳಿಸಿ ಹೋಗಿದೆ. ಈಗ ಯಾರಾದರೂ ಹೋಳಿಯು ಹೀನರ ಹಬ್ಬವೆಂದರೆ ನಗುವ ಮಾತಾದೀತು!

ಉತ್ತರ ಭಾರತದಲ್ಲಿ ಹೋಳೀಹಬ್ಬವೆಂದರೆ ಒಂದು ಅಪೂರ್ವ, ಅಪ್ರತಿಮ ಉತ್ಸಾಹದ ದಿನ. ಹುಡುಗರು-ಹಿರಿಯರು, ಮುದುಕರು-ತರುಣರು, ಹೆಂಗಸು-ಗಂಡಸರು, ಬ್ರಾಹ್ಮಣರು-ಶೂದ್ರರು-ಎಲ್ಲರೂ ಸಮಾನವಾಗಿ ಆ ದಿನದ ಆನಂದದಲ್ಲಿ ಭಾಗಿಗಳಾಗುವರು.

ಒಂದು ಅಗತ್ಯದ ಕೆಲಸದ ಮೂಲಕ ಆ ದಿನ ಬೆಳಗ್ಗೆ ನಮ್ಮ ಪ್ರೊಫೆಸರ ಶಾಸ್ತ್ರಿಯವರ ಮನೆಗೆ ಹೋಗಬೇಕಾಗಿ ಬಂತು. ಇನ್ನೂ ಆ ಹೊಡೆದಿರಲಿಲ್ಲ. ಅದು ಹಬ್ಬದ ದಿನವೆಂದು ನನ್ನ ಲಕ್ಷದಲ್ಲಿರಲಿಲ್ಲ. ಬಾಗಿಲನ್ನು ದಾಟಿ ಒಳಗೆ ಕಾಲಿಟ್ಟಿದ್ದೇ ತಡ, ಎರಡೂ ಪಕ್ಕಗಳಿಂದ ಪಿಚಕಾರಿಗಳು ಜೊಳ್ಳನೆ ಹಾರಿದವು. ನನ್ನ ಮೈಮೇಲಿದ್ದ ಆದೇ ಟ್ರಂಕಿನಿಂದ ತೆಗೆದ ಬಟ್ಟೆಗಳು ರಕ್ತ-ರಂಗಿನಿಂದ ಚನ್ನಾಗಿ ತೊಯ್ದು ಹೋಗಿದ್ದವು. ನಾನು ಪೆಚ್ಚಾಗಿ ಎರಡೂ ಕಡೆಗೆ ದೃಷ್ಟಿ ಕೆಡವಿದೆ. ನಸುನಗುವಿನ ವಿಜಯೀ ಮುದ್ರೆಯ ಪ್ರೊ. ಶಾಸ್ತ್ರಿಯ ಹುಡುಗಿಯರಿಬ್ಬರು! ತುಸು ಸಲಿಗೆಯಿದ್ದುದರಿಂದ ನಾನು ರೇಗಿದವನಂತೆ ನಟಿಸಿ ಗದರಿಸಬಯಸಿದೆ. ಆದರೆ ಪರಾಭವ. "ಬುರಾ ನ ಮಾನೋ, ಹೋಲಿ ಹೈ. ಇಂದುಸಿಟ್ಟುಗಿಟ್ಟುಮಾಡೋದಿನವಲ್ಲಪ್ಪ," ಎಂದು ಕಿರಿಯಹುಡುಗಿ ಅಭಿನಯಪೂರ್ವಕವಾಗಿ ಹೇಳುವಷ್ಟರಲ್ಲಿ, ಅವಳ ಅಕ್ಕನು 'ಮಸಾಲೆ'ಯನ್ನು ಹಿಡಿದು ನಿಂತಿದ್ದಳು.

"ಮಸಾಲೆ" ಎಂದರೆ ಒಂದು ಬಗೆಯ ಕಜ್ಜಾಯದಿಂದೊಡಗೂಡಿದ ವೀಳ್ಯ. ಹೋಳಿಯ ದಿನ ಪ್ರಿಯ ಜನರಿಗೆ ಬಣ್ಣಬಳಿದು "ಮಸಾಲೆ"ಯನ್ನು ತಿನ್ನಿಸುವದು ಇಲ್ಲಿಯ ರೂಢಿ.

ಬುರಾ ನ ಮಾನೋ!

ಹೋಳಿಯ ದಿನ ಒಬ್ಬರಿಗೊಬ್ಬರು ಏನೇ ಮಾಡಿದರೂ ಅದನ್ನು ಯಾರೂ ಮನಸ್ಸಿಗೆ ಹಚ್ಚಿಕೊಳ್ಳಲಾಗದು. ಬಣ್ಣ ಬಡಿಯಲಿ, ಬಟ್ಟೆ ಹರಿಯಲಿ, ಎಂಥ ಹಾನಿಯೇ ಆಗಲಿ, ಅದು ರೇಗಿಕೊಳ್ಳುವ ದಿನವಲ್ಲ. ನಮ್ಮ ಸಾಮಾನುಗಳನ್ನು ತುಂಟರು ಗೊತ್ತಿಲ್ಲದಂತೆ ಚೂರು ಚೂರು ಮಾಡಿ, ನಮ್ಮ ಮುಂದಿರಿಸಿ, "ಬುರಾ ನ ಮಾನೋ ಹೋಲಿ ಹೈ!" ಎಂದು ಜೊತೆಗೆ ಅಟ್ಟಹಾಸದ ನಗೆ ನಕ್ಕಾಗಲೂ ನಾವು ಪಕಮಕ ನೋಡುತ್ತ ತೆಪ್ಪಗೆ ಕೂಡ್ರಬೇಕಾಗುವದು!

ಉತ್ತರ ಮತ್ತು ದಕ್ಷಿಣ ಭಾರತದಲ್ಲಿ ಹೋಳಿ ಹಬ್ಬವು ಒಂದೇ ದಿನ ಜರಗುವದಾದರೂ ಮತ್ತು ಅದರ ರೀತಿಯೂ ಸಾಮಾನ್ಯವಾಗಿ ಒಂದೇ ತೆರನಾಗಿರುವದಾದರೂ ಹಬ್ಬದ ಅರ್ಥವೂ ಅದರ ಹಿನ್ನೆಲೆಯೂ ತೀರ ಭಿನ್ನವಾಗಿವೆ.

ನಮ್ಮಲ್ಲಿ ಹೋಳಿ ಎಂದರೆ ಕಾಮನದಹನ. ಕಾಮನು ಶಿವನ ಹಣೆಗಣ್ಣಿನಿಂದ ಭಸ್ಮನಾದ ಸ್ಮರಣೆಗಾಗಿ ಈ ಹಬ್ಬ. ಕಾಮನ ಬೊಂಬೆಯನ್ನು ಸ್ಥಾಪಿಸಿ ಕೊನೆಗೆ ಹಬ್ಬದ ದಿನ ಅದನ್ನು ಸುಡುವ ಶಾಸ್ತ್ರ ಮಾಡುತ್ತೇವೆ. ಆದರೆ ಇಲ್ಲಿ ಯಥಾಪ್ರಕಾರ ನಮ್ಮಲ್ಲಿಯಂತೆ ಕಟ್ಟಿಗೆ ರಾಶಿಯು ಬೂದಿಯಾಗುವದಾದರೂ ಅದಕ್ಕೂ ಇದಕ್ಕೂ ಏನೂ ಸಂಬಂಧವೇ ಇಲ್ಲ. ಆ ಕಲ್ಪನೆಯೂ ಇಲ್ಲಿಯವರಿಗಿಲ್ಲ. ಇಲ್ಲಿಯ ಕಥೆಯೇ ಬೇರೆ ಇದೆ.

ಪ್ರಹ್ಲಾದನ ಅಕ್ಕ

ಹೋಲಿಕಾ ಪ್ರಹ್ಲಾದನ ಅಕ್ಕ. ಹಿರಣ್ಯಕಶಿಪುವಿನ ಮಗಳು. ಆಕೆಗೆ ದೇವರದೊಂದು ವರವಿತ್ತನಂತೆ, ಒಂದು ಪೀತಾಂಬರವನ್ನುಟ್ಟು ಬೆಂಕಿಯಲ್ಲಿ ಮುಳುಗಲಿ, ಸಮುದ್ರದಲ್ಲಿ ಹಾರಲಿ, ಆನೆಯ ಕಾಲಡಿಗಾಗಲಿ- ಆಕೆಯ ಕೂದಲೂ ಕೊಂಕಲಾರದೆಂದು.

ಭಕ್ತ ಶಿರೋಮಣಿ ಪ್ರಹ್ಲಾದನ ಹರಿಭಕ್ತಿಯು ಹೆಚ್ಚಾದಂತೆ ಹಿರಣ್ಯ ಕಶಿಪುವಿಗೆ ಆ "ಉಪಟಳ" ವನ್ನು ಕಡಿದುಕೊಳ್ಳುವ ಚಿಂತೆಯೂ ಬೆಳೆಯಿತು. ಪ್ರಹ್ಲಾದನನ್ನು ಕೊಲ್ಲುವ ಅನೇಕ ಪ್ರಯತ್ನಗಳು ವ್ಯರ್ಥವಾಗಲು ಅವನ ಕೋಪಕ್ಕೆ ಮೇರೆ ಉಳಿಯಲಿಲ್ಲ. ಪ್ರಹ್ಲಾದನನ್ನು ಕೊಲ್ಲದೆ ನೆಮ್ಮದಿಯಿರಲಿಲ್ಲ ಅವರ ಮನಸ್ಸಿಗೆ. ಆದಕ್ಕಾಗಿ ಮತ್ತೊಂದು ಉಪಾಯವನ್ನು ಹುಡುಕಿದ. ಉರಿಯುವ ಬೆಂಕಿ! ಆದರೆ ಮೋಸದಿಂದ ಮಾಡಬೇಕಿತ್ತು. ಅದಕ್ಕಾಗಿ ಮಗಳ ವರದ ಚನ್ನಾದ ಉಪಯೋಗ ಮಾಡಿಕೊಳ್ಳುವೆನೆಂದು ಪ್ರಹ್ಲಾದನನ್ನು ಎತ್ತಿಕೊಂಡು ಆಕೆ ಧಗಧಗಿಸುವ ಬೆಂಕಿಯಲ್ಲಿ ಹಾರಿದರೆ ಆಕೆಗೇನೂ ಆಗದು ಎಂದುಕೊಂಡ. ಏನು ಚಮತ್ಕಾರವಾಯಿತೋ, ಹೋಲಿಕಾಳಪೀತಾಂಬರವುಪ್ರಹ್ಲಾದನನ್ನು ಸುತ್ತಿಕೊಂಡಿತು. ಪರಿಣಾಮವಾಗಿ ಪ್ರಹ್ಲಾದನು ಇದ್ದಂತೆ ಇದ್ದ. ಹೋಲಿಕಾ ಬೂದಿಯಲ್ಲಿ ಬೆರತಿದ್ದಳು. ಕೆಟ್ಟದ್ದು ಅಳಿದು ಒಳ್ಳೆಯದು ಉಳಿಯಿತು. ದುಷ್ಟರ ನಾಶ, ಶಿಷ್ಟರ ಪರಿಪಾಲನೆ, ಇದೇ ಇಲ್ಲಿಯ ಹೋಳಿಯ ಹಿನ್ನೆಲೆ. ಸದಸತ್‌ಗಳ ದ್ವಂದ್ವದಲ್ಲಿ ಅಸತ್ತಿನ ಅಂತವಾಗಿ ಸತ್ತಿನ ಸ್ಥಾಪನೆಯಾದುದರ ಕುರುಹು, ನೆನಗಿಗಾಗಿ ಇಲ್ಲಿಯ ಹೋಲಿ!

ಉತ್ತರ-ದಕ್ಷಿಣ ಭಾರತದಲ್ಲಿ ಹೀಗೆ ಹಬ್ಬವೊಂದೇ ಅದರೂ ಹಿನ್ನೆಲೆ ಬೇರೆ ಏಕಾಯಿತೆಂಬುದು ಗಹನವಾದ ಮತ್ತು ಮತಭೇದದ ಪ್ರಶ್ನೆ. ಬಹುಶಃ ದಕ್ಷಿಣದಲ್ಲಿ ಶೈವರ ಪ್ರಾಬಲ್ಯವಿರುವದರಿಂದ ಅವರು ಇದನ್ನು ತಮ್ಮ ಸಿದ್ಧಾಂತಕ್ಕನುಸರಿಸಿ ಮಾರ್ಪಡಿಸಿಕೊಂಡಿರಲೂ ಬಹುದು.

ಒಂದು ತಿಂಗಳ ಸಿದ್ಧತೆ

ಇಲ್ಲಿ ಹಬ್ಬವು ಎರಡು ದಿನ ನಡೆಯುವದು. ಹುಣ್ಣಿಮೆಯ ದಿನ ಮತ್ತು ಮಾರನೆಯ ದಿನ ಹಬ್ಬದ ಸಿದ್ಧತೆಯು ಬಹು ಮೊದಲಿನಿಂದಲೇ ನಡೆಯುತ್ತದೆ. ತಿಂಗಳೊಂದರ ಮೊದಲೇ ಅಂದರೆ ಮಾಘದ ಹುಣ್ಣಿವೆಯ ದಿನವೇ ಕುಳ್ಳುಕಟ್ಟಿಗೆಗಳನ್ನು ಕೂಡಿಸುವ ಶಾಸ್ತ್ರವಾಗುವದು ಕೂಡಿ ಒಂದು ನಿರ್ದಿಷ್ಟ ಜಾಗದಲ್ಲಿ ಅಂದರೆ ಸುಡುವ ಸ್ಥಾನದಲ್ಲಿ ಅವನ್ನು ಒಟ್ಟುವರು. ಬೇಡಿ ಕಾಡಿ ಸಿಗದಿದ್ದರೆ ಕಳಲೂ ಅಧಿಕಾರವಿದೆ. ಅದಕ್ಕಾಗಿ ಶಿಕ್ಷೆಯಿಲ್ಲ. ಒಮ್ಮೆ ಸ್ಥಾನವನ್ನು ಸೇರಿದ ಮೇಲೆ ಯಾರ ಅಧಿಕಾರವೂ ನಡೆಯದು. ಮಕ್ಕಳು ಮನೆಮನೆಗೆ ಹೋಗಿ ವಂತಿಗೆಯನ್ನೂ ಸಾಮಾನನ್ನೂ ಎತ್ತುವರು. ಆಗ ಅವರು ಹಾಡುವ ಹಾಡಿನ ಮೊದಲು ಸಾಲು ನನಗೆ ನೆನಪಿದೆ:

> ಏಕಕಕ ಜಜಮಾನಿ, ತೋರಾ ಸೋನೆಕೆಕೇವಾರಿದು ಗಂಡಾ ಗುಯಿಕಾ ದಕಕ

ಅಂದರೆ, "ಏ, ಹೆಗ್ಗಡಿತಿ, ನಿನ್ನ ಮನೆಯಂದರೆ ಬಂಗಾರದ ರಾಶಿ, ನಮಗೊಂದರ್ಧ ಚೂರುಗಳನ್ನು ಕೊಡು."

ಏನಿದ್ದರೂ ಮಹಾ ಹುಣ್ಣಿವೆಯ ದಿನ. ಬೆಳಗಿನಿಂದ ಸಂಜೆಯವರೆಗೂ ಅಂದು ಓಕಳಿ ಆಟ. ಮಕ್ಕಳಿಂದ ಮುದುಕರ ವರೆಗೆ ಎಲ್ಲರೂ ಆ ದಿನ ಬಣ್ಣದಲ್ಲಿ ಮುಳುಗಿರುತ್ತಾರೆ. ಅಂದು ಪೇಟೆಯ ರಸ್ತೆಗಳಲ್ಲಿ ತಿರುಗಬೇಕು, ಪಿಚಕಾರಿಯ ಅರ್ಭಾಟವನ್ನು ನೋಡಲು. ರಸ್ತೆಯಲ್ಲಿ ಓಡಾಡುವರೊಬ್ಬರೂ ಪಿಚಕಾರಿಯಿಂದ ತಪ್ಪಿ ಉಳಿಯಲಾರರು. ಅವರು ಬೇಕಾದರೆ ಕರಿಯರಿರಲಿ, ಬಿಳಿಯರಿರಲಿ, ಅಧಿಕಾರಿಯಿರಲಿ, ಪೇದೆಯಿರಲಿ. ಕೆಳಗೆ, ಹುಡುಗರು, ಮೇಲೆ ಅಟ್ಟದಿಂದ ಹುಡುಗಿಯರು. ನಾಲ್ಕೂ ಕಡೆಯಿಂದ ಬಣ್ಣದ ಮಳೆ. ರಸ್ತೆಯೆಂದರೆ ಯುದ್ಧಭೂಮಿಯಂತಾಗುತ್ತದೆ.

ಸಂಜೆಗೆ ಮುಹೂರ್ತಕ್ಕೆ ಸರಿಯಾಗಿ "ಹೋಲಿ"ಗೆ ಬೆಂಕಿ ಇಡುತ್ತಾರೆ. ಜೊತೆಗೆ ಬಾಣ-ಬಿರುಸು ಮದ್ದು-ಗುಂಡು, ನರ್ತನ-ಗಾಯನ.

ಹಗೆಯನ್ನು ಹೋಗಲಾಡಿಸುವ ದಿನ

ದಹನದ ನಂತರ ಸ್ನಾನಮಾಡಿ ಹೊಸ ಬಟ್ಟೆಯನ್ನುಟ್ಟು ಸಮಾನ ವಯಸ್ಕರು ಒಬ್ಬರನ್ನೊಬ್ಬರು ಆಲಿಂಗಿಸುವರು. ಕಿರಿಯರು ಹಿರಿಯರಿಗೆ ವಂದಿಸುವರು. ಅಂದು ವೈರಿಯೊಡನೆಯೂ "ಗಲೆಸೆ ಗಲೆ ಮಿಲಕರ" ಹಗೆತನವನ್ನು ಅಳಿಸುವ ದಿನವೆಂದು ತಿಳಿಯುತ್ತಾರೆ.

ಆದಿನ ಸಂಜೆ ಎಂಟರ ಸುಮಾರಿಗೆ ನನ್ನೊಬ್ಬ ಗೆಳೆಯ "ಗಲೆಸೆ ಗಲೆ ಮಿಲನೆ" ನನ್ನ ರೂಮಿಗೆ ಬಂದಾಗ ಜೇಬಿನಿಂದ ಒಂದು ಪುಡಿಕೆಯನ್ನು ತೆಗೆದು ನನ್ನ ಕೈಯಲ್ಲಿಟ್ಟ. - ಬಿಡಿಸಿದಾಗ, ಅದರಲ್ಲಿ ಬದಾಮು ಮತ್ತು ಕಲ್ಲುಸಕ್ಕರೆಗಳು ಕಂಡುಬಂದವು. ಸೋಜಿಗಗೊಂಡು ಏಕೆಂದು ಕೇಳಲಾಗಿ, ಅಂದು ಪ್ರಿಯ ಮಿತ್ರರಿಗೆ ಈ ವಸ್ತುಗಳನ್ನು "ಭೇಂಟಿ" ಮಾಡುವ ಪದ್ಧತಿ ಇದ್ದುದಾಗಿ ತಿಳಿದು ಬಂತು.

ಮಾರನೆಯ ದಿನವೆಂದರೆ ಊಟ-ವಿಹಾರ, ಆಮೋದ ಪ್ರಮೋದದಿನ. ಹೋಳಿಗಾಗಿ ೨-೩ ಬಗೆಯ "ಸ್ಪೆಶಲ್" ಕಜ್ಜಾಯ ಮಾಡುತ್ತಾರೆ. ಆದಿನ ಮತ್ತೊಂದು ವಿಶೇಷ ವಸ್ತುವೆಂದರೆ "ಭಾಂಗ" ಅರ್ಥಾತ್ ಗಾಂಜಾ ಪಾನಕ ಇಲ್ಲದೆ ಸರಬತ್ತು, ಅಂದು ಇದನ್ನು ಕುಡಿಯದ ಜನರೇ ಇಲ್ಲ. ಮಕ್ಕಳಿಂದ ಹಿಡಿದು ಮುದುಕರವರೆಗೆ ಎಲ್ಲರೂ ಉಂಡ "ಹೊಟ್ಟೆಯಲ್ಲಿ" ಒಂದರ್ಧ ಗ್ಲಾಸನ್ನು ಇಳಿಸಲೇಬೇಕು. ಹೆಸರಿಗೆ ಅದು ಗಾಂಜಾ ಪಾನಕವಾದರೂ ಅದರಲ್ಲಿರುವ ಭಂಗಿಯ ಅಂಶವು ನಾಮಮಾತ್ರಕ್ಕೇ. ಉಳಿದ ಕೇಸರಿ, ಬದಾಮು, ಹಾಲು, ಸಕ್ಕರೆ, ದ್ರಾಕ್ಷಿ ಮೊದಲಾದವುಗಳಿಂದಲೇ ಅದು ತಯಾರಾಗುತ್ತದೆ. ಅಂತೇ ಕುಡಿಯಲೂ ಅಷ್ಟು ಮಧುರ.

ಹೊತ್ತು ಹೋದುದು ತಿಳಿಯದು

ಅಂದು ಎಲ್ಲಿ ನೋಡಿದಲ್ಲಿ ನೃತ್ಯ-ಗಾಯನಗಳು ಕಣ್ಣಿಗೆ ಬೀಳುವವು. ಮೋರೆಗೆ ಕುಂಕುಮ ಬಳಿದುಕೊಂಡು ಭಜನೆಮಾಡುವ ಗುಂಪುಗಳೂ ಅಲ್ಲಲ್ಲಿ ತೋರದೆ ಇರುವದಿಲ್ಲ. ಅನೇಕ ಕಡೆಯಲ್ಲಿ ಕೀರ್ತನೆಗಳೂ ಆಗುವವು. ಸಾಧಾರಣವಾಗಿ ಎಲ್ಲರೂ ಆದಿನ ಮಧ್ಯಾನ್ಹದ ಊಟ ತೀರಿಸಿ ತಿರುಗಾಡಲು ಹೊರಡುತ್ತಾರೆ. ತಿರುಗಿ ಅವರು ಮನೆ ಸೇರುವದು ಬೆಳ್ಳಿ ಮೂಡುವ ಹೊತ್ತಿಗೆ. ಪೇಟೆ ಸುತ್ತಾಡುವದು, ಕೀರ್ತನೆ ಕೇಳುವದು, ನೌಕಾವಿಹಾರ ಮೊದಲಾದವುಗಳಲ್ಲಿಯೇ ತಿಳಿಯದಂತೆ ಅಷ್ಟು ಸಮಯವು ಜಾರಿಹೋಗುತ್ತದೆ.

ಬನಾರಸದಲ್ಲಿ ವಿಹಾರದ ಕೇಂದ್ರ ದಶಾಶ್ವಮೇಧ ಘಾಟ. ಯಾವದೇ ಹಬ್ಬ ಉತ್ಸವವಾದರೂ ಜನರುಒಂದಾಗುವದು ಅಲ್ಲಿ. ಉಳಿದ ದಿನಗಳಲ್ಲಿ ಮನೆಯ ಹೊಸಿಲನ್ನು ದಾಟದ ಇಲ್ಲಿಯ ರಮಣಿಯರು, ಅಂದು ತಮ್ಮ ವಿಶೇಷ ವಸ್ತ್ರಾಭರಣಗಳೊಡನೆ ಅಲ್ಲಿ ಹಾಜರು! ರಯೀಸರ ದರ್ಪ, ಬಂಗಾಲಿ ಯುವತಿಯರ ಹೊಸಹು ಒಯ್ಯಾರ, ಸಾಮಾಜಿಕ ಬಂಧನಗಳಿಗೆ ಸಿಕ್ಕು ಸುಣ್ಣಾದ ಇಲ್ಲಿಯ ಹೆಂಗಸರ ಬಾಡಿದ ಮೋರೆ- ಎಲ್ಲದರ ದರ್ಶನ, ಪ್ರದರ್ಶನ ಅಲ್ಲಿ. ಆನಂದವೇ ಆನಂದ, ಉಲ್ಲಾಸವೇ ಉಲ್ಲಾಸ.

ಹಿಟ್ಟು ಚಲ್ಲಿದ ಹಾಗೆ ಬೆಳದಿಂಗಳು. ನೌಕಾವಿಹಾರ, ಜೊತೆಗೆ ಗೆಳೆಯ ಗೆಳತಿಯರು. ಗಪ್ಪ-ಹರಟೆಗಳ ಪ್ರವಾಹ. ನಗೆಯ ಮಹಾಪೂರ.- ಅನುಭವಿಸಿದರೇ ಅನುಭವವಾಗಬಲ್ಲುದು ಅದರ ಸ್ವಾರಸ್ಯ.

✻ ಮಧ್ಯಪ್ರಾಂತ ಶಾಸನ ಸಭೆಯ ಹೊಸ ಸದಸ್ಯರಾದ ಶ್ರೀಮತಿ ಶುದ್ಧ ಕುಮಾರಿಯವರು ಅಖಿಲ ಭಾರತದಲ್ಲಿ ಅತಿ ಕಡಿಮೆ ವಯಸ್ಸಿನ ಶಾಸನ ಸಭಾಸದರು. ಅವರ ವಯಸ್ಸು ೨೪.

ಉತ್ತಂಗಿಯವರ ಭಾಷಣ

(೨ನೇ ಪುಟದಿಂದ ಬಂದುದು)

ಕ್ರೈಸ್ತರಾದ ನಮ್ಮ ಸಂಸ್ಕೃತಿ ಇಮ್ಮಡಿಯಾದ ಅನುಭಾವ ಸಂಸ್ಕೃತಿ. ಇದನ್ನು ನಾವಿನ್ನೂ ಸರಿಯಾಗಿ ಅರಿತುಕೊಂಡಿಲ್ಲ. ಇದನ್ನರಿತು ಕನ್ನಡ ನಾಡುನುಡಿಗಳ ಸೇವೆಗಾಗಿ ನಾವಿನ್ನು ಮುಂದಾಗಬೇಕು. ಕನ್ನಡ ನಾಡನ್ನು ಕಟ್ಟುವ, ಕನ್ನಡ ನುಡಿಯನ್ನು ಸಂಸ್ಕರಿಸುವ ಮಹಕಾರ್ಯದಲ್ಲಿ ನಾವೆಲ್ಲರು ಕನ್ನಡಿಗರಿಗೆ ನೆರವಾಗಬೇಕು; ಅವರೊಡನೆ ಸಮರಸವಾಗಿ ಬೆರೆತು ಬಾಳಬೇಕು. ಕ್ರಿಸ್ತಸೇವೆ-ಭಾಷಾಸೇವೆ ಇವುಗಳ ಸಮನ್ವಯವೇ ಕನ್ನಡ ಕ್ರೈಸ್ತರ ಹೆಗ್ಗುರಿಯಾಗಿರಲಿ!

ಕೊನೆಯ ಮಾತು

ನಮ್ಮ ನಾಡು ಇನ್ನೂ ಚೆಲುವಾಗಿ ರೂಪುಗೊಳ್ಳಬೇಕಾಗಿದೆ. ನಮ್ಮ ನುಡಿ ಸೂರ್ಯನಾಗಿ ಬೆಳಗಬೇಕಾಗಿದೆ. ನಮ್ಮ ಮುನ್ನಡೆಯ ಹಾದಿಯಲ್ಲಿದ್ದ ಹಲವಾರು ತೊಡಕುಗಳನ್ನು ತೊಡೆದು ಹಾಕಲು ನಮ್ಮ ಸಂಸ್ಕೃತಿಯ ಅಂತಸ್ಸತ್ವವಾದ ಅನುಭಾವವೇ ದಿವ್ಯಾಸ್ತ್ರ. ಕನ್ನಡಿಗರಾದ ನಾವು ಅನುಭಾವದ ಮುಖ್ಯ ತತ್ವಗಳನ್ನು ನಮ್ಮ ಹೃದಯದಲ್ಲಿ ಮೂಡಿಸಿಕೊಂಡು ಕೃತಿಯಲ್ಲಿ ತಂದಾಗ ಮಾತ್ರ ನಮ್ಮಿಂದ ನಿಜವಾದ ಕನ್ನಡ ಸಾಹಿತ್ಯವು ಹೊರಹೊಮ್ಮುವದು. ಈ ಸಂದರ್ಭದಲ್ಲಿ ಬಸವಣ್ಣನವರ ಕೊನೆಯ ವಚನವನ್ನು ಉದ್ಧರಿಸುತ್ತೇನೆ.

"ನಾನು ಬಂದ ಕಾರ್ಯಕ್ಕೆ ನೀವು ಬಂದಿರಿ. ನಾನೂ ನೀವೂ ಬಂದ ಕಾರ್ಯಕ್ಕೆ ಪ್ರಭುದೇವರು ಬಂದರು. ಕಲ್ಯಾಣವೆಂಬುದು ಪ್ರಣತಿಯಾಯಿತ್ತು. ನಾನು ತೈಲವಾದೆ; ನೀವು ಬತ್ತಿಯಾದಿರಿ; ಪ್ರಭುದೇವರು ಜ್ಯೋತಿಯಾದರು. ಪ್ರಣತಿ ಒಡೆದಿತ್ತು; ತೈಲ ಒರೆಯಿತ್ತು; ಜ್ಯೋತಿ ಬಯಲಾಯಿತ್ತು."

ಕನ್ನಡದ ಪ್ರಣತಿ ಜ್ಯೋತಿ ಕಳೆಯದೆ ಕನ್ನಡದ ಮುಂದಿನ ಪೀಳಿಗೆ ಪ್ರಭುದೇವರಂತೆ ಪ್ರಕಾಶಿಸಬೇಕಾದರೆ ಇಂದಿನ ನಾವು ಕೆಲವರು ಚೆನ್ನಬಸವಣ್ಣನವರಂತೆ ಬತ್ತಿಯಾಗಿ ಸುಡಬೇಕು; ಇನ್ನು ಕೆಲವರು ಬಸವಣ್ಣನವರಂತೆ ಎಣ್ಣೆಯಾಗಿಯೂ ಸುಡಬೇಕು: ಕೊನೆಯ ಹನಿಯ ವರೆಗೆ!

ಚಂದಾದಾರರಲ್ಲಿ ವಿನಂತಿ

ಯಾವದೆ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷ್ಯಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ. ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ನಿರಾಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆವೆಚ್ಚ ಸಹಿತ (ಚಂದಾಹಣ ಮುಂಗಡ)

೧ ವರ್ಷ	೬-೪-೦
೬ ತಿಂಗಳಿಗೆ . . .	೩-೪-೦
೩ ,, , . . .	೧-೧೩-೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಹೆಚ್ಚಿಗೆ ಬೀಳುವದು.

ಕಾಂಗ್ರೆಸ್ಸೂ ರಚನಾತ್ಮಕ ಕಾರ್ಯಕರ್ತರೂ

ಗಾಂಧಿಯವರ ಅಮೂಲ್ಯ ಅಸ್ತಿಯನ್ನು ಪಡೆದ ಕಾರಣದಿಂದ ಗಾಂಧಿಯವರ ಲೋಕ ಸೇವಕ ಸಂಘದ ಕಲ್ಪನೆಗೆ ಮೂರ್ತಸ್ವರೂಪವನ್ನು ಕೊಡುವ ಕರ್ತವ್ಯವು ಸ್ವಾಭಾವಿಕವಾಗಿ ರಚನಾತ್ಮಕ ಕಾರ್ಯಕರ್ತರ ಮೇಲೆಯೇ ಬೀಳುವುದು. ಆ ಅಮೂಲ್ಯ ಅಸ್ತಿಯೆಂದರೆ ಜನತೆಗೆ ಅನಾಸಕ್ತ ಮತ್ತು ನಿಃಸ್ವಾರ್ಥ ಸೇವೆ ಸಲ್ಲಿಸುವುದು. ಅದುದರಿಂದ ನ್ಯಾಯ್ಯವಾಗಿಯೇ ಗಾಂಧಿಯವರ ದುರಂತ ಮರಣವಾದ ಕೂಡಲೆ ಭಾರತದ ಎಲ್ಲೆಡೆಯ ರಚನಾತ್ಮಕ ಕಾರ್ಯಕರ್ತರು ಸೇವಾಗ್ರಾಮದಲ್ಲಿ ಸೇರಿ ಸರ್ವೋದಯ ಸಮಾಜವನ್ನು ರಚಿಸಲು ನಿರ್ಧರಿಸಿದರು. ಜಾತಿ ಧರ್ಮಗಳ ಭೇದವಿಲ್ಲದ, ಶೋಷಣಾವಕಾಶ ರಹಿತವಾದ, ವ್ಯಕ್ತಿ ಮತ್ತು ಗುಂಪುಗಳೆರಡರ ಅಭಿವೃದ್ಧಿಗೂ ಸಂಪೂರ್ಣಾವಕಾಶ ಕೊಡುವ ಸತ್ಯಾಹಿಂಸೆಗಳನ್ನು ಆಧರಿಸಿ ನಿಂತ ಒಂದು ಸಮಾಜವನ್ನು ರಚಿಸಲು ಹೆಣಗುವುದೇ ಸರ್ವೋದಯ ಸಮಾಜದ ಗುರಿ. ಗಾಂಧಿಯವರು ಎಣಿಸಿದಂತೆ ಈಗ ಭಾರತದಲ್ಲಿರುವ ಎಲ್ಲ ರಚನಾತ್ಮಕ ಸಂಘಗಳನ್ನೂ ಆದಷ್ಟು ಬೇಗ ಒಂದೇ ಒಂದು ಸಂಘವನ್ನಾಗಿ ಮಾರ್ಪಡಿಸಬೇಕೆಂದು ತೀರ್ಮಾನಿಸಿ, ಅದು ಸರ್ವೋದಯ ಸಮಾಜದ ಕಾರ್ಯವಾಹಕ ಸಮಿತಿಯಾಗಿ ಕೆಲಸ ಮಾಡೀತೆಂಬ ಆಶೆಯನ್ನು ವ್ಯಕ್ತಮಾಡಲಾಯಿತು. ಸುದೈವದಿಂದ ಬೇರೆ ಬೇರೆ ಸಂಘಗಳು ಮಾಡುತ್ತಿರುವ ಚಟುವಟಿಕೆಗಳನ್ನು ಸಂಯೋಜಿಸಲು ಒಂದು ಮಾರ್ಗವನ್ನು ಸಿದ್ಧಗೊಳಿಸಲಾಗಿದೆ. ಅ. ಭಾ. ಸರ್ವಸೇವಾಸಂಘದಲ್ಲಿ ಇಂದಿನ ರಚನಾತ್ಮಕ ಸಂಘಗಳ ಪ್ರತಿನಿಧಿಗಳಿದ್ದಾರೆ ಮತ್ತು ಅದರ ಘಟನೆಯಲ್ಲಿ ಮುಂದೆ ಯಾವುದಾದರೂ ಅಂಥ ಉದ್ದೇಶವಿಟ್ಟುಕೊಂಡ ಸಂಘ ಬಂದರೆ ಅದನ್ನು ಅದೇ ಸ್ಥಾನಮಾನ ಕೊಟ್ಟು ಸೇರಿಸಿಕೊಳ್ಳಲು ಅವಕಾಶವಿದೆ.

ರಚನಾತ್ಮಕ ಕಾರ್ಯಕರ್ತರು ತಮ್ಮ ಈ ಹೊಸ ಕರ್ತವ್ಯವನ್ನು ಹೇಗೆ ಪ್ರಾರಂಭಿಸುವರು? ಅವರು ಕಾಂಗ್ರೆಸ್ಸಿನೊಡನೆ ತಮಗಿದ್ದ ಹಳೆಯ ಸಂಬಂಧವನ್ನು ಇಟ್ಟುಕೊಂಡು ಹೆಚ್ಚಿನ ಸೇವೆಯಿಂದ ಆ ಸಂಬಂಧವನ್ನು ದೃಢಪಡಿಸಿಕೊಳ್ಳುವರೋ? ಕಾಂಗ್ರೆಸ್ಸೂ ರಚನಾತ್ಮಕ ಕಾರ್ಯಕರ್ತರೂ ಪರಸ್ಪರ ಪೂರಕರಾಗುವರೋ? ಸೇವಾಗ್ರಾಮದ ಪರಿಷತ್ತೇನಾದರೂ ಸತ್ಯನಿರ್ದೇಶಕವಾದರೆ ಉತ್ತರ "ಹೌದು" ಎಂದಾಗಬಹುದು. ಅದು ಸರಿಯಾದದ್ದು. ಅ. ಭಾ. ಸರ್ವಸೇವಾ ಸಂಘದ ಇಲ್ಲವೆ ರಚನಾತ್ಮಕ ಕಾರ್ಯಕರ್ತರು ದೈನಂದಿನ ರಾಜಕಾರಣ ಅಥವಾ ವೈಧಿಕ ಚಟುವಟಿಕೆಗಳನ್ನು ಹಚ್ಚಿಕೊಳ್ಳಬೇಕಾದ ಅಗತ್ಯವಿಲ್ಲ; ಆದರೆ ರಾಜಕಾರಣದ ಬಗ್ಗೆ ಮಾತ್ರ ಅವರು ಉಪೇಕ್ಷೆಯಿಂದ ಇರಲಾರರು. [illegible] ಅವರು ಮೂಲತಃ ಕ್ರಾಂತಿಕಾರರಲ್ಲದೆ ಸುಧಾರಕರಲ್ಲ; ಕ್ರಾಂತಿಕಾರನು - ಅದರಲ್ಲೂ ಒಬ್ಬ ಅಹಿಂಸಾತ್ಮಕ ಕ್ರಾಂತಿಕಾರನು- ಅಧಿಕಾರ ಲಾಲಸೆಯ ರಾಜಕಾರಣದಿಂದ ಪ್ರತ್ಯೇಕವಾಗಿ ಇರಬೇಕು, ದೂರವಿರಬೇಕು; ಆದರೆ ಹಾಗೆ ದೂರವಿರುವುದು ಎಲ್ಲ ರಾಜಕಾರಣದಿಂದಲ್ಲ, ಎಲ್ಲ ರಾಜಕೀಯ ಅಧಿಕಾರದಿಂದಲೂ ಅಲ್ಲ. ಸ್ವತಃ ಅವನು ಅದನ್ನು ಭೋಗಿಸಲು ಒಲ್ಲೆನೆನ್ನಬಹುದು; ಆದರೆ ಎಲ್ಲಿಯವರೆಗೆ ಸರಕಾರವಿಲ್ಲದ ಸಮಾಜ ರಚಿತವಾಗುವುದಿಲ್ಲವೋ, ಜನರು ಮಾನವಕೃತ ಶಾಸನ ಅಥವಾ ನಿಯಮಗಳಿಗೆ ಬದಲು ಧರ್ಮಾನುಸಾರವಾಗಿ ತಮ್ಮ ಸಾಮಾಜಿಕ ಸಂಗತಿ ಸಂಬಂಧಗಳನ್ನು ವ್ಯವಸ್ಥೆಗೊಳಿಸಿಕೊಳ್ಳುವುದಿಲ್ಲವೋ ಅಲ್ಲಿಯ ವರೆಗೆ ಅಹಿಂಸಾತ್ಮಕ ಕ್ರಾಂತಿಕಾರನು ರಾಜಕೀಯ ಅಧಿಕಾರವನ್ನು, ಶಕ್ತಿಯನ್ನು ಸೃಜಿಸಿ ಬಳಸಿಕೊಳ್ಳಬೇಕಾಗುತ್ತದೆ. ಗುರು ಗಾಂಧಿಯವರ ಜೀವನ ಕಲಿಸುವ ಪಾಠವೆಂದರೆ, ಸತ್ಯ ಅಥವಾ ದೇವರನ್ನು ಸಮಾಜದ ಹೊರಗೆ ಕಾಣಲು ಬರದು; ಆದ್ದರಿಂದ ಸತ್ಯಾನ್ವೇಷಿಯು ಸಾಮಾಜಿಕ ಜೀವನದ ಸರ್ವ ಮುಖಗಳೊಡನೆಯೂ ವ್ಯವಹರಿಸಬೇಕಾಗುತ್ತದೆ.

ಇಂದಿನ ಜಗತ್ತಿನಲ್ಲಿ ಸರ್ವಾಧಿಕಾರಿತ್ವದ ಸರಕಾರವನ್ನು ಬಿಟ್ಟರೂ ಪ್ರಜಾಸತ್ತಾತ್ಮಕವೆನಿಸಿಕೊಂಬ ಸರಕಾರದಲ್ಲೂ ಒಂದು ಕೇಂದ್ರಾಭಿಮುಖ ಪ್ರವೃತ್ತಿಯಿದೆ; ಪ್ರಜಾಸತ್ತೆಯು ಅವರಣದ ಹಿಂದೆ ನಿಜವಾಗಿ ಅಳುವುದು ಒಂದು ಪ್ರಧಾನಿಸತ್ತೆ. ಇಷ್ಟಲ್ಲದೆ, ಈ ಆಧುನಿಕ ಯುಗದಲ್ಲಿ ಪ್ರಜಾಸತ್ತೆಯು ಯೋಜನ ಮಾಡುವುದಷ್ಟೇ ಅಲ್ಲದೆ, ಯುದ್ಧಕ್ಕಾಗಿಯೂ ಯೋಜಿಸಬೇಕು; ಯುದ್ಧಯೋಜನೆಯು ಅವಶ್ಯವಾಗಿ ಸರ್ವಗ್ರಾಹವೂ ಕೇಂದ್ರೀಕೃತವೂ ಆಗಿರಬೇಕು. ತನ್ನ ಸ್ವಲ್ಪಕಾಲದ ಇತಿಹಾಸದಲ್ಲಿ ಸರಕಾರವು ಇಂದಿನಂತೆ ಹಿಂದೆಂದೂ ಪ್ರಜೆಯ ಜೀವನವನ್ನು ಅದರ ಸರ್ವಾಂಗಗಳಲ್ಲೂ ನಿಯಂತ್ರಿಸಿದ್ದಿಲ್ಲ. "ಅತ್ಯಲ್ಪ ಅಂಶದಲ್ಲಿ ಆಳುವ ಸರಕಾರ ಅತ್ಯುತ್ತಮವಾದದ್ದು" ಎಂಬ ಗಾದೆಯನ್ನು ೨೦ ನೆಯ ಶತಮಾನದ ಪ್ರಜಾಸತ್ತೆ ನಂಬುವುದಿಲ್ಲ. ಆದುದರಿಂದ ಅಹಿಂಸಾತ್ಮಕ ಸಾಮಾಜಿಕ ಕ್ರಾಂತಿಕಾರನು ಸರಕಾರದತ್ತ ಅಲಕ್ಷ್ಯ ಮಾಡಲಾರನು. ಗಾಂಧಿಯವರ ಪ್ರಕಾರ ಲೋಕಸೇವಕ ಸಂಘವೆಂದರೆ ತನ್ನ ಒಡೆಯನೆನಿಸಿದ ಭಾರತದ ಜನತೆಗೆ ನಿಃಸ್ವಾರ್ಥವಾಗಿ ಸ್ವಸಂತೋಷದಿಂದ ಮಾಡಿದ ಸೇವೆಯಿಂದ ಪಡೆದ ಅಧಿಕಾರ ಮತ್ತು ಸಾಮರ್ಥ್ಯಗಳನ್ನುಳ್ಳ ಸೇವಕರ ಒಂದು ಸಂಘ. ಕಾರ್ಯಕರ್ತನು ಸದ್ಯಃ ಅಥವಾ ಮುಂದಿನ ಮತದಾರನೆನಿಸುವ ಪ್ರತಿಯೊಬ್ಬ ಗಂಡಸಿಗೂ ಹೆಂಗಸಿಗೂ ಶಿಕ್ಷಣ ಕೊಡುವುದೇ ಅವರ ವಿಚಾರವಾಗಿತ್ತು: ವಿವಿಧ ಮಾರ್ಗಗಳಿಂದ ಮತದಾರನಿಗೆ ಸಲ್ಲಿಸಿದ ಸೇವೆಯ ಮೂಲಕ ಕಾರ್ಯಕರ್ತನು ಸರಕಾರವನ್ನು ರೂಪಿಸಬಲ್ಲನು. ಅದರಿಂದ ನಿಜವಾದ ಸಾಮಾಜಿಕ—ಆರ್ಥಿಕ ಪ್ರಜಾಸತ್ತೆ ಸ್ಥಾಪಿತವಾಗಲು ಅನುಕೂಲವಾಗುವುದು. ಸರ್ವೋದಯ ಸಮಾಜವಾಗಿ ದುಡಿಯುವ ಲೋಕಸೇವಕ ಸಂಘದ ಕಾರ್ಯಕರ್ತನ ದುಡಿತವು ಒಂದು ಉಚ್ಚತರ ಆದರ್ಶ. ಆದರೆ ಅದು ಮಾನವನ ಬೆಳವಣಿಗೆಯ ಇಂದಿನ ಮಟ್ಟದಲ್ಲಿ ಸಾಮಾಜಿಕ ಪ್ರಜಾಸತ್ತೆಯು ಆ ದಿಕ್ಕಿನಲ್ಲಿ ಹಾಕಬೇಕಾದ ಒಂದು ಆವಶ್ಯಕ ಹೆಜ್ಜೆ.

"ಸಂದೇಶ" ಎಂಬ ಶಿರೋನಾಮದ ಜಯಪುರ ಕಾಂಗ್ರೆಸ್ಸಿನ ಗೊತ್ತುವಳಿಯು "ಅಹಿಂಸಾತ್ಮಕ ಚಟುವಟಿಕೆಯ ಮೂಲಕ ಗಾಂಧಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯವನ್ನು ಗಳಿಸಿದ ಬಳಿಕ ರಾಷ್ಟ್ರೀಯ ಕಾಂಗ್ರೆಸ್ಸೀಗ ಸಾಮಾಜಿಕ ಮತ್ತು ಆರ್ಥಿಕ ಬಿಡುಗಡೆಗಾಗಿ ದುಡಿಯಬೇಕು. ಅದರಿಂದ ಪ್ರಗತಿ ಮತ್ತು ಸಮಾನ ಅವಕಾಶಗಳು ಕುಲಧರ್ಮಗಳ ಭೇದವಿಲ್ಲದೆ ಭಾರತದ ಎಲ್ಲ ಜನರಿಗೂ ಬರುವಂತಾಗುತ್ತದೆ," ಎಂದು ಹೇಳಿದೆ. ತಾನು ಸಾಧಿಸಲು ಕಾಂಗ್ರೆಸ್ಸೀಗ ಇಟ್ಟುಗೊಂಡ ಗುರಿ ಇದೇ. ಆದರೆ ಗುರಿಗಿಂತ ಸಾಧನವೇ ಮುಖ್ಯವಾದುದು. ಜಯಪುರದಲ್ಲಿ ಕಾಂಗ್ರೆಸ್ಸು ಮತ್ತೆ ಆ ಗುರಿಯನ್ನು ಗಾಂಧಿಯವರ ಜೀವನಾಧಾಯಕ ಸಂದೇಶದ ಪ್ರಕಾರವೇ ಸಾಧಿಸುವೆನೆಂದು ಜನರಿಗೆ ವಚನ ಕೊಟ್ಟಿದೆ. ಇದು ಕಾಂಗ್ರೆಸ್ಸನ್ನು ಕಮ್ಯುನಿಸ್ಟ್ ಮತ್ತು ಸೋಶಲಿಸ್ಟರಿಂದ ವಿಂಗಡಿಸುತ್ತದೆ. ರಾಷ್ಟ್ರೀಯ ಮತ್ತು ಜಾಗತಿಕ ಸಮಸ್ಯೆಗಳ ಪರಿಹಾರಕ್ಕೆ ಅವರು ಹಿಡಿಯುವುದು ಮಾರ್ಕ್ಸ್ ಮಾರ್ಗ; ಆದರೆ ಕಾಂಗ್ರೆಸ್ಸಿನದು ಗಾಂಧೀ ಮಾರ್ಗ. ಇದು ಸ್ವಾಭಾವಿಕವೇ ಆಗಿದೆ; ಏಕೆಂದರೆ, ಅದನ್ನು ರೂಪಿಸಿದವರೂ ಅದಕ್ಕೆ ಜೀವಕಳೆ ಕೊಟ್ಟವರೂ ಅವರೇ. ಅವರ ಉಪದೇಶವನ್ನು ಕಾಂಗ್ರೆಸ್ಸು ಪ್ರಾಮಾಣಿಕತೆಯಿಂದ ಪಾಲಿಸಿ, ಅವರು ಭಾರತಕ್ಕೂ ಜಗತ್ತಿಗೂ ತೋರಿಸಿದ ಧ್ಯೇಯಕ್ಕಾಗಿ ದುಡಿಯುತ್ತಿರುವವರೆಗೆ, ಸಾಮಾನ್ಯತಃ ರಚನಾತ್ಮಕ ಕಾರ್ಯಕರ್ತರೂ ವಿಶೇಷತಃ ಸರ್ವೋದಯ ಸಮಾಜದ ಸೇವಕರು ಮತ್ತು ಅ. ಭಾ. ಸರ್ವಸೇವಾ ಸಂಘದ ಸದಸ್ಯರು ಯಾವ ರಾಜಕೀಯ ಸಂಘಟನೆಯನ್ನೂ ಹುಡುಕಿಕೊಂಡು ಹೋಗಬೇಕಾಗಿಲ್ಲ. ರಾಜಕೀಯ ಸಂಗತಿಗಳಲ್ಲಿ ಅವರು ಕಾಂಗ್ರೆಸ್ಸಿನ ಮೂಲಕವೇ ಜನತೆಗೆ ಸೇವೆ ಸಲ್ಲಿಸಬಹುದು.

ಇತ್ತ, ಕಾಂಗ್ರೆಸ್ಸಾದರೂ ಬರಿ ರಾಜಕೀಯ ಮೇಳವಾಗಿ ಉಳಬಾರದಾದರೆ ಅಥವಾ ಸರಕಾರಿ ಯೋಜನೆಗಳನ್ನು ಜನರಿಗೆ ವಿವರಿಸಿ ಅವರ ಸಮ್ಮತಿ ಪಡೆಯುವ ಬರಿ ಸಮ್ಮೇಲನವೆನಿಸಬಾರದಾದರೆ ಮತ್ತು ಗಾಂಧೀಜಿಯ ಸಂದೇಶದ ಬೆಳಕಿನಲ್ಲಿ ಭಾರತದ ಜನತೆಯ ಹಾಗೂ ಮಾನವ್ಯದ ಸೇವೆಯನ್ನು ಮಾಡುತ್ತಲೆ ಇರಬೇಕಾದರೆ, ಅದು ಮೊದಲಿನಂತೆ ಕ್ರಾಂತಿಕಾರಿ ಸಂಸ್ಥೆಯಾಗಿಯೆ ಉಳಿಯಬೇಕು. ರಾಜಕೀಯ ಪ್ರಜಾತಂತ್ರವನ್ನು ಸಾಧಿಸಿಕೊಂಡ ಕಾಂಗ್ರೆಸ್ಸು ಅದನ್ನಿನ್ನು ಸಾಮಾಜಿಕ ಆರ್ಥಿಕ ಕ್ಷೇತ್ರಗಳಿಗೂ ಹಬ್ಬಿಸಲು ದುಡಿಯಬೇಕು. ಬರಿ ಮತಾಧಿಕಾರವೆ, ಅದು ಪ್ರೌಢರೆಲ್ಲರಿಗೂ ದೊರೆತರೆ ಕೂಡ, ನಿಜವಾದ ಪ್ರಜಾತಂತ್ರವೆನಿಸದು. ಅಂಥ ಪ್ರಜಾತಂತ್ರದಲ್ಲಿ ಜನತೆಯ ಸಾರ್ವಭೌಮತ್ವ ಬರಿ ಕಾಗದದಲ್ಲೇ ಉಳಿದೀತು. ನಿಜವಾದ ಜನಸಮೂಹವೆಂದರೆ ಪ್ರತಿನಿಧಿಗಳು. ನಿಜವಾದ ಪ್ರಜಾತಂತ್ರವೆಂದರೆ ಪ್ರತಿನಿಧಿಗಳಿಗೆ ಅಧಿಕಾರವನ್ನು ಕೊಡುವ ಹಕ್ಕು ಮಾತ್ರವಲ್ಲ; ತಮ್ಮ ವ್ಯವಹಾರವನ್ನು ತಾವೇ ಆಡಳಿತ ಮಾಡುವ ಅಧಿಕಾರವೂ ಜನತೆಗೆ ಇರಬೇಕು. ಅಧಿಕಾರದ ಮತ್ತು ಉತ್ಪಾದನೆಯ ವಿಕೇಂದ್ರೀಕರಣವಾದರೆ ಮಾತ್ರ ಇದು ಸಾಧ್ಯವಾದೀತು. ಅದೊಂದೇ ಜನಸಾಮಾನ್ಯರಿಗೆ ಶಕ್ತಿಯನ್ನೂ ವಿವೇಚನ ಸಾಮರ್ಥ್ಯವನ್ನೂ ತರಬಲ್ಲದು. ಪಾಶ್ಚಾತ್ಯ ದೇಶಗಳಲ್ಲಿ ರೂಢಿಗೊಂಡಿರುವ ಸಮ್ಮಿಶ್ರಶಾಸನಸಭಾತ್ಮಕ ಪ್ರಜಾತಂತ್ರವು ವಿಪರ್ಯಸ್ತಗತಿಯನ್ನು ಹಿಡಿದಿರುವ ಕಾರಣ ಅದರಲ್ಲಿ ಸಾಮಾನ್ಯ ಜನರಿಗೆ ತಮ್ಮ ನ್ಯಾಯವಾದ ಹಕ್ಕುಗಳನ್ನು ಪಡೆಯುವ ಅವಕಾಶ ತೀರ ಕಡಿಮೆ.

ಗಾಂಧೀಜಿ ದಾರಿ ತೋರಿಸಿದ್ದಾರೆ. ನಮ್ಮ ಸೇವೆ ವಿಶೇಷವಾಗಿ ಭಾರತದ ಜನರಲ್ಲಿ ಪರಸ್ಪರ ಸೌಹಾರ್ದವನ್ನೂ ಒಗ್ಗಟ್ಟನ್ನೂ ಹೆಚ್ಚಿಸುವಲ್ಲಿ. ವರ್ಗಮೂಲ ಧರ್ಮಮೂಲವಾದ ತಾರತಮ್ಯಗಳನ್ನು ಹೋಗಲಾಡಿಸುವಲ್ಲಿ ಮತ್ತು ಶಾಂತಿಯಿಂದಲೇ ವರ್ಗರಹಿತ ಪ್ರಜಾತಂತ್ರಾತ್ಮಕ ಸಮಾಜವನ್ನು ನಿರ್ಮಿಸುವಲ್ಲಿ ವಿನಿಯೋಗಿಸಲ್ಪಡಬೇಕೆಂದು ಅವರು ಉಪದೇಶಿಸಿದ್ದಾರೆ. ಸತ್ಯ ಅಹಿಂಸೆಗಳ ಬಗ್ಗೆ ಅವರು ಆಗ್ರಹ ತಳೆದಿದ್ದರು. ಅವರು ಉಪದೇಶಿಸಿದ ದಾರಿಯನ್ನು ಅನುಸರಿಸಬೇಕೆಂದಿದ್ದರೆ ಕಾಂಗ್ರೆಸ್ಸಿನ ಪಾಲಿಗೆ "ಶಾಂತಿಮಯವಾದ ಮತ್ತು ನ್ಯಾಯ್ಯವಾದ" ಉಪಾಯಗಳೆಂದರೆ ಸತ್ಯ ಅಹಿಂಸೆಗಳೆಂದೇ ಅರ್ಥವಾಗಬೇಕು. ಅವರು ನಿರ್ದೇಶಿಸಿದ ಗುರಿಯನ್ನು ಸಾಧಿಸಬೇಕಾಗಿದ್ದರೆ ಕಾಂಗ್ರೆಸ್ಸು ತನ್ನ ಸಾಮಾಜಿಕ ಪುನರ್ನಿರ್ಮಾಣದ ಕಾರ್ಯಕ್ರಮದಲ್ಲಿ ರಚನಾತ್ಮಕ ಕಾರ್ಯಗಳಿಗೆ ಕೇಂದ್ರ ಸ್ಥಾನವನ್ನು ಕೊಡಲೇಬೇಕು. ಈಗಾಗಲೆ ಅಸ್ತಿತ್ವದಲ್ಲಿರುವ ನಾನಾ ರಚನಾತ್ಮಕ ಸಂಸ್ಥೆಗಳೂ ಇನ್ನು ಮುಂದೆ ಸ್ಥಾಪಿಸಲ್ಪಡಬಹುದಾದವುಗಳೂ ಅದರ ಅವಯವಗಳಾಗಬೇಕು. ಕಾಂಗ್ರೆಸ್ಸು ವಿಕೇಂದ್ರೀಕೃತ ಉತ್ಪಾದನ ಯೋಜನೆಯನ್ನು ಒಪ್ಪಿಕೊಳ್ಳಬೇಕು. ಅದೇ ದೇಶದ ಶಾಶ್ವತ ಅರ್ಥಪದ್ಧತಿಯಲ್ಲಿ ಅಂಗೀಭೂತವಾಗಬೇಕು. ಅದು ಸಣ್ಣ ಪ್ರಮಾಣದ ಮತ್ತು ಗೃಹೋದ್ಯಮಗಳಿಗೆ ವಿಶೇಷ ಲಕ್ಷ್ಯಕೊಡಬೇಕು ಮತ್ತು ರಾಷ್ಟ್ರೀಯ ಮತ್ತು ಪ್ರಾದೇಶಿಕ ಸ್ವಾವಲಂಬನೆಯನ್ನು ಜೀವನದ ಅನಿವಾರ್ಯ ಅವಶ್ಯಕತೆಗಳ ಮಟ್ಟಿಗಾದರೂ— ಸಾಧಿಸುವ ಗುರಿಯಿಟ್ಟುಕೊಳ್ಳಬೇಕು. ರಾಜಕೀಯ ರಂಗದಲ್ಲೂ ಅದರ ಗುರಿ ಅಂಥದೇ ಇರಬೇಕು. ಜಯಪುರ ಕಾಂಗ್ರೆಸ್ಸು ಕೊಟ್ಟ ಸಂದೇಶ ಗಾಂಧೀಜಿಯ ಸಂದೇಶವೇ ಆಗಿತ್ತು. ಅನ್ಯಾದೃಶವಾದ ಸರ್ವೋದಯ ಪ್ರದರ್ಶನ ಕಾಂಗ್ರೆಸ್ ಅಧಿವೇಶನದ ಸಂಗಡಲೆ ನಡೆದದ್ದೂ ಜಯಪುರದಲ್ಲೇ. ಅದು ದಾರಿಯನ್ನು ತೋರಿಸಿದೆ. ಶಾಂತ ಉಪಾಯಗಳಿಂದ ವರ್ಗರಹಿತ ಸಮಾಜವನ್ನು ಕಟ್ಟುವ ಮನೋರಥವನ್ನು ಈಡೇರಿಸಲು ಕಾಂಗ್ರೆಸ್ಸು ರಚನಾತ್ಮಕ ಕಾರ್ಯಕರ್ತರೂ ಹೆಗಲಿಗೆ ಹೆಗಲಿತ್ತು ಕೆಲಸ ಮಾಡಬೇಕು.

ಹೀಗೆ ಮಾಡಿದರೆ ಮಾತ್ರ. ಸರಕಾರದಲ್ಲಿ ಅಧಿಕಾರ ವಹಿಸಿರುವವರು ಮೊದಲೇ ಮಾಡಿದ್ದಕ್ಕೆ ಗೋಣು ಹಾಕುವ ಸಂಮೇಳವೆನಿಸುವ ಅವಸ್ಥೆಯಿಂದ ಕಾಂಗ್ರೆಸ್ಸು ಉಳಿದುಕೊಳ್ಳಬಲ್ಲದು. ಹಾಗೆ ಮಾಡದಿದ್ದರೆ ವಿಘಟನೆ ಕಟ್ಟಿಟ್ಟದ್ದು. ಭಾರತವನ್ನು ಉಳಿಸಬೇಕಾದರೆ ಈ ಹೊಲಸನ್ನು ಸ್ವಚ್ಛಮಾಡತಕ್ಕದ್ದು. ಕಾಂಗ್ರೆಸ್ಸು ತನ್ನ ಪರಂಪರೆಗೆ ಒಪ್ಪುವ ರೀತಿಯಲ್ಲಿ ಬಾಳಬೇಕು. ಧ್ಯೇಯಾತ್ಮಕ ಮತ್ತು ಕ್ರಾಂತಿಕಾರಕವಾದುವೆಲ್ಲವನ್ನೂ ಕಾಯ್ದುಕೊಳ್ಳಬೇಕು, ಸಂಘಟಿಸಬೇಕು. ಇದು ರಚನಾತ್ಮಕ ಕಾರ್ಯಕರ್ತರ ನೆರವಿಲ್ಲದೆ ಕೈಗೂಡದು. ಗಾಂಧೀಜಿ ಭಾರತವನ್ನು ಬಂಧಮುಕ್ತಗೊಳಿಸಲು ಕಾಂಗ್ರೆಸ್ಸನ್ನು ತಮ್ಮ ಪ್ರಬಲ ಆಯುಧವಾಗಿ ಮಾಡಿಕೊಂಡರು. ಭಾರತದಲ್ಲಿ ಜಾತಿಭೇದರಹಿತ ವರ್ಗರಹಿತ ಸಮಾಜವನ್ನು ಅಥವಾ ಸರ್ವೋದಯ ಸಮಾಜವನ್ನು ಸ್ಥಾಪಿಸುವ ಸಾಧನವಾಗಿ ಅದನ್ನು ರೂಪಿಸುವ ಕರ್ತವ್ಯ ರಚನಾತ್ಮಕ ಕಾರ್ಯಕರ್ತರ ಪಾಲಿಗೆ ಬಂದಿದೆ. ಅವರು ಮೊದಲಿಂದ ಮತ್ತೆ ಪ್ರಾರಂಭಿಸಬೇಕು. ಅದು ಭಗೀರಥ ಪ್ರಯತ್ನವೇ ಬಹುದು ನಿಜ. ಆದರೆ ಮಾರ್ಚ ತಿಂಗಳಲ್ಲಿ ಸಭೆಗೂಡಿದಾಗ ಗಾಂಧೀಜಿಗೆ ಒಪ್ಪುವಂಥ ರೀತಿಯಲ್ಲಿ ಅದಕ್ಕಾಗಿ ಸಾಧನ ಉಪಾಯಗಳನ್ನು ಏರ್ಪಡಿಸುವರೆಂದು ಆಶಿಸೋಣ.

—ಶಂಕರರಾವ ದೇವ

ಹಣ, ವಸ್ತು ಮತ್ತು ದುಡಿತಗಳನ್ನು ಅಧರಿಸಿದ ಚುನಾವಣೆಗಳು

"ಹರಿಜನ"ದಲ್ಲಿ ಹಿಂದಿನ ಒಂದು ಲೇಖನದಲ್ಲಿ
ಭಾರತದ ಹೊಸ ಘಟನೆಯನ್ನಯ ನಡೆಸಬೇ
ಕಾದ ಚುನಾವಣೆಗಳ ಅದ್ಭುತ ಸ್ವರೂಪದ ಬ
ಯವನ್ನು ಹೇಳಿದ್ದೆ. ಅದು ಎಷ್ಟು ದೊಡ್ಡ
ಸಂಗತಿಯಾಗುವುದೆಂಬುದನ್ನು ತೋರಿಸುವ
ಕೆಲ ವಿಷಯಗಳನ್ನು ಇಲ್ಲಿ ಕೊಡಲು ಬಯ
ಬಯಸುತ್ತೇನೆ.

೧೯೪೧ರ ಜನಗಣತಿಯ ಪ್ರಕಾರ ಭಾರತದ
ಜನಸಂಖ್ಯೆ ೩೧ ಕೋಟಿ ೯೦ ಲಕ್ಷ ಮತ್ತು ಇಷ್ಟ
ರೊಳಗೆ ಹೆಚ್ಚಾಗಿರಬಹುದಾದ ಅಂಶವೆಂದು
೧೦ ಶತಾಂಶವನ್ನು ಸೇರಿಸಿದರೆ ಅದು ಸುಮಾರು
೩೫ ಕೋಟಿಗೆ ಮುಟ್ಟುತ್ತದೆ. ಪ್ರೌಢ ಮತ
ದಾನ ಪದ್ಧತಿಯ ಮೇರೆಗೆ [illegible]
ದಾರರ ಸಂಖ್ಯೆ ಇದರ ಅರ್ಧದಷ್ಟಾಗ
ಬಹುದೆಂದುಕೊಳ್ಳಿರಿ. ಅಂದರೆ ೧೭೫ ಕೋಟಿ.
ಅಷ್ಟರಿಂದ ಮತದಾರಪಟ್ಟಿಯಲ್ಲಿ ೧೭೫ ಕೋಟಿ
ಹೆಸರುಗಳಿರಬೇಕಾಯಿತು. ಒಂದು ಪುಟದಲ್ಲಿ
೩೫ ಹೆಸರುಗಳಿರಬಹುದಾದರೆ, ನಮಗೆ
ಸುಮಾರು ೫೦ ಲಕ್ಷಕ್ಕಿಂತ ಹೆಚ್ಚು ಪುಟಗಳ
ಇವನು ಅಚ್ಚು ಹಾಕಿಸಲು ಬೇಕಾಗುತ್ತದೆ.
೫೦ ಲಕ್ಷ ಪುಟದ ಮತದಾರಪಟ್ಟಿಯ ೨೦೦
ಪ್ರತಿಗಳನ್ನು ಅಚ್ಚುಹಾಕಿಸಲು ರೀಮಿಗೆ
ಪೌಂಡಿರುವ ಕಾಗದವನ್ನು ತೆಗೆದುಕೊಂಡರೆ
೧೩೦೦ ಟನ್ ತೂಕದ ಕಾಗದಬೇಕು. ಅವಶ್ಯ
ವಿರುವ ಕಾಗದವನ್ನು ಸಂಪಾದಿಸುವುದು
ಎಷ್ಟು ಕಷ್ಟದ ಕೆಲಸವೆಂಬುದನ್ನು ತಿಳಿದು
ಕೊಳ್ಳುವುದು ಬಹಳ ಸುಲಭ. ಸದ್ಯದಲ್ಲಿ
ಅವಶ್ಯವಿರುವ ಕಾಗದವನ್ನು ಪ್ರಾಂತಗಳಿಗೆ
ದೊರಕುವಂತೆ ಮಾಡಲಾಗುವುದೆಂದು ಕೇಳಿ
ದ್ದೇನೆ. ೫೦ ಲಕ್ಷ ಪುಟಗಳನ್ನು ಅಚ್ಚುಹಾಕಿಸು
ವುದೇ ಒಂದು ಸಮಸ್ಯೆ. ಮತದಾರಪಟ್ಟಿ ಆಕ್ರ
ಮಿಸುವ ಸ್ಥಳದ ಸ್ಥೂಲ ಕಲ್ಪನೆಯನ್ನು
ಹೀಗೆ ಮಾಡಿಕೊಡಬಹುದು: ೨೫೦ ಪುಟಗಳ
ಒಂದು ಪುಸ್ತಕವು ಒಂದಂಗುಲ ದಪ್ಪದ ಸ್ಥಳ
ವನ್ನು ಆಕ್ರಮಿಸುವದು, ಮತ್ತು ಈ ಅಳತೆ
ಯಂತೆ ಇಡೀ ಮತದಾರಪಟ್ಟಿಯು ದಪ್ಪದಲ್ಲಿ
ಕಾಲುಮೈಲಿನಷ್ಟಾಗಬಹುದು. ಪ್ರಚಾರಕ್ಕಾಗಿ
ಹಸ್ತಪತ್ರಿಕೆ, ಭಿತ್ತಿಪತ್ರ, ಮತದಾರಪಟ್ಟಿಯ
ಪ್ರತಿ ಮುಂತಾದವುಗಳನ್ನು ತಯಾರಿಸಲು
ಹುರಿಯಾಳುಗಳಿಗೂ ಅವರ ಪಕ್ಷಗಳಿಗೂ ಬಹ
ಕಾಗದ ಬೇಕಾಗುವದು.

ಚುನಾವಣೆಯನ್ನು ನಡೆಸುವದು ಇನ್ನೊಂದು
ಅದ್ಭುತ ಕಾರ್ಯ. ಒಂದು ದಿವಸ್ಕೆ ಹೆಸರು
ಹಚ್ಚಿದ ಪ್ರತಿ ಒಂದು ಸಾವಿರ ಮತದಾರರ
ಪಟ್ಟಿಯಲ್ಲಿಯ ಮತದಾರರ ಹೆಸರನ್ನು ಪರಿ
ಶೀಲಿಸಲು ಒಬ್ಬ ಮತ್ತು ಮತಪತ್ರವನ್ನು
ಹಂಚಲು ಒಬ್ಬ ಹೀಗೆ ಇಬ್ಬರು ಮತದಾನಾಧಿ
ಕಾರಿಗಳೂ ಒಬ್ಬ ಅಧ್ಯಕ್ಷನೂ ಇರಬೇಕಾಗು
ತ್ತದೆ. ಈ ಪ್ರಕಾರ ಒಂದೇ ದಿನ ಚುನಾವಣೆ
ಮುಗಿಯಬೇಕೆಂದಿದ್ದರೆ ನಮಗೆ ೧,೭೫೦೦೦
ಅಧ್ಯಕ್ಷರೂ ೩॥ ಲಕ್ಷ ಮತದಾನಾಧಿಕಾರಿಗಳೂ
ಬೇಕಾಗುತ್ತಾರೆ. ಚುನಾವಣೆ ಒಂದಕ್ಕಿಂತ
ಹೆಚ್ಚುದಿನ ಅಂದರೆ ಸುಮಾರು ೮ ದಿನ, ಒಂದು
ಆದಿತ್ಯವಾರದಿಂದ ಇನ್ನೊಂದು ಆದಿತ್ಯವಾರ
ವರೆಗೆ ನಡೆಯಿತೆನ್ನಿರಿ, ಆಗಬೇಕಾಗುವ ಸಂಖ್ಯೆ
ಇದರ ೮ ನೆಯ ಒಂದರಷ್ಟು, ಅರ್ಥಾತ್
೨೨೦೦೦ ಅಧ್ಯಕ್ಷರೂ ೪೪೦೦೦ ಮತದಾನಾಧಿ
ಕಾರಿಗಳೂ ಬೇಕಾಗುವರು. ಪ್ರತಿಯೊಂದು
ಮತದಾನಸ್ಥಳಕ್ಕೆ ಶಿಸ್ತಿಟ್ಟುಕೊಳ್ಳಲು ಕೆಲ
ಪೋಲೀಸರಿರುವದು ಅಗತ್ಯ. ಒಂದು ಮತ
ದಾನದಸ್ಥಳಕ್ಕೆ ಒಬ್ಬ ಅಧಿಕಾರಿ ಮತ್ತು ೪
ಪೋಲೀಸರು ಬೇಕೆಂದಾದರೆ, ಒಟ್ಟು ಸಬ್
ಇನ್ಸ್‌ಪೆಕ್ಟರರ ಶ್ರೇಣಿಯ ೨೨೦೦೦ ಅಧಿಕಾರಿ
ಗಳೂ ೮೮೦೦೦ ಪೋಲೀಸರೂ ಬೇಕಾಗುವರು.
ಸಬ್ ಇನ್ಸ್‌ಪೆಕ್ಟರ್, ಸಾರ್ಜೆಂಟ್, ಹೆಡ್
ಕಾನ್ಸ್‌ಟೆಬಲ್ ಮತ್ತು ಇತರರನ್ನು ಬೇಕಾ
ದಷ್ಟು ಸಂಖ್ಯೆಯಲ್ಲಿ ಪಡೆಯಲು ಯಾ
ತೊಂದರೆಯೂ ಇರಲಾರದು. ಪೋಲೀಸ
ನ್ನಾದರೂ ಹೆಚ್ಚು ತೊಂದರೆಯಿಲ್ಲದೆ ಪಡೆಯ
ಬಹುದು. ಆದರೆ ಯೋಗ್ಯ ಅಧ್ಯಕ್ಷರನ್ನು ಪಡೆ
ಯುವದು ದುಸ್ಸಾಧ್ಯ. ಅಧ್ಯಕ್ಷರಾಗುವವರು
ಸಾಕಷ್ಟು ತೂಕವುಳ್ಳ ವ್ಯಕ್ತಿಗಳಾ
ವರೂ ನಿಶ್ಚಿತವನ್ನು ನಡೆಸಿಕೊಳ್ಳಬಲ್ಲವರೂ
ಹುರಿಯಾಳುಗಳನ್ನೂ ಅವರ ಪ್ರತಿನಿಧಿ
ಗಳನ್ನೂ ಮತದಾರರನ್ನೂ ನಿಯಂತ್ರಣ
ದಲ್ಲಿಟ್ಟುಕೊಳ್ಳಲು ಸಮರ್ಥರೂ ಆಗಿರಬೇ
ಲ್ಲದೆ. ಕಲಹ ಸಂಭವಿಸಿದಲ್ಲಿ ಅವನ್ನು ಬಗೆಹ
ಸಲು ಅವರಿಗೆ ಜಾಣತನ ...

(೧೦ ನೇ ಪುಟಕ್ಕೆ)

ಕರ್ಮವೀರ

[illegible]

ಮಹತ್ವದ ನಿರ್ಣಯ

ಕಲಬುರ್ಗಿಯಲ್ಲಿ ಕಳೆದ ವಾರ ಕರ್ನಾಟಕ ಏಕೀಕರಣ ಪರಿಷತ್ತಿನ ಹನ್ನೆರಡನೆಯ ಅಧಿವೇಶನವು ಸೇರಿ ಪ್ರಾಂತೀಕರಣದ ಬಗ್ಗೆ ಮಹತ್ವದ ಗೊತ್ತುವಳಿಯು ಸ್ವೀಕೃತವಾಯಿತು. ಮೈಸೂರು ಸಂಸ್ಥಾನವು ಕರ್ನಾಟಕ ಪ್ರಾಂತದಲ್ಲಿ ವಿಲೀನವಾಗುವಂತೆ ಶೀಘ್ರ ಕ್ರಮ ಕೈಗೊಳ್ಳಬೇಕು ಎಂಬುದೆ ಆ ಗೊತ್ತುವಳಿಯ ಮುಖ್ಯಾಂಶವಾಗಿದೆ. ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯು ಮತ್ತು ಕರ್ನಾಟಕ ಏಕೀಕರಣ ಮಹಾಸಮಿತಿಯು ಮೈಸೂರಿನ ಮಹಾರಾಜರನ್ನು ಘಟನಾತ್ಮಕ ಅರಸರನ್ನಾಗಿಟ್ಟುಕೊಂಡು ಕರ್ನಾಟಕ ಪ್ರಾಂತವನ್ನು ರಚಿಸುವ ಗೊತ್ತುವಳಿಯನ್ನು ಕಳೆದ ತಿಂಗಳು ಸ್ವೀಕರಿಸಿಯವಾಗ ಏಕೀಕರಣ ಪರಿಷತ್ತು ಇಡಿ ಮೈಸೂರು ಸಂಸ್ಥಾನವನ್ನು ಕರ್ನಾಟಕದಲ್ಲಿ ವಿಲೀನ ಮಾಡಿ ಬಿಡಬೇಕೆಂಬ ಗೊತ್ತುವಳಿಯನ್ನು ಸ್ವೀಕರಿಸಿದ್ದು ಜನರಿಗೆ ಆಶ್ಚರ್ಯವೆನಿಸಬಹುದು. ಆದರೆ ಹಿಂದುಸ್ಥಾನದಲ್ಲಿ ಪ್ರಾತಗತಿಯಿಂದ ನಡೆದ ಘಟನೆಗಳನ್ನು ನೋಡಿದರೆ ಯಾರಿಗೂ ಹಾಗೆ ಆಶ್ಚರ್ಯವೆನಿಸುವ ಕಾರಣವಿಲ್ಲ

ಜಲ್ ಸಮಿತಿಯ ಪ್ರತಿಗಾಮೀ ವರದಿಯಿಂದ ಉದ್ಭೂತವಾಗಿದ್ದ ನಿರಾಶೆಯ ವಾತಾವರಣವು ಇತ್ತೀಚಿನ ಘಟನೆಗಳಿಂದ ಬಹಳ ಮಟ್ಟಿಗೆ ತಿಳಿಯಾಗಹತ್ತಿದೆ. ಬಡೋದೆ ಕೊಲ್ಹಾಪುರಗಳಂಥ ದೊಡ್ಡ ಸಂಸ್ಥಾನಗಳು ಮುಂಬಯಿ ಪ್ರಾಂತದಲ್ಲಿ ವಿಲೀನವಾಗಿ ಹೋಗಿವೆ. ರಾಜಸ್ಥಾನದ ಸಂಸ್ಥಾನಗಳೂ ಒಕ್ಕೂಟದಲ್ಲಿ ಸಮಾವೇಶವಾಗಿವೆ. ಕೊಚ್ಚಿ ಮತ್ತು ತಿರುವಾಂಕೂರು, ಸಂಸ್ಥಾನಗಳನ್ನೂ ವಿಲೀನ ಮಾಡಿ ಬಿಡಬೇಕೆಂಬ ಪ್ರಯತ್ನಗಳು ನಡಿದಿವೆ— ಅವೆರಡೂ ಕೂಡಿ ಒಂದು ಒಕ್ಕೂಟವನ್ನು ರಚಿಸಲಾಗಬಹುದೆಂಬ ಸುದ್ದಿ ಕೇಳಬರುತ್ತದೆ. ಒಂದೆರಡು ಸಂಸ್ಥಾನಗಳು ಉಳಿದರೂ ಅವುಗಳಿಗೆ ಒಕ್ಕೂಟ ಪ್ರದೇಶದಲ್ಲಿದ್ದ ಪ್ರಾಂತಗಳಿಗಿಂತ ಹೆಚ್ಚಿನ ಸ್ಥಾನಮಾನಗಳು ಉಳಿಯದಂತೆ ನೋಡಿಕೊಳ್ಳಲು ಸಂಸ್ಥಾನ ಖಾತೆಯು ನಿರ್ಧರಿಸಿದೆಯೆಂದು ವಿಶ್ವಸನೀಯವಾಗಿ ತಿಳಿಯುತ್ತದೆ. ಹೈದರಾಬಾದ ಸಂಸ್ಥಾನದಲ್ಲಿಯ ಭಾಷಾನ್ವಯ ಪ್ರದೇಶಗಳನ್ನು ಆಯಾ ಭಾಷಾನ್ವಯ ಪ್ರಾಂತಗಳಲ್ಲಿ ಸೇರಿಸಿ ಬಿಡಬೇಕೆಂಬ ವಾದವೂ ಪ್ರಬಲವಾಗಹತ್ತಿದೆ. ಈ ರೀತಿ ಹಿಂದುಸ್ಥಾನದಲ್ಲಿಯ ಬಹುತರ ಎಲ್ಲ ಸಂಸ್ಥಾನಗಳು ಸಮೀಕರಣ ಹೊಂದಿ ಬ್ರಿಟಿಶರು ಅಸ್ವಾಭಾವಿಕವಾಗಿ ನಿರ್ಮಿಸಿದ್ದ ಭೇದವು ಮಾಯವಾಗಹತ್ತಿದೆ. ಈ ಪರಿಸ್ಥಿತಿಯಲ್ಲಿ ಮೈಸೂರೊಂದೇ ಪ್ರತ್ಯೇಕವಾಗಿಯೆಂತು ಉಳಿಯಬಲ್ಲುದು?

ಮೈಸೂರನ್ನು ಕೂಡಿಕೊಂಡೇ ಸ್ವತಂತ್ರ ಪ್ರಾಂತವನ್ನು ಮಾಡಬೇಕೆಂಬ ಬಗ್ಗೆ ಉತ್ತರ ಕರ್ನಾಟಕದಲ್ಲಿಯ ಜನರು ಅತ್ಯಂತ ಆತುರರಾಗಿದ್ದಾರೆ. ಮೈಸೂರಿನ ಕೆಲ ಮಹಾಜನಗಳು ಉತ್ತರ ಕರ್ನಾಟಕದ ಸಂಬಂಧವನ್ನು ಕಡಮೆಮಾಡಿಕೊಳ್ಳಬೇಕೆಂದು ಎಷ್ಟೇ ಪ್ರಯತ್ನಿಸಿದರೂ ಅದು ಸಾಧ್ಯವಾಗಲಾರದು. ಏಕೆಂದರೆ ಅನೇಕ ವರುಷಗಳಿಂದ ಭಾಷೆ, ಸಂಸ್ಕೃತಿ ಸಾಹಿತ್ಯ ಮೊದಲಾದವುಗಳಿಂದ ಇವೆರಡೂ ಭಾಗಗಳಲ್ಲಿ ಸಂಬಂಧವು ಬೆಳೆದು ಬಂದಿದೆ. ಇದನ್ನು ತಿಳಿದುಕೊಂಡು ಮೈಸೂರಿನ ಮಹಾಜನಗಳು ತಮ್ಮ ಧೋರಣವನ್ನು ಪರಿಷ್ಕರಿಸಿಕೊಳ್ಳುವದು ಕ್ರಮಪ್ರಾಪ್ತವಾಗಿದೆ. ಮೈಸೂರು ಕರ್ನಾಟಕದಲ್ಲಿ ವಿಲೀನವಾಗಬೇಕು, ಮೈಸೂರಿನ ಮಹಾರಾಜರನ್ನು ಕರ್ನಾಟಕವು ಘಟನಾತ್ಮಕ ಅರಸರನ್ನಾಗಿ ಇಟ್ಟುಕೊಳ್ಳುವುದಿಲ್ಲ ಎಂದು ಹೇಳುವಾಕ್ಷಣ ಮೈಸೂರು ಮಹಾರಾಜರ ಬಗ್ಗೆ ಸಂಸ್ಥಾನೇತರ ಕನ್ನಡಿಗರಲ್ಲಿ ಅಗೌರವವಿದೆಯೆಂದು ಹೇಳಿದಂತಾಗುವದಿಲ್ಲ. ಮೈಸೂರಿನ ಪ್ರಜೆಗಳಲ್ಲಿ ಮಹಾರಾಜರ ಬಗ್ಗೆ ಇದ್ದಷ್ಟೆ ಗೌರವ ಆದರಾಭಿಮಾನಗಳು ಉತ್ತರ ಕರ್ನಾಟಕದ ಪ್ರಜೆಗಳಲ್ಲಿಯೂ ಇದೆಯೆಂದು ನಾವು ಎದೆ ತಟ್ಟಿ ಹೇಳುತ್ತೇವೆ ಆದರೆ ಕಾಲಮಾನ ಪರಿಸ್ಥಿತಿಯನ್ನರಿತು ಮಹಾರಾಜರು ತ್ಯಾಗಕ್ಕೆ ಸಿದ್ಧರಾಗಬೇಕು. ಹಿಂದುಸ್ಥಾನದಲ್ಲಿ ಇದ್ದ ೬೦೦ ಕ್ಕಿಂತ ಹೆಚ್ಚು ಸಂಸ್ಥಾನಿಕರಲ್ಲಿ ಇಂದು ಕೆಲವೆ ಜನರು ಮಾತ್ರ ಅಧಿಕಾರದಲ್ಲಿ ಉಳಿದಿರುವರು. ಇತರರೆಲ್ಲ ಪರಿಸ್ಥಿತಿಯನ್ನರಿತು ಗೌರವಪೂರ್ವಕವಾಗಿ ಅರಸೊತ್ತಿಗೆಯನ್ನು ಬಿಟ್ಟುಕೊಟ್ಟು ಏಕತಂತ್ರ ಹಿಂದುಸ್ಥಾನದ ರಚನೆಗೆ ಸಹಾಯ ಮಾಡಿರುವರು. ಮೈಸೂರಿನ ಪ್ರಜಾವತ್ಸಲರಾದ ಮಹಾರಾಜರೂ ಇದರ ರಹಸ್ಯವನ್ನು ತಿಳಿದುಕೊಳ್ಳಬೇಕಾಗಿದೆ. ಮಹಾರಾಜರು ತಾವೇ ಮುಂಬಂದು ಸಂಸ್ಥಾನವು ಒಕ್ಕೂಟ ಪ್ರದೇಶದಲ್ಲಿ ವಿಲೀನವಾಗುವಂತೆ ನೋಡಿಕೊಳ್ಳುವದು ಅವರ ಘನತೆಗೆ ಉಚಿತವೇ ಆಗಿದೆ. ಹಿಂದುಸ್ಥಾನ ಸರಕಾರದವರೂ ಜನತೆಯ ಅಭಿಪ್ರಾಯವನ್ನು ತಿಳಿದುಕೊಂಡು ಆದಷ್ಟು ಬೇಗ ಕರ್ನಾಟಕ ಪ್ರಾಂತೀಕರಣವಾಗುವಂತೆ ಕ್ರಮ ಕೈಕೊಳ್ಳಬೇಕೆಂದು ಒತ್ತಾಯದಿಂದ ಬಿನ್ನವಿಸುತ್ತೇವೆ.

ಮೈಸೂರಲ್ಲಿ ಸರದಾರರು



ಸರದಾರ ವಲ್ಲಭಭಾಯಿ ಪಟೇಲರು ಕೆಲ ದಿನ ಹಿಂದೆ ಮೈಸೂರಿಗೆ ಭೆಟ್ಟಿ ಕೊಟ್ಟಾಗ ವಿಮಾನ ನಿಲ್ದಾಣದಲ್ಲಿ ಶ್ರೀಮನ್ಮಹಾರಾಜರೊಡನೆ.

ವಾರದ ಸಿಂಹಾವಲೋಕನ

ಹಿಂದುಸ್ಥಾನದ ವಿದೇಶಧೋರಣೆ

ಹಿಂದುಸ್ಥಾನ ಸರಕಾರದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರು ಇವರು ಕಳೆದವಾರ ಹಿರಿಯೋಲಗದಲ್ಲಿ ತಮ್ಮ ಸರಕಾರದ ವಿದೇಶ ನೀತಿಯನ್ನು ಕುರಿತು ಮಹತ್ವದ ಘೋಷಣೆಯನ್ನು ಮಾಡಿದರು. ಹಿಂದುಸ್ಥಾನವು ಇನ್ನು ಮುಂದೆ ಕಾಮನ್ ವೆಲ್ತದಲ್ಲಿ ಉಳಿಯದು, ಸ್ವತಂತ್ರ ಸಾರ್ವಭೌಮ ಪ್ರಜಾರಾಜ್ಯವಾಗುವದು. ನಮ್ಮ ರಾಜಕೀಯ ಆರ್ಥಿಕ ಮತ್ತು ಅಂತರ್ರಾಷ್ಟ್ರ ರಾಜಕಾರಣದಲ್ಲಿ ಪರಾವಲಂಬನವನ್ನು ಎಳ್ಳುಕಾಳಿನಷ್ಟು ಸಹಿಸಲಾರೆವು, ಈ ಕರಾರಿನಂತೆ ನಾವು ಯುಕ್ತ ರಾಷ್ಟ್ರ ಸಂಘದೊಡನೆ ಸಹಕರಿಸುವೆವು, ಎಂಬುದೆ ಆ ಮಹತ್ವದ ಘೋಷಣೆಯ ಮುಖ್ಯಾಂಶವಾಗಿದೆ. ಹಿಂದುಸ್ಥಾನವು ಸ್ವತಂತ್ರವಾದಾಗಿನಿಂದ ಅದರ ವಿದೇಶ ಧೋರಣೆಯ ಬಗ್ಗೆ ಚರ್ಚೆ ನಡೆದಿದೆ. ಕಳೆದ ವರುಷ ಕಾಮನ್‌ವೆಲ್ತ ಪರಿಷತ್ತು ಕೂಡಿದಾಗ ಸ್ವತಂತ್ರ ರಾಷ್ಟ್ರಗಳಿಗೂ ಕಾಮನ್‌ವೆಲ್ತದಲ್ಲಿ ಅವಕಾಶವಿರಲೆಂದು ಮೊದಲಿದ್ದ ಬ್ರಿಟಿಶ್ ಕಾಮನ್ ವೆಲ್ತದಲ್ಲಿಯ ಬ್ರಿಟಿಶ್ ಎಂಬ ಶಬ್ದವನ್ನು ತೆಗೆದುಹಾಕಲಾಗಿದೆ. ಇದರಿಂದ ಹಿಂದುಸ್ಥಾನವು ಕಾಮನ್‌ವೆಲ್ತದಲ್ಲಿ ಉಳಿಯಲು ಅಡ್ಡಿ ಇರದಂತಾಗಿದೆ. ಆದರೂ ಮುಖ್ಯಮಂತ್ರಿಗಳು ಮೇಲಿನಂತೆ ಸ್ಪಷ್ಟೀಕರಣ ಮಾಡಿರುವರು. ಯಾವದೇ ರಾಷ್ಟ್ರದ ಕೂಡ ಭಾರತವು ಸಂಬಂಧವನ್ನಿಟ್ಟುಕೊಳ್ಳುವುದು ಒಂದು ಸ್ವತಂತ್ರರಾಷ್ಟ್ರ ಮತ್ತೊಂದು ಸ್ವತಂತ್ರ ರಾಷ್ಟ್ರದೊಡನೆ ಸಂಬಂಧವಿಟ್ಟುಕೊಳ್ಳುವ ರೀತಿಯಲ್ಲಿಯೆ ಎಂದು ಇದರಿಂದ ಸ್ಪಷ್ಟವಾಯಿತು. ಬದಲಾದ ಪರಿಸ್ಥಿತಿಗೆ ಇದು ತಕ್ಕದಾಗಿಯೆ ಇದೆ. ಇನ್ನು ಭಾರತದಲ್ಲಿಯ ಪರಕೀಯ ಪ್ರದೇಶಗಳ ಬಗ್ಗೆಯೂ ಭಾರತವು ತನ್ನ ಧೋರಣವನ್ನು ನಿರ್ಧರಿಸುವದು ಅವಶ್ಯವಾಗಿತ್ತು. ಆ ಬಗ್ಗೆಯೂ ಪಂಡಿತ ಜವಾಹರಲಾಲರು ಸ್ಪಷ್ಟೀಕರಣ ಮಾಡಿರುವರು. ಇಲ್ಲಿಯ ಪರಕೀಯ ಪ್ರದೇಶಗಳು ಹಿಂದುಸ್ಥಾನದಲ್ಲಿ ವಿಲೀನವಾಗದೆ ಗತ್ಯಂತರವಿಲ್ಲ. ಈ ಬಗ್ಗೆ ಶಾಂತರೀತಿಯ ಪರಿಹಾರವನ್ನು ಕಂಡುಹಿಡಿಯಲು ಸರಕಾರವು ಪ್ರಯತ್ನಿಸುತ್ತದೆ. ಯಾರೊಡನೆಯೂ ಅದಕ್ಕೆ ಘರ್ಷಣೆಬೇಕಿಲ್ಲ ಎಂದು ಜವಾಹರಲಾಲರು ಸಾರಿರುವರು. ಬ್ರಿಟಿಶ್‌ದಂಥ ಬಲಾಢ್ಯ ಸಾಮ್ರಾಜ್ಯ ಸರಕಾರವೆ ಶಾಂತರೀತಿಯಿಂದ ಭಾರತವನ್ನು ಭಾರತೀಯರಿಗೆ ಒಪ್ಪಿಸಿಕೊಟ್ಟು ಹೊರಟು ಹೋಗಿರುವಾಗ ಪೋರ್ತುಗೀಜ ಫ್ರೆಂಚ ಸರಕಾರಗಳು ಚಿಕ್ಕ ಚುಕ್ಕೆ ಪ್ರದೇಶಗಳನ್ನು ಇಲ್ಲಿ ಇಟ್ಟುಕೊಳ್ಳುವುದರಿಂದ ಯಾವ ಪುರುಷಾರ್ಥ ಸಾಧಿಸಬಲ್ಲವು? ಬದಲಾದ ಪರಿಸ್ಥಿತಿಯನ್ನು ಮನಗಂಡು ಆಯಾ ರಾಷ್ಟ್ರಗಳು ಯೋಗ್ಯ ಪರಿಹಾರವನ್ನು ಪಡೆದು ಸ್ವಾಮಿತ್ವವನ್ನು ಬಿಟ್ಟುಕೊಡುವದು ಜಾಣತನದ್ದು. ಇಲ್ಲವಾದರೆ ಪರಿಹಾರವನ್ನು ಕೂಡ ಪಡೆಯದೆ ಆ ಪ್ರದೇಶಗಳನ್ನು ಬಿಟ್ಟುಹೋಗುವ ಪ್ರಸಂಗ ಕೂಡ ಬರಬಹುದು.

ಹೈದರಾಬಾದದ ಆರ್ಥಿಕ ಪರಿಸ್ಥಿತಿ

ಲಾಯಕಅಲ್ಲೀ ಮಂತ್ರಿಮಂಡಳವು ಹೈದರಾಬಾದದ ಆಡಳಿತವನ್ನು ಮನಬಂದಂತೆ ನಡೆಸಿದ್ದರಿಂದ ಅಲ್ಲಿನ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆಂಬುದು ಮಿಲಿಟರಿ ಸರಕಾರವು ಸಿದ್ಧಪಡಿಸಿದ ಹೊಸ ಅಂದಾಜ ಪತ್ರಿಕೆಯಿಂದ ಕಂಡು ಬರುವದು. ತಾವು ನಡೆಸಿದ ಯುದ್ಧ ಸಿದ್ಧತೆಯಿಂದ ವೆಚ್ಚ ಹೆಚ್ಚಿ ಕೊರತೆಯೂ ಹೆಚ್ಚಿಗೆ ಕಂಡು ಬರುವದೆಂದು ಗೊತ್ತಾದ್ದರಿಂದ ೪೭೨ ಲಕ್ಷ ರೂಪಾಯಿಗಳಷ್ಟು ಲೆಕ್ಕವನ್ನೇ ಮುಂಗಡ ಪತ್ರಿಕೆಯಲ್ಲಿ ಹಿಡಿಯದೆ ಇದ್ದುದು ಕಂಡು ಬಂದಿದೆ. ಲಾಯಕಅಲ್ಲಿ ಮಂತ್ರಿಮಂಡಳವು ಆಗಸ್ಟದಲ್ಲಿ ತಯಾರ ಮಾಡಿದ ಮುಂಗಡ ಪತ್ರಿಕೆಯಲ್ಲಿ ೪೩೪ ಲಕ್ಷ ರೂಪಾಯಿಗಳ ಕೊರತೆಯನ್ನು ತೋರಿಸಲಾಗಿತ್ತು. ಆದರೆ ಮಿಲಿಟರಿ ಸರಕಾರವು ಪರಿಶೀಲನೆ ನಡೆಸಿದ್ದರಿಂದ ಈ ಕೊರತೆಯು ೧೨೫೭ ಲಕ್ಷ ರೂಪಾಯಿಗಳೆಂದು ಕಂಡು ಬಂತು. ಮಿಲಿಟರಿ ಸರಕಾರವು ಈ ೮ ಕೋಟಿ ರೂಪಾಯಿಗಳ ಕೊರತೆಯನ್ನು ತುಂಬುಕೊಳ್ಳಬೇಕಾಯಿತು. ಇದೆಲ್ಲದರ ಪರಿಣಾಮವಾಗಿ ಹದಗೆಟ್ಟ ಹೈದರಾಬಾದದ ಆರ್ಥಿಕ ಪರಿಸ್ಥಿತಿಯನ್ನು ಸರಿಪಡಿಸಿ ಅದನ್ನು ಊರ್ಜಿತ ಸ್ಥಿತಿಗೆ ತರುವದು ಸದ್ಯದ ಸರಕಾರಕ್ಕೆ ಸಮಸ್ಯೆಯಾಗಿದೆ. ಅಂತೆಯೆ ಬರುವ ವರುಷದ ಅಂದಾಜಪತ್ರದಲ್ಲಿ ೨೨೨೪೦೦೦ ರೂಪಾಯಿಗಳ ಕೊರತೆಯನ್ನು ತೋರಿಸಲಾಗಿದೆ. ಆದಾಯ ೨೪೯೯೨೪೦೦೦ ರೂ. ವೆಚ್ಚ ೨೬೦೧೯೫೦೦೦ ರೂ. ಎಂದು ಅಂದಾಜ ಮಾಡಲಾಗಿದೆ. ಹೊಸ ಕರಗಳನ್ನು ಹೇರಿ ಈ ಕೊರತೆಯನ್ನು ತುಂಬಿಕೊಳ್ಳಲು ಯೋಜಿಸಲಾಗಿದೆ. ಕೋರ್ಟ ಫೀ ಸ್ಟ್ಯಾಂಪಿನ ಕರ ಹೆಚ್ಚಿಸಿದ್ದರಿಂದ ೮೦ ಲಕ್ಷ, ಪೆಟ್ರೋಲ ವಾವರ ಆಲ್ಕೋಹಾಲ ಕರದಲ್ಲಿಯ ಹೆಚ್ಚಳದಿಂದ ೫ ಲಕ್ಷ, ಜಾಗೀರ ಉತ್ಪನ್ನಗಳ ಮೇಲಿನ ಪಾಲಿನಿಂದ ೧೦ ಲಕ್ಷ ರೂಪಾಯಿ ಬರುವವೆಂದು ಯೋಜಿಸಲಾಗಿದೆ. ಸರಾಫ ಈ ಖಾತೆಯಿಂದ ಈ ವರುಷ ೨೮೯೩೦೦೦ ರೂ. ಉತ್ಪನ್ನ ಬರುವದೆಂದು ಅಂದಾಜು ಮಾಡಲಾಗಿದೆ. ಸಂಸ್ಥಾನದ ಆರ್ಥಿಕ ಪರಿಸ್ಥಿತಿ ವಿಷಮವಿದ್ದುದರಿಂದ ಅದನ್ನು ಊರ್ಜಿತಗೊಳಿಸಲು ಎಚ್ಚರಿಕೆಯನ್ನು ವಹಿಸುವದು ಅವಶ್ಯವಾಗಿದೆಯೆಂದು ಈ ಅಂದಾಜ ಪತ್ರಿಕೆಯಲ್ಲಿ ಹೇಳಲಾಗಿದೆ. ಹೈದರಾಬಾದದಲ್ಲಿಯ ಪ್ರಜೆಗಳು ಬದಲಾದ ಪರಿಸ್ಥಿತಿಯನ್ನರಿತು ಸರಕಾರದ ಯೋಜನೆಗಳನ್ನು ಯಶಸ್ವಿಗೊಳಿಸಲು ಎಲ್ಲ ಬಗೆಯಿಂದ ಸಹಕರಿಸಬೇಕೆಂದು ಸೂಚಿಸುತ್ತೇವೆ.

ಆಹಾರ ಪದಾರ್ಥಗಳು

ಸದ್ಯದ ವಿಷಮ ಪರಿಸ್ಥಿತಿಯಲ್ಲಿ ಆಹಾರ ಪದಾರ್ಥಗಳನ್ನು ಎಲ್ಲ ಬಗೆಯಿಂದ ಉಳಿಸಿಕೊಳ್ಳುವದು ಅತ್ಯವಶ್ಯವಾಗಿದೆ. ಜನಸಂಖ್ಯೆ ಮಿತಿಮೀರಿ ಏರಹತ್ತಿದ್ದರಿಂದ ಮತ್ತು ಆ ಪ್ರಮಾಣದಲ್ಲಿ ಆಹಾರ ಧಾನ್ಯಗಳ ಉತ್ಪತ್ತಿಯಾಗದ್ದರಿಂದ ಪರದೇಶಗಳಿಂದ ಆಹಾರ ಪದಾರ್ಥಗಳನ್ನು ಬಹಳ ರೊಕ್ಕ ಕೊಟ್ಟು ತರಿಸಬೇಕಾಗಿ ಬಂದಿದೆ, ಇದನ್ನು ಸರಿಪಡಿಸಿಕೊಳ್ಳಬೇಕಾದರೆ ಉತ್ಪಾದನೆಯನ್ನು ಹೆಚ್ಚಿಸಬೇಕಲ್ಲದೆ ಆಹಾರ ಪದಾರ್ಥಗಳು ನಾಶವಾಗದಂತೆ ನೋಡಿಕೊಳ್ಳುವದು ಅವಶ್ಯವಾಗಿದೆ. ಹಿರಿಯೋಲಗದಲ್ಲಿ ಕಳೆದ ವಾರ ನಡೆದ ಪ್ರಶ್ನೋತ್ತರಗಳಿಂದ ವರುಷಕ್ಕೆ ೩ ಕೋಟಿ ಟನ್ನಿನಷ್ಟು ಆಹಾರ ಪದಾರ್ಥಗಳು ನಾಶವಾಗುವವೆಂದು ಕಂಡು ಈ ನಾಶವನ್ನು ತಪ್ಪಿಸುವ ಉಪಾಯ ಯೋಜನೆಗಾಗಿ ೯೩ ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಲಾಗುವದೆಂದು ಆಹಾರ ಮಂತ್ರಿಗಳು ಸಾರಿರುವರು. ಆಹಾರ ಪದಾರ್ಥಗಳ ನಾಶವನ್ನು ತಪ್ಪಿಸಬೇಕಾದರೆ ಬರಿ ಸರಕಾರದ ಉಪಾಯ ಯೋಜನೆಗಳನ್ನೆ ಲಕ್ಷಿಸಿದರೆ ತೀರದು: ಪ್ರತಿಯೊಬ್ಬ ನಾಗರಿಕನು ತನ್ನಲ್ಲಿದ್ದ ಆಹಾರ ಪದಾರ್ಥ ನಾಶವಾಗದಂತೆ ಎಚ್ಚರ ವಹಿಸತಕ್ಕದ್ದು. ಅಲ್ಲದೆ ಸರಕಾರವು ಕೈಕೊಂಡ ಇಂಥ ಯೋಜನೆಯಲ್ಲಿ ಎಲ್ಲ ಬಗೆಯಿಂದ ಸಹಕರಿಸಿ ಅದನ್ನು ಯಶಸ್ವಿ ಮಾಡಿ ಆಹಾರ ನಾಶವನ್ನು ತಪ್ಪಿಸಬೇಕೆಂದು ಬಿನ್ನವಿಸಿಕೊಳ್ಳುವೆವು.

ಸಂಚು ಯಶಸ್ವಿಯಾಗಲಿಲ್ಲ

ತಮ್ಮ ರಾಜಕೀಯ ಉದ್ದೇಶವನ್ನು ಸಾಧಿಸಿಕೊಳ್ಳುವುದಕ್ಕಾಗಿ ಕಮ್ಯುನಿಸ್ಟರು ರೇಲ್ವೆಯ ಸಾರ್ವತ್ರಿಕ ಸಂಪು ಹೂಡಿಸಬೇಕೆಂದು ಪ್ರಯತ್ನಿಸಿದ್ದರಷ್ಟೇ. ರೇಲ್ವೆ ಮಹಾಮಂಡಳದವರು ಸಂಪು ಹೂಡಬಾರದೆಂದು ನಿರ್ಣಯಿಸಿದ್ದರೂ ಕಮ್ಯುನಿಸ್ಟ ಒಲವಿನ ಕೆಲಸಗಾರರು ಅದಕ್ಕೆ ಒಪ್ಪದೆ ಸಂಪು ಹೂಡುವ ಸಿದ್ಧತೆಯಲ್ಲಿ ಇದ್ದರು. ಸರಕಾರದವರು ಈ ಬಗ್ಗೆ ಮುಂಜಾಗ್ರತೆ ವಹಿಸಿದ್ದರು. ಮುಂಬಯಿಯಲ್ಲಿ ಕೆಲಸಗಾರರಲ್ಲಿ ತಮ್ಮ ಆಟ ನಡೆಯುವದಿಲ್ಲೆಂದು ಕಂಡುಬಂದದ್ದರಿಂದ ಪೋಲೀಸರ ಕೈಯೊಳಗಿನ ಬಂದೂಕು ಮೊದಲಾದವುಗಳನ್ನು ಕಸಿದುಕೊಂಡು ಅವರನ್ನು ಪ್ರಚೋದಿಸಿ ಗೋಳೀಬಾರು ಮೊದಲಾದ ಕ್ರಮ ಕೈಗೊಳ್ಳಿಸಿ ಅದರಿಂದ ಕೂಲಿಕಾರರಲ್ಲಿ ಅಸಂತೋಷವನ್ನು ಹುಟ್ಟಿಸಬೇಕೆಂದು ಕೆಲ ಕಮ್ಯುನಿಸ್ಟ ಮುಂದಾಳುಗಳು ಸಂಚು ಹಾಕಿದ್ದರು. ಆದರೆ ಸಕಾಲದಲ್ಲಿಯೆ ಗುಪ್ತ ಪೋಲೀಸರಿಗೆ ಅದು ಗೊತ್ತಾದ್ದರಿಂದ ಅವರು ಅದನ್ನು ವಿಫಲಗೊಳಿಸಿದರು. ಈ ಸಂಚಿನ ಮುಖಂಡರನ್ನೆಲ್ಲ ಬಂಧಿಸಲಾಗಿದೆ. ಕುಚೋದ್ಯಗಾರರು ಎಷ್ಟೇ ಪ್ರಯತ್ನಿಸಿದರೂ ರೇಲ್ವೆ ಮತ್ತು ಅಂಚೆ ಕೆಲಸಗಾರರು ರಾಷ್ಟ್ರದ ಇಂದಿನ ವಿಷಮ ಪರಿಸ್ಥಿತಿಯನ್ನು ಮನಗಂಡು ಧುರೀಣರ ಬಿನ್ನಹಕ್ಕೆ ಮನ್ನಣೆ ಕೊಟ್ಟು ತಮ್ಮ ಮಹಾಮಂಡಳದ ನಿರ್ಣಯಕ್ಕೆ ತಲೆ ಬಾಗಿ ತಳೆದ ೯ ಕ್ಕೆ ಸಂಪು ಹೂಡದಿದ್ದುದಕ್ಕಾಗಿ ಅವರನ್ನು ನಾವು ಹೃತ್ಪೂರ್ವಕ ಅಭಿನಂದಿಸುತ್ತೇವೆ.

ಶ್ರೀಮತಿ ಸರೋಜಿನೀ ನಾಯ್ಡು

...ಚೆಗೆ ಸಂಭವಿಸಿದ ಶ್ರೀಮತಿ ಸರೋಜಿನೀ ನಾಯ್ಡುಗಳ ಆಕಸ್ಮಿಕ ಮರಣವು ನಮ್ಮ ದೇಶದ ಒಬ್ಬ ದೊಡ್ಡ ರಾಷ್ಟ್ರನಿರ್ಮಾಪಕರ ಜೀವನ ಕೊನೆಯೆನಿಸಿತು. ಅವರು ದೊಡ್ಡ ಕವಿ, ಭಾಷಾಪಂಡಿತ, ವಾಗ್ಮಿಂಪ್ರಚಾಲಕ, ಸಮಾಜ ಸುಧಾರಕ, ರಾಜನೀತಿಜ್ಞ ಮತ್ತು ಕಾಂಗ್ರೆಸ್ ಮುಖಂಡರಲ್ಲಿ ಪ್ರಥಮಶ್ರೇಣಿಯ ಯೋಧ ಎನಿಸಿದವರು. ಒಕ್ಕೂಟದ ಒಂದು ದೊಡ್ಡ ಪ್ರಾಂತಕ್ಕೆ ಅವರನ್ನು ಗವರ್ನರರನ್ನಾಗಿ ನಿಯಮಿಸುವ ಗೌರವವು ಸ್ವತಂತ್ರಭಾರತಕ್ಕೆ ದೊರಕಿತು. ಅದೇ ಕಾಲದಲ್ಲಿ ಮತ್ತೊಬ್ಬ ದೊಡ್ಡ ಮೇಧಾವಿ ಮಹಿಳೆಯನ್ನು ಅಷ್ಟೇ ಮುಖ್ಯವಾದ ಕರ್ತವ್ಯನಿರ್ವಹಣದ ಮೂಲಕ ಹೊರನಾಡಿನಲ್ಲಿ ಸ್ವದೇಶಸೇವೆ ಸಲ್ಲಿಸಲು ಕೊಡುವ ಹೆಮ್ಮೆಯ ಹಕ್ಕು ಸ್ವತಃ ಆ ಪ್ರಾಂತಕ್ಕೆ ಸಿಕ್ಕಿತು.

ಹುಟ್ಟಿನಿಂದ ಬಂಗಾಲಿ, ಮದುವೆಯಿಂದ ಹೈದರಾಬಾದಿ, ಬಹಳಕಾಲದ ವಾಸ ಮತ್ತು ರಾಜಕೀಯ ಧುರೀಣತ್ವಗಳಿಂದ ಮುಂಬಯಿಗ ಎನಿಸಿದ ಶ್ರೀಮತಿ ಸರೋಜಿನಿಯವರಿಗೆ ಎಲ್ಲ ಸ್ಥಳಗಳೊಡನೆಯೂ ಎಲ್ಲ ಜನಗಳೊಡನೆಯೂ ಬೆರೆತುಕೊಂಡು ಹೋಗುವಸಾಮರ್ಥ್ಯವಿತ್ತು. ಕವಿಯೂ ಅಲಂಕಾರೋಕ್ತಿ ಮತ್ತು ಸಿದ್ಧಹಸ್ತದ ಬರೆವಣಿಗೆಗಳಲ್ಲಿ ಪ್ರವೀಣನೂ ಬೇರೆಂದು ತಿಳಿಯಬಹುದು. ಹಾಗೆ ತಿಳಿದಾಗ ಕವಿ ಶಬ್ದದ ಅರ್ಥವನ್ನು "ಎಲ್ಲ ಸ್ಥಳ, ಎಲ್ಲ ಜನ ಮತ್ತು ಸಂದರ್ಭಗಳಲ್ಲೂ ಹೊಂದಿಕೊಂಡು ಔದಾರ್ಯ, ವಿಶ್ವಜನೀನತೆ, ಮತ್ತು ಇಂಗಿತಜ್ಞತೆಗಳಿಂದಲೂ ಅವರದಿಂದಲೂ ಮೃದುಹಾಸ್ಯಭಾವದಿಂದಲೂ ಆಸಕ್ತಿವಹಿಸಿ ಕೆಲಸಮಾಡುವ ಪ್ರವೃತ್ತಿಯುಳ್ಳವ"ನೆಂದು ವಿಸ್ತರಿಸಿದರೆ, ಅವರು ಸಾಹಿತ್ಯ ಕಲಾವಿದರಷ್ಟೇ ಅಲ್ಲದೆ ನಿಜವಾದ ಕವಿಯೂ ಆಗಿದ್ದರೆನ್ನಬೇಕು. ಪದ್ಯವನ್ನು ಅಸಂಖ್ಯವಾಗಿ ಬರೆದ ಕೀರ್ತಿ ಅವರಿಗಿಲ್ಲದಿದ್ದರೂ ಮೂವತ್ತನೆಯ ವರ್ಷ ವಯಸ್ಸಿನೊಳಗೇ ಆಂಗ್ಲಕವಿ ಎನಿಸಿಕೊಂಬ ಕೀರ್ತಿ ಅವರಿಗೆ ಸಿದ್ಧಿಸಿತು. ಆದರೆ ಅವರ ಇಡೀ ಜೀವನ, ಮಾತು ಮತ್ತು ನಡತೆಗಳೇ ಪದ್ಯ, ಕಲೆ ಎನಿಸಿದವು. ಅವರು ಹೋದಲ್ಲೆಲ್ಲ ಜನಪ್ರಿಯರಾದರು — ವರ್ಣಭ್ರಮಾವಿಷ್ಟವಾದ ದಕ್ಷಿಣ ಆಫ್ರಿಕ ಕೂಡ ಹೊರತಾಗಲಿಲ್ಲ. ಅವರನ್ನು ನ್ಯಾಯವಾಗಿ ಭಾರತದ ಬುಲ್‌ಬುಲ್ ಪಕ್ಷಿ ಎಂದು ಕರೆಯಲಾಗಿದೆ. ಗಾಂಧಿಯವರಿಗೆ ಅವರನ್ನು ಹಾಗೆ ಕರೆಯುವುದೇ ಇಷ್ಟವಾಗಿತ್ತು. ಗಾಂಧಿಯವರ ಸುತ್ತಲಿನ ಚಿಕ್ಕವರೆಲ್ಲ ಅವರನ್ನು ಸೋದರತ್ತೆ ಎಂದು ಪ್ರೀತಿಯಿಂದ ಕರೆಯುತ್ತಿದ್ದರು.

೭೦ಕ್ಕಿಂತಲೂ ಸ್ವಲ್ಪ ಹೆಚ್ಚು ವರ್ಷ ಕಷ್ಟಪಟ್ಟು ದುಡಿದ ನಂತರ ರೂಪಿಸುವದರಲ್ಲಿ ತಾವು ಬಹು ದೊಡ್ಡ ಪಾತ್ರವಹಿಸಿದ ಭಾರತದ ಜೀವನದ ಮುಂದಿನ ಅಭಿವೃದ್ಧಿಗೆ ಅವರು ದೃಶ್ಯರೂಪದಲ್ಲಿ ಸಾಕ್ಷಿಯಾಗಿ ನಿಲ್ಲದಾದರು. ಅವರ ಹೆಸರು ಗಾರ್ಗಿ, ಮೈತ್ರೇಯಿ, ಸರಸ್ವತಿ, ಮೀರೆ, ಅಹಲ್ಯೆ ಮತ್ತು ಪ್ರಾಚೀನ ಭಾರತದ ಇನ್ನಿತರ ದೊಡ್ಡ ಹೆಣ್ಣುಮಕ್ಕಳ ಪಂಕ್ತಿಗೆ ಸೇರುತ್ತದೆ. ಅವರು ನಮ್ಮೆಲ್ಲರ ನೋಲಿಟ್ಟ ಪ್ರೀತಿಯು ನಮ್ಮನ್ನು ಆಶೀರ್ವದಿಸಿ ಅದಕ್ಕೆ ನಮ್ಮನ್ನು ತಕ್ಕವರನ್ನಾಗಿ ಮಾಡಲಿ.

ಅಕೋಲಾ ಕಿ. ಘ. ಮಶ್ರೂವಾಲಾ
೨-೩ ೪೯

ಭಾಷಾ ವಿವಾದದ ತೀರ್ಮಾನ

ಫೆಬ್ರುವರಿ ೨೬, ೨೭ ನೆ ದಿನಗಳಲ್ಲಿ ರಾಷ್ಟ್ರಭಾಷಾ (ಅಂದರೆ ಹಿಂದೀ) ಪ್ರಚಾರ ಸಭೆಯ ಕಾರ್ಯಕರ್ತರು ವರ್ಧಾ ನಗರದಲ್ಲಿ ಅದರ ಅಧ್ಯಕ್ಷರಾದ ಜಬಲಪುರದ ಬಾಬೂ ಗೋವಿಂದ ದಾಸರ ಅಧ್ಯಕ್ಷತೆಯಲ್ಲಿ ಸಭೆಗೂಡಿದರು. ಮಧ್ಯಪ್ರಾಂತದ ಗೃಹಮಂತ್ರಿ ಪಂ. ದ್ವಾರಕಾ ಪ್ರಸಾದ ಮಿಶ್ರರು ಸಮ್ಮೇಲನವನ್ನು ಉದ್ಘಾಟಿಸಿದರು. ಮೊದಲನೆ ದಿನ ಆಮಂತ್ರಣದ ಮೇರೆಗೆ ನಾನೂ ಶ್ರೀ ವಿನೋಬಾ ಅವರೂ ಅಲ್ಲಿ ಉಪಸ್ಥಿತರಾಗಿದ್ದೆವು. ಪಂ. ಮಿಶ್ರ, ಬಾಬೂ ಗೋವಿಂದ ದಾಸ ಮತ್ತು ಸಮ್ಮೇಲನದ ಇತರ ಅಧಿಕಾರಿಗಳ ಭಾಷಣಗಳಾದ ಬಳಿಕ ಶ್ರೀ ವಿನೋಬಾ ಅವರಿಗೂ ನನಗೂ ಕೆಲ ಮಾತು ಹೇಳಲು ಕೇಳಿಕೊಳ್ಳಲಾಯಿತು.

ಪಂ. ಮಿಶ್ರರು ತಮ್ಮ ಉದ್ಘಾಟಕ ಭಾಷಣದಲ್ಲಿ ರಾಷ್ಟ್ರಭಾಷೆಯ ರಚನೆಯನ್ನು ಕುರಿತ್ತು ಪಂ. ಜವಾಹರಲಾಲರ ಈಚಿಗಿನ ಲೇಖದ ಉಲ್ಲೇಖ ಮಾಡಿ, ಅದನ್ನು ಪರಿಶೀಲಿಸಿದ್ದರು. ಕೆಲವೊಂದು ಅಂಶಗಳನ್ನು ಹೊರತುಪಡಿಸಿದರೆ ಪಂ. ನೆಹರೂ ಅವರ ವಿಚಾರಗಳು ಸ್ವಾಗತಾರ್ಹವಾಗಿವೆಯೆಂದೂ ಅದು ಹಿಂದೀ-ಹಿಂದುಸ್ತಾನಿಗಳ ನಡುವಿನ ಅಂತರವನ್ನು ಕಡಿಮೆ ಮಾಡಿದ್ದು, ವಿವಾದವನ್ನು ಕೊನೆಗಾಣಿಸಲು ಅನುಕೂಲ ಮಾಡಿಕೊಟ್ಟಿದೆಯೆಂದೂ ಅವರು ಅಭಿಪ್ರಾಯಪಟ್ಟರು. ಅವರ ಶಬ್ದಗಳನ್ನೇ ಅನುವಾದಿಸಿದರೆ ಈ ಕೆಳಗಿನಂತಾಗುವದು:

"ನಾನು ಮೇಲೆ ಹೇಳಿರುವ ಮಾತುಗಳಿಂದ ಹಿಂದೀ ಪ್ರೇಮಿಗಳಿಗೂ ಪಂಡಿತಜಿ (ನೆಹರೂ) ಯವರಿಗೂ ಮೊದಲು ಬಗೆದಷ್ಟು ಅಂತರವಿಲ್ಲೆಂದು ಸ್ಪಷ್ಟವಾಗುತ್ತದೆ. ಈ ಮಾತನ್ನು ಮತ್ತೆ ಮತ್ತೆ ಒತ್ತಿ ಹೇಳಲು ಕಾರಣವುಂಟು. ನಾವು ಹಿಂದೀ-ಉರ್ದೂ ಹಿಂದುಸ್ತಾನಿ ವಾದದಲ್ಲಿ ಕಾಲಹರಣ ಮಾಡುತ್ತ, ಇಂಗ್ಲೀಷು ಭಾಷೆಯ ಪ್ರಭುತ್ವವನ್ನು ಶಾಶ್ವತಗೊಳಿಸಬಯಸುವ ಅಥವಾ ತೀವ್ರತರವಾದ ಪ್ರಾಂತಾಭಿಮಾನದ ಭರದಲ್ಲಿ ರಾಷ್ಟ್ರಭಾಷೆಯ ಗದ್ದುಗೆಯಲ್ಲಿ ಹಿಂದೀಯ ಪ್ರತಿಷ್ಠೆಯನ್ನು ಸೈರಿಸಲೊಲ್ಲದ ಹಿಂದೀವೈರಿಗಳಿಗೆ ತುಂಬ ಸಹಾಯ ಮಾಡುತಿದ್ದೇವೆ."

ಪಂಡಿತ ದ್ವಾರಕಾಪ್ರಸಾದ ಮಿಶ್ರರು ದೊಡ್ಡ ಹಿಂದೀ ವಿದ್ವಾಂಸರು ಮತ್ತು ಕವಿಗಳು. ಈ ಪ್ರಶ್ನೆಯಲ್ಲಿ ಅಧಿಕಾರವಾಣಿಯಿಂದ ಮಾತಾಡಲು ಅವರಿಗೆ ನಿಸ್ಸಂದಿಗ್ಧವಾದ ಹಕ್ಕುಂಟು. ಬಾಬೂ ಗೋವಿಂದ ದಾಸರೇ ಮೊದಲಾದ ಆ ಮೇಲಿನ ಭಾಷಣಕಾರರೂ ಶ್ರೀ ಮಿಶ್ರರಷ್ಟು ಮುಕ್ತಕಂಠದಿಂದಲ್ಲದಿದ್ದರೂ ಪಂಡಿತ ಜವಾಹರಲಾಲರ ವಿಚಾರಧಾರೆಯನ್ನು ಸ್ವಾಗತಿಸಿದರು.

ಈ ಭಾಷಣಗಳಿಂದ ಪ್ರೇರಿತನಾಗಿ, ನಾನು ಮಾತಾಡಲು ಕೇಳಿಕೊಳ್ಳಲ್ಪಟ್ಟಾಗ, ಈ ಕೆಳಗಿನ ಸೂಚನೆಗಳನ್ನು ಸಮ್ಮೇಲನದ ಮುಂದಿರಿಸಿದೆನು. ನನಗೆ ಹಿಂದೀ ಅಥವಾ ಹಿಂದುಸ್ತಾನಿ ಸಂಸ್ಥೆಗಳೊಡನೆ ಔಪಚಾರಿಕ ಸಂಬಂಧವೇನೂ ಇಲ್ಲವಾದುದರಿಂದ ನಾನು ಯಾವುದೊಂದು ಸಂಸ್ಥೆಯ ಪರವಾಗಿ ಈ ಅಭಿಪ್ರಾಯಗಳನ್ನು ಮಂಡಿಸಲಿಲ್ಲ. ಆದರೆ ಅಖಿಲ ಭಾರತದ ಸಾಮಾನ್ಯ ಭಾಷೆಯ ವಿಷಯದಲ್ಲಿ ಆಸ್ಥೆ ವಹಿಸಿರುವ ನಾನು, ಈ ಪ್ರಶ್ನೆಯ ಬಗೆಗೆ ದೇಶದಲ್ಲಿ ನಡೆದಿರುವ ಉಗ್ರವಾದ ವಾದವಿವಾದಗಳಿಂದಲೂ ಈ ಮಹಾ ಭಾಷೆಯನ್ನು ಉಪಯೋಗಿಸಿಕೊಳ್ಳುತಿರುವ ಅಥವಾ ಉಪಯೋಗಿಸಿಕೊಂಡು ಅದನ್ನು ರೂಪಿಸಬೇಕೆಂದಿರುವವರ ರೀತಿಯಿಂದಲೂ ಜನಸಾಮಾನ್ಯರಿಗಾಗಲಿ ಸ್ವತಃ ಆ ಭಾಷೆಗಾಗಲಿ ಹಿತವಾಗದೆಂದು ಮನಗಂಡಿದ್ದೇನೆ. ಆದರಿಂದ ರಾಷ್ಟ್ರದ ಜೀವನದಲ್ಲಿ ಈ ಭಾಷೆ ಪೂರ್ಣ ರೂಪದಿಂದ ಕಾರ್ಯಪ್ರವೃತ್ತವಾಗುವ ದಿನ ದೂರ ದೂರ ಹೋಗದಿರದು. ಈ ವಿವಾದವನ್ನು ಒಮ್ಮೆ ಕೊನೆಗೊಳಿಸಿಬಿಡುವ ಒಂದು ಉಪಾಯವನ್ನು ಕಂಡುಹಿಡಿಯುವದು ಅವಶ್ಯ. ಎರಡೂ ಪಕ್ಷಗಳ ಸಮರ್ಥಕರು ಬೆಸರನ್ನೂ ಅದಿಲ್ಲದಕವಾದುದನ್ನೂ ತಂತಮ್ಮ ರಾಗದ್ವೇಷಗಳ ಗುರಿಗಳನ್ನಾಗಿ ಮಾಡಿಕೊಂಡಿದ್ದಾರೆ. ತಾವು ವಹಿಸಿದ ಪಕ್ಷದಸಮರ್ಥನೆಗೆ ಬೇಕಾದಯುಕ್ತಿಗಳು ತರ್ಕಬಲಕ್ಕೆ ಯಾವಾಗಲೂ ಲಭ್ಯವಾಗಿಯೆ ತೀರುತ್ತವೆ. ಎಷ್ಟುಕಾಲ ಜಗ್ಗಾಡಿದರೂ ವಾದವಿವಾದದಿಂದಲೇ ಪರಿಹಾರ ಮಾತ್ರದೊರಕಲಾರದು. ಬದಲಿಗೆವೈಯುಕ್ತಿಕನಿಂದೆಮತ್ತುಸ್ವೈರ ಬಡಿದಾಟದಲ್ಲೆ ಅದು ಕೊನೆಗೊಳ್ಳುವ ಸಂಭವ ಹೆಚ್ಚು. ಆ ಕಾರಣದಿಂದಲೇ ಕೇವಲಮತಗಣನೆಯಿಂದಲೇ ನಿಶ್ಚಯಿಸಲ್ಪಡಬಹುದಾದ ಸಂಗತಿ ಇದಲ್ಲ. ಮತಗಣನೆಯ ಪರಿಣಾಮ ಸ್ಪಷ್ಟವಾಗಿದ್ದರೆ ಅದು ಅಧಿಕಾರವನ್ನು ಉಂಟುಮಾಡೀತಲ್ಲದೆ ಸೌಹಾರ್ದವನ್ನಲ್ಲ. ಹಿಂದೀ-ಹಿಂದುಸ್ತಾನಿಯಂಥ ಸಮೃದ್ಧ ಭಾಷೆಯಲ್ಲಿಹಲಬಗೆಯ ರುಚಿಗಳಿಗೆ ಸ್ಥಾನವಿರಬಲ್ಲದು. ಒಬ್ಬನೇ ಲೇಖಕನು ಹಲ ಬಗೆಯ ರೀತಿಗಳಲ್ಲಿ, ಸಂಸ್ಕೃತ, ಅರಬ್ಬಿ, ಪರ್ಶಿಯನ್, ಇಂಗ್ಲಿಷ್, ಹಿಂದೀ ಶಬ್ದಗಳ ಬಗೆಬಗೆಯ ಸಂಮಿಶ್ರಣಗಳನ್ನುಪಯೋಗಿಸಿ ಬರೆಯಬಹುದು. ಹಿಂದೀ ಶಬ್ದಗಳನ್ನು ಆರಿಸಿಕೊಳ್ಳುವಾಗಲೂ ಅವಸ್ಥೆಗಳಿಗಿನ ಅನೇಕ ಅಪಭ್ರಂಶಗಳಿಂದ ಶಬ್ದಗಳನ್ನು ಶಬ್ದ ರೂಪಗಳನ್ನೂ ತೆಗೆದುಕೊಳ್ಳಬಹುದು. ಲೇಖಕರೂ ಭಾಷಣಕಾರರೂ ತಂತಮ್ಮ ರುಚಿಗಳ ಮೇರೆಗೆ ಅಥವಾ ತಾವು ವ್ಯವಹರಿಸುವ ಜನರ ಅವಶ್ಯಕತೆಗಳನ್ನು ನೋಡಿ ಬೇಕಾದ ಪ್ರಮಾಣದ ಮಿಶ್ರಣ ಮಾಡಿಕೊಳ್ಳಬಹುದು. ಇಂಥ ಪ್ರಯತ್ನಗಳಿಂದಭಾಷೆಗೊಂದು ರೂಪ ಬರಬಹುದು. ಒಂದು ವೇಳೆ ಬಹುಮುಖವಾಗಿ ಕೆತ್ತಿದ ವಜ್ರದಂತೆ ಅದು ಥಳಥಳಿಸಿದರೂ ಥಳಥಳಿಸಬಹುದು. ತೀರ ಉಗ್ರ ಬೆಳೆದ ವಿವಾದಗಳನ್ನು ಕೊನೆಗಾಣಿಸಿ ಕಾರ್ಯೋನ್ಮುಖರಾಗುವದು ಮುಖ್ಯವಾಗಿದೆ. ಇದಕ್ಕಾಗಿ, ಎರಡೂ ಪಕ್ಷಗಳಿಗೆ ಯಾರ ವಿವೇಕದಲ್ಲಿ, ಹೃದಯವೈಶಾಲ್ಯದಲ್ಲಿ, ದಾರ್ಶನಿಕ ದೃಷ್ಟಿಯಲ್ಲಿ ಮತ್ತು ಪಾಂಡಿತ್ಯ ಮತ್ತು ಲೌಕಿಕ ಜ್ಞಾನದಲ್ಲಿ ವಿಶ್ವಾಸವಿರಬಹುದೋ ಅಂಥವನನ್ನು ನಮಿಸಿ ತತ್ಕಾಲಕ್ಕೆ ಭಾಷೆಯ ಹೆಸರನ್ನೂ ಅದು ರೂಪುಗೊಳ್ಳಬೇಕಾದ ಮಾರ್ಗವನ್ನೂ ನಿರ್ದೇಶಿಸಲು ಕೇಳಿಕೊಳ್ಳುವದೊಳಿತು "ತತ್ಕಾಲಕ್ಕೆ" ಎನ್ನಲು ಕಾರಣವಿದೆ, ಏಕೆಂದರೆ ಇಂಥ ಸಂಗತಿಗಳು ಕಾಲಾಂತರದಲ್ಲಿ ಬದಲಾಗಿಯೆ ಆಗುವವು. ಕಿರಿಯ ಪಾಂಡವರು ಯುಧಿಷ್ಠಿರನ, ಅಥವಾ ಅವರೆಲ್ಲರೂ ಅವಶ್ಯ ಬಿದ್ದಾಗ ವ್ಯಾಸನ, ಕುಂತಿಯ ಅಥವಾ ಕೃಷ್ಣನ ನಿರ್ಣಯದಂತೆ ನಡೆದುಕೊಳ್ಳುತಿದ್ದಂತೆ ನಾವೂ ಅವನ ನಿರ್ಣಯಕ್ಕೆ ತಲೆವಾಗಬೇಕು. ಪಾಂಡವರಾದರೂ ಮಧ್ಯಸ್ಥನ ನಿರ್ಣಯ ಅನುಕೂಲವಾಗಿರಲಿ ಪ್ರತಿಕೂಲವೇ ಆಗಿರಲಿ ಅದನ್ನು ಶಿರಸಾ ವಹಿಸುತಿದ್ದರಲ್ಲದೆ ಜಾರಿಕೊಳ್ಳಲು ಪ್ರಯತ್ನಿಸುತಿದ್ದಿಲ್ಲ. ಅದೇ ಪ್ರಕಾರ ಈ ವಿಷಯವೂ ಸರ್ವಾನುಮತನಾದ ಮಧ್ಯಸ್ಥನ ತೀರ್ಮಾನಕ್ಕೆ ಒಪ್ಪಿಸಲ್ಪಡಬೇಕು.

ಈ ವಿಚಾರಗಳನ್ನು ನಾನು ಸಮ್ಮೇಲನದ ಮುಂದೆ (ಇವೇ ಶಬ್ದಗಳಲ್ಲಲ್ಲದಿದ್ದರೂ ಈ ತಾತ್ಪರ್ಯ ಬರುವಂತೆ) ಇರಿಸಿದೆ. ಪಂಡಿತ ಜವಾಹರಲಾಲರ ಲೇಖಕ್ಕೆ ಈವರೆಗೆ ಮತ್ತಾರ ಅಭಿಪ್ರಾಯಗಳಿಗೂ ದೊರಕದಷ್ಟು ಒಪ್ಪಿಗೆ ಹಿಂದೀವಾದಿ ಪ್ರಪಂಚದಲ್ಲಿ ದೊರೆತಿರುವದರಿಂದಲೂ ಇದಕ್ಕಿಂತ ಮಹತ್ವದ ಮತ್ತು ಗಂಭೀರವಾದ ವಿಷಯಗಳಲ್ಲಿ ಇಡಿ ರಾಷ್ಟ್ರದ ಭವಿತವ್ಯವನ್ನು ನಿರ್ಣಯಿಸುವ ಅಧಿಕಾರವನ್ನು ಅವರ ಕೈಗೆ ನಾವೊಪ್ಪಿಸಿರುವದರಿಂದಲೂ ಉಭಯ ಪಕ್ಷಗಳೂ ಅವರ ಮುಂದೆ ಈ ವಿವಾದವನ್ನಿಟ್ಟು ಅವರ ನಿರ್ಣಯದಂತೆ ನಡೆದುಕೊಳ್ಳಲು ಒಪ್ಪಬೇಕೆಂದೂ ನಾನು ಸೂಚಿಸಿದೆ.

ಇದಾದ ಮೇಲೆ ಕೆಲವರು ಸರದಾರ ಪಟೇಲರು ಸಹ ಮಧ್ಯಸ್ಥ ಅಥವಾ ಏಕೈಕ ಮಧ್ಯಸ್ಥರಾಗಬೇಕೆಂದು ಸೂಚಿಸಿದರು. ಬಾಬು ಗೋವಿಂದದಾಸರು ತಮ್ಮ ಪ್ರಾರಂಭ ಭಾಷಣದಲ್ಲಿ ಅವರ ಬಗ್ಗೆ ಆದರದ ಮಾತುಗಳನ್ನಾಡಿದ್ದರು. ನನ್ನ ನಂತರ ಮಾತಾಡಿದ ಶ್ರೀ ರಾಹುಲ ಸಾಂಕೃತ್ಯಾಯನರು ರಾಜೇಂದ್ರ ಪ್ರಸಾದರನ್ನು ಮಧ್ಯಸ್ಥರಾಗಲು ಕೇಳಿಕೊಳ್ಳಬೇಕೆಂದರು. ಅದಕ್ಕೂ ನನ್ನ ಆಕ್ಷೇಪವಿರಲಿಲ್ಲ. ಅವರು ಘಟನಾ ಸಮಿತಿಯ ಅಧ್ಯಕ್ಷರು. ಎಲ್ಲ ಪಕ್ಷಗಳೂ ಈ ಪ್ರಶ್ನೆಯನ್ನು ಅವರೇ ತೀರ್ಮಾನಿಸಬೇಕೆಂದು ಅಧಿಕಾರ ಕೊಟ್ಟರೆ, ಸಮಸ್ಯೆ ಬಿಡಿಸಲು ಅದು ಉತ್ತಮ ಉಪಾಯವೇ ಸರಿ. "ಈ ಪ್ರಶ್ನೆಯನ್ನೊಮ್ಮೆ ತೀರ್ಮಾನಿಸಿಕೊಳ್ಳೋಣ" ಎಂಬದಿಷ್ಟೇ ನನ್ನ ಆಶಯ; ಮೇಲಿನ ಮೂರು ಹೆಸರುಗಳಲ್ಲಿ ಯಾವುದನ್ನಾರಿಸಿದರೂ ಅಡ್ಡಿಯಿಲ್ಲ.

ನನ್ನ ಸೂಚನೆಗೆ ಸಾರ್ವತ್ರಿಕ ಒಪ್ಪಿಗೆ ದೊರೆತದ್ದನ್ನು ನೋಡಿ ನನಗೆ ತುಂಬ ಸಂತೋಷವಾಗಿದೆ. ಪ್ರತಿನಿಧಿಗಳ ಮುಖಚ್ಛಾಯೆಯಿಂದಲೂ ಅವರ ಪ್ರತ್ಯಕ್ಷ ಮಾತುಗಳಿಂದಲೂ ಈ ಪ್ರಶ್ನೆಯೊಮ್ಮೆ ತೀರ್ಮಾನವಾದರೆ ಅವರ ಅಂತರಂಗದ ಭಾರವೊಂದು ಇಳಿದಂತಾದೀತೆಂಬ ಭಾವ ವ್ಯಕ್ತವಾಯಿತು.

ಘಟನಾ ಸಮಿತಿಯ ಸದಸ್ಯರ ಮತ್ತು ಇತರರ ಅವಗಾಹನೆಗಾಗಿ ಈ ಸೂಚನೆಯನ್ನು ಪುನರುಲ್ಲೇಖಿಸುತಿದ್ದೇನೆ. ರಾಷ್ಟ್ರಭಾಷೆಯ ನಾನುರೂಪಗಳ್ಯಾದಿಗಳನ್ನು ತೀರ್ಮಾನಿಸಲು ಪಂ. ಜವಾಹರಲಾಲ ನೆಹರೂ, ಸರದಾರ ವಲ್ಲಭಭಾಯಿ ಪಟೇಲ ಅಥವಾ ಡಾ. ರಾಜೇಂದ್ರ ಪ್ರಸಾದರಲ್ಲೊಬ್ಬರನ್ನೇ ಅವರೆಲ್ಲರನ್ನೂ ಅಥವಾ ಅವರಲ್ಲಿ ಯಾರಿಬ್ಬರನ್ನೇ ಮಧ್ಯಸ್ಥರಾಗಿ ಒಪ್ಪಬೇಕೆಂದು ಎರಡೂ ಪಕ್ಷಗಳ ವಿದ್ವಾಂಸರನ್ನು ಜನತೆ ಒತ್ತಾಯಗೊಳಿಸಬೇಕು. ನಮ್ಮ ದೇಶ ದೂರ ಪಶ್ಚಿಮ ದೂರ

ಬಿಡುವು

*

ವಾಡಿಕೆಯಂತೆ ಹೋಳೀ ಹಬ್ಬದ ನಿಮಿತ್ತ ಮುಂದಿನ ವಾರದ ಅಂದರೆ ೨೧-೩-೧೯೪೯ ನೇ ತಾರೀಕಿನ ಸಂಚಿಕೆ ಹೊರಡುವದಿಲ್ಲ.

ವ್ಯವಸ್ಥಾಪಕ
ಕರ್ಮವೀರ

ದುಂದುಗಾರಿಕೆಯ ಆಚರಣೆಗಳು

ಈ ಪ್ರತಿಯು ಹೋಳಿಹಬ್ಬಕ್ಕೆ ಸ್ವಲ್ಪ ಮೊದಲು ಹೊರಡುತ್ತದೆ. ಈ ಹಬ್ಬದ ಸಮಾರಂಭದಲ್ಲಿ ನಡೆವ ಆಚರಣೆಗಳು ಕಡೆಯ ಪಕ್ಷ ಆಹಾರಮತ್ತುಸೌದೆ(ಉರುವಲು)ಯುಳ್ಳಾದರೂ ಭಾರತವು ಅತ್ಯಂತ ಸಮೃದ್ಧವಾಗಿದ್ದ ಕಾಲದ ಅವಶೇಷಗಳು. ದ್ವೈಪಾರ್ಗನವೆಂದು ಹೋಳಿ ಹಬ್ಬದ ದಿನ ಮುಗಟ್ಟೆಲಿಯಲ್ಲಿ ಆಹಾರ, ಸೌದೆ ಮತ್ತು ಬೆರಣಿಗಳನ್ನು ಸುಟ್ಟುಹಾಕುತ್ತಾರೆ.

ಈ ದಹನವು ಸಮರ್ಥನೀಯವೆಂಬುದು ನನಗೆ ಸಂದೇಹಾಸ್ಪದವಾಗಿದೆ. ಸಾರ್ವತ್ರಿಕ ಸಮೃದ್ಧಿ ಇದ್ದಾಗ ಮತ್ತು ಸುಟ್ಟ ಆಹಾರ ಅವಶ್ಯವೆನಿಸಿದ್ದ ಪ್ರದೇಶಗಳಿಗೆ ಜವನ್ನು ಒಯ್ಯಲು ಸಾರಿಗೆಯ ಸಂಪರ್ಕ ವಿರಳವಾಗಿದ್ದಾಗ ಅದು ತಪ್ಪವಾಗಿದ್ದರೂ ಆಗಿರಬಹುದು. ಇಂದಿನ ರಾಷ್ಟ್ರೀಯ ಸಂಕಟದಲ್ಲಿ ಅದು ಸಹ್ಯವೂ ಅಲ್ಲ, ನ್ಯಾಯ್ಯವೂ ಅಲ್ಲ. ದುಂದುಗಾರಿಕೆಯು ಸಮಾಜಕ್ಕೆ ಮಾಡುವ ಒಂದು ಪಾಪಕೃತ್ಯವೆಂದು ತಿಳಿಯಬೇಕು.

ಕೆಲ ಹಬ್ಬ ಹುಣ್ಣಿವೆಗಳಲ್ಲಿ ಅಸ್ಸಾಂ, ಬಂಗಾಲ, ಬಿಹಾರ ಮತ್ತು ಒರಿಸ್ಸಗಳಲ್ಲಿ ಒಬ್ಬರೊಬ್ಬರ ಮೇಲೆ ಮುಷ್ಟಿಗಟ್ಟಲೆ ಅಕ್ಕಿಯನ್ನು ಎಸೆದಾಡುವುದು ರೂಢಿಯಿದೆಯೆಂದು ನಾನು ಕೇಳಿದ್ದೇನೆ. ಜನರಿಗೆ ಅದರ ಪ್ರತಿಯೊಂದು ಕಾಳೂ ಬೇಕಾಗಿರುವಾಗ ಮುಗಟ್ಟಲೆ ಅಕ್ಕಿ ಹೀಗೆ ದುರ್ವ್ಯಯವಾಗುತ್ತದೆ. ಅದೊಂದು ದುರಾಚಾರ. ಕುಬೇರರೂ ಉತ್ಸವಾನಸನ್ನರೂ ಮಿತ್ರವರ ಯೋಗಕ್ಷೇಮವನ್ನು ಕಡೆಗಣಿಸಿ ಈ ವಿಶೃಂಖಲಾಚಾರವನ್ನು ನಡೆಸುವರಲ್ಲದೆ ತಮಗಿಂತ ಕೆಳಗಿನವರಲ್ಲೂ ಹಾಗೇ ಮಾಡುವ ಮೋಹಕ್ಕೆ ಎ... ಗೊಡುತ್ತಾರೆ. ಸಾಮಾಜಿಕ ಸಮಾರಂಭಗಳ... ಇವರು ಇದೇ ಯೋಗ್ಯವೆಂಬ ಕೃತಕ ಮಾದ... ಗಳನ್ನು ಹಾಕಿಕೊಡುತ್ತಾರೆ. ಈ ದುರ್ವ್ಯಯ... ಸಂತೋಷಗಳನ್ನು ಪಡೆಯುವುದರಲ್ಲಿ ವೆ... ವಾಗುವ ಹಣದ ನಷ್ಟ ಇವರಿಗೆ ಕಸಕ್ಕೆ ಸಮ... ವೆನಿಸಿದರೂ ಸ್ವಯಂ ಈ ಸಂತೋಷವೆ... ದುಷ್ಟವೂ ವಿಶ್ವಸ್ತಿಕೆಯ ಬುದ್ಧಿ ಉತ್ಪಾದ... ದನ್ನು ತೋರಿಸುವಂಥದೂ ಆಗಿದೆ. ಇವರ... ಹಳೆಯ ಸಂಪ್ರದಾಯಗಳನ್ನು ತಕ್ಕಂತೆ ಬ... ಲಾಯಿಸಿ, ಅವರಿಗಿಂತ ಐಶ್ವರ್ಯದಲ್ಲಿ ಕಡಿಮೆ... ಅಂತಸ್ತಿನಲ್ಲಿರುವ ದೇಶ ಬಾಂಧವರಿಗೆ ತಾ... ಕಡಿಮೆಯೆಂದಾಗಲಿ, ಇವರನ್ನು ನೋ... ಹೊಟ್ಟೆಕಿಚ್ಚುಪಡುವಂತಾಗಲಿ ಅನಿಸದಂ... ನಡೆದುಕೊಳ್ಳಬೇಕು.

ಆದರೆ ಒಂದು ವೇಳೆ ಕುಬೇರರು ತಮ್ಮ... ಸರಳ ಕರ್ತವ್ಯವೇನೆಂಬುದನ್ನು ಕಂಡು... ಕೊಂಡು ಅದರಂತೆ ನಡೆದುಕೊಳ್ಳದಿದ್ದರೂ... ಸಾಮಾನ್ಯ ಜನರು ಅವರನ್ನು ಅನುಕರಿ... ಬಾರದು. ಅವರು ಈ ಹೊಣೆಗಾರಿಕೆಯುಳ್ಳ... ರೀತಿ ನೀತಿಗಳಿಂದ ದೂರ ಇರಬೇಕು.

ಅಕೋಲಾ ಕಿ. ಘ. ಮಶ್ರೂವಾಲಾ
೫-೩-೪೯

ಪೂರ್ವಜರ ಮಧ್ಯದಲ್ಲಿದೆ; ಅದು ಅನೇ... ಸಂಸ್ಕೃತಿ ಭಾಷೆ ಜನಾಂಗಗಳ ಸಂಗಮಸ್ಥಾ... ಮಧ್ಯಾಹ್ನ ಸೂರ್ಯನು ಎಲ್ಲೆಡೆಗೂ ತನ್ನ ಪ್ರ... ಶವನ್ನು ಸಂಚುನಂತೆ ನಾವೂ ಎಲ್ಲರ ಸ... ವನ್ನು — ಸದ್ಭೋಗದಯವನ್ನು — ಗುರಿಯಾ... ಟ್ಟುಕೊಂಡವರು. ನಮ್ಮ ಸಾಮಾನ್ಯ ಸಂಸ್ಕೃ... ಮತ್ತು ಸಾಮಾನ್ಯ ಭಾಷೆಗಳ ಲಕ್ಷಣವಾದ... ಅದೇ ಆಗಲಿ. ನಮ್ಮ ದೇಶ ಸದ್ಭೋಗದ... ಸರ್ವದೇಶವಾಗಿದ್ದಂತೆ ಭಾಷೆಯೂ ಸ... ದಯೀ- ಸರ್ವಭಾಷಿಯಾಗಲಿ.

ಅಕೋಲಾ
೩-೩-೪೯ ಕಿ. ಘ. ಮಶ್ರೂವಾಲಾ

ಕೂಲಿಕಾರ ಸರಕಾರದ ವಿಜಯ—ಯುಗೋಸ್ಲೇವಿಯದ ವೀಕ್ಷಣಾನ್ವಯಹಾರ--ಭಾರತದ ಮೇಲೆ ರಶಿಯನ್ನರ ಗಂಭೀರ ಆರೋಪ

ಚುನಾವಣೆಯ ಪ್ರಾಥಮಿಕ ಪ್ರಕರಣಗಳು ಇಂದು ಬ್ರಿಟನ್ನಿನಲ್ಲಿ ಬಳಗೊಳ್ಳುತ್ತಿವೆ. ಟೋರಿ ಪತ್ರಿಕೆಗಳು ಬಹಳ ದಿವಸಗಳಿಂದ ಹ್ಯಾಮರ್ ಸ್ಮಿತ್ ಉಪಚುನಾವಣೆಯಲ್ಲಿ ಸಾರ್ವಜನಿಕರ ಆಸಕ್ತಿಯನ್ನು ಹೊತವಳ್ಳಿಸುತ್ತಬಂದವು.

ಇದರಲ್ಲಿ ದೃಢವಿಶ್ವಾಸವನ್ನಿಟ್ಟುಕೊಂಡು ಕನ್ಸರ್ವೇಟಿವರು ತಮ್ಮ ವಿಜಯದ ಪುನರ್ಘಟನದ ಪ್ರಾಪ್ತಿಯನ್ನು ಅಮೇರಿಕಕ್ಕೆ ಪ್ರದರ್ಶಿಸಿ ತೆಮ್ಮೆ ಪಡಬೇಕೆಂದು ಹವಣಿಸಿದ್ದರು. ಅದ್ದರಿಂದ ಅಮೇರಿಕದಲ್ಲಿ ಪ್ರಮುಖರಾದ ಆಂಗ್ಲ ಶಿಯಾಮುಖ ಚರ್ಚಿಲ್ಲರೇ ಸ್ವತಃ ಚುನಾವಣೆಯ ಪ್ರದೇಶದಲ್ಲಿ ಸ್ವಲ್ಪ ಅತಿಥ್ಯೈರ್ಯದಿಂದಲೇ ಪ್ರಚಾರಸಂಚಾರ ಮಾಡಿದರು. ಚರ್ಚಿಲ್ಲರ ಸರ್ಕಸ್ ಪ್ರದರ್ಶನದ ನಂತರ ತಾವೆಂದೂ ಸೋಲೆವೆಂದು ಕನ್ಸರ್ವೇಟೀವರು ನಂಬಿದರು.

ಅದರೂ ಅವರು ಸೋತೇಬಿಟ್ಟರು; ಅಂದಿನಿಂದ ಅವರಿಗೆ ಒಂದು ವಿಧದ ಹೊಟ್ಟೆಯುರಿ ಉಂಟಾಗಿದೆ. ಅವರ ಕೇಂದ್ರದಲ್ಲಿ "ಮನವ ಶೋಧಿಸಬೇಕು ಶಿಷ್ಯ" ಎಂಬ ಕೀರ್ತನೆ ಶುರುವಾಗಿದೆ. ಹ್ಯಾಮರ್‌ಸ್ಮಿತ್ತಿನ ಚುನಾವಣೆಗೆ ಸಾಮಾನ್ಯ ನೆವಗಳು ಸರಿತೋರುವುದಿಲ್ಲ. ಟೋರಿ ಪುರಿಯಾಳು ತೇಜಸ್ವಿಯೂ ಪ್ರತ್ಯುತ್ಪನ್ನಮತಿಯೂ ಆಗಿದ್ದನಲ್ಲದೆ ಪಕ್ಷದವರೂ ತಮ್ಮ ಪ್ರಚಾರಾದಿ ಕಾರ್ಯವನ್ನು ಚೆನ್ನಾಗಿ ನಿರ್ವಹಿಸಿದ್ದರು. ಅದರೆ, ಬ್ರಿಟಿಶ ಜನತೆ ಸೋಶಲಿಸ್ಟರಲ್ಲಿ ವಿಶ್ವಾಸವಿಟ್ಟಿದೆ; ಕೂಲಿಕಾರ ಪಕ್ಷವೆಂದರೆ ತಮ್ಮ ಪಕ್ಷವೆಂದು ತಿಳಿದುಕೊಂಡಿದೆ; ಕೂಲಿಕಾರ ಸರಕಾರದ ಇದೇ ಕಾರ್ಯಯೋಜನೆಯನ್ನೂ ಮೆಚ್ಚಿಕೊಳ್ಳದಿದ್ದರೂ ಐಶ್ವರ್ಯ ಮತ್ತು ವಿಶಿಷ್ಟ ಹಕ್ಕುಗಳನ್ನು ಪ್ರತಿನಿಧಿಸುವ ಇಸ್ತ್ರಿ ಅಂಗಿಯ ಸ್ವಯಂತುಷ್ಟ ಸುಂದರ ಕನ್ಸರ್ವೇಟಿವಿಗಿಂತ ಸಾಮಾನ್ಯ ಮನುಷ್ಯನ ಯೋಗಕ್ಷೇಮವನ್ನು ಕೂಲಿಕಾರ ವರ್ಗದವರೇ ಹೆಚ್ಚು ಸಹಾನುಭೂತಿಯಿಂದ ನೋಡಿಕೊಳ್ಳುವರೆಂದು ಅದಕ್ಕೆ ಅನಿಸುತ್ತದೆ. ಇದೇ ಕನ್ಸರ್ವೇಟೀವರ ಸೋಲಿಗೆ ಕಾರಣ.

ಟಿಟೋನ ಕಾರಭಾರ

ಮಾರ್ಶಲ್ ಟಿಟೋನ ರಶಿಯಪ್ರತಿಭಟನೆಯ ಮಹಾ ನಾಟಕದ ಇತ್ತೀಚಿನ ಅಂಕವನ್ನು ಲಂಡನ್ನಿನಲ್ಲಿ ಆಡಲಾಗುತ್ತಿದೆ. ಅಲ್ಲಿ ಆಸ್ಟ್ರಿಯದ ಶಾಂತಿಸಂಧಿಯ ಮಾತುಕತೆ ನಡೆಯುತ್ತಿದೆ. ಟಿಟೋನ ಉಪವಿದೇಶ ಮಂತ್ರಿ ಡಾ ವಿಲಸ್ ಬೆಬ್ಲರನು ಅದರ ಮುಖ್ಯನಟ. ಮಾಸ್ಕೋ ಮತ್ತು ವಾಷಿಂಗ್‌ಟನ್ ಈ ಎರಡೂ ಸ್ಥಳದವರೊಡನೆ ಸಂಧಿಯ ಮಾತುಕತೆ ನಡೆಸುತ್ತಿರುವ ಕೆಲವೇ ಜನರಲ್ಲಿ ಇವನೊಬ್ಬ. ಇವನು ಲಂಡನ್ನಿಗೆ ಬಂದು ಇಂದಿಗೆ ೧೦ ದಿನಗಳಾದವು. ಅಂದಿನಿಂದಲೂ ಇವನು ವಾಷಿಂಗ್‌ಟನ್ನಿನ ರಿಬರ್ ಎಂಬವನೊಡನೆ ಸೋವ್ಹಿಯೆಟ್ ಮೊಲಟೋವನ ಕೈಕೆಳಗಿನ ಜಾರುಬಿನ್ ಎಂಬವನೊಡನೆಯೂ ಬಹಳ ಆಸ್ತಪೂರ್ವಕ ಮಾತುಕತೆ ನಡೆಸುತ್ತಿದ್ದಾನೆ; ಬೆಬ್ಲರನು ಆಸ್ಟ್ರಿಯ ಕೆಲ ರಾಜ್ಯಭಾಗವನ್ನೂ ಧನರೂಪದ ದೊಡ್ಡ ಪರಿಹಾರವನ್ನೂ ಕೊಡಬೇಕೆನ್ನುತ್ತಾನೆ. ಮಾತುಕತೆಯು ಜಯಾಪಜಯಗಳು ಈ ಬೇಡಿಕೆಗಳ ಹೊಂದಿಕೆಯನ್ನು ಅವಲಂಬಿಸಿವೆ. ಈ ಜಯಾಪಜಯಗಳೇ ಯುರೋಪಿನ ಪೂರ್ವ ಪಶ್ಚಿಮ ಪಕ್ಷಗಳ ಭಾವೀ ಸಂಬಂಧವನ್ನು ನಿರ್ಣಯಿಸತಕ್ಕದ್ದಾಗಿವೆ.

ಕಮ್ಯುನಿಸ್ಟರ ಬಂಧನದ ಪ್ರತಿಕ್ರಿಯೆ

ಕಮ್ಯುನಿಸ್ಟರ ಬಂಧನ ಮತ್ತು ವಿಶೇಷತಃ ಕಲಕತ್ತೆಯಲ್ಲಿ ಅವರ ಮೇಲೆ ಸರಕಾರ ಮಾಡಿದ ದಾಳಿ ಇವು ಕೆಲ ಬ್ರಿಟಿಶ್ ಪತ್ರಿಕೆಗಳಲ್ಲಿ ಭಾರತಕ್ಕೆ ಮುಖಪುಟದ ಸ್ಥಳವನ್ನು ಕೊಡಿಸಿವೆ. ಅಲ್ಲದೆ, ಒಬ್ಬ ನಿರೀಕ್ಷಕ ಪತ್ರಕಾರನ ಪ್ರಕಾರ, "ಲಿಟರರಿ ಗಜೆಟ್" ಎಂಬ ಮಾಸ್ಕೋ ಪತ್ರಿಕೆ ಭಾರತ ಸರಕಾರದ ಮೇಲೆ ಉಗ್ರ ಪ್ರತಿಭಟನೆಯನ್ನು ವ್ಯಕ್ತ ಮಾಡಿದೆ. ರಶಿಯವು ನೆಹರೂ ಸರಕಾರದ ಭಾರತದತ್ತ ಉದಾರ ತಾಟಸ್ಥ್ಯದಿಂದ ನೋಡುತ್ತಿದ್ದುದನ್ನು ಬಿಟ್ಟು ಪ್ರತಿಕೂಲವಾದ ದೃಷ್ಟಿಯಿಂದ ನೋಡುವ ಹೊಸ ಧೋರಣ ತಳೆದುದನ್ನು ಇದು ತೋರುತ್ತದೆ. ಆಗ್ನೇಯ ಏಶಿಯದ ದೇಶಗಳನ್ನು ಸಂಘಟಿಸಿ "ಅಗ್ರ

ಮಿಕ ಸಾಮ್ರಾಜ್ಯ ಒಕ್ಕೂಟದ ದೂರ ಪ್ರಾಚ್ಯದ ಪ್ರತಿನಿಧಿಯನ್ನಾಗಿ ಮಾಡಲು ಭಾರತ ಹವಣಿಸಿದೆಯೆಂದು ಅದು ಆರೋಪಿಸಿದೆ. ಅಲ್ಲದೆ ಬ್ರಿಟಿಶ್ ಸಾಮ್ರಾಜ್ಯಶಾಹಿಗೆ ಬೆಂಬಲವಾಗಿ ನಿಲ್ಲಲು ಭಾರತವನ್ನು "ಒಂದು ವಿಧದ ಅಖಿಲ ಏಶಿಯ ಸಶಸ್ತ್ರ ಪೋಲೀಸು ದಲ"ವನ್ನಾಗಿ ಪರಿವರ್ತಿಸಲು ಆಂಗ್ಲರು ಪ್ರಯತ್ನಿಸುತ್ತಿದ್ದಾರೆಂದು ಬ್ರಿಟಿಶ್ ಸರಕಾರದ ಮೇಲೂ ಆಪಾದನೆ ಮಾಡಿದೆ.

ವ್ಯಾಪಾರ ಪ್ರಪಂಚ

ಮುಂಬಯಿ ಶೇರಪೇಟೆ

ತಾ. ೧೧

ಶೇರಪೇಟೆಯಲ್ಲಿ ಬೆಲೆಗಳು ಈ ವಾರ ಸ್ವಲ್ಪ ಸುಧಾರಿಸಿವೆ. ಟಾಟಾ ಸ್ಟೀಲ ಡೆಫರ್ಡ ಪಾಲುಗಳು ೩೦ ರೂಪಾಯಿತನಕ ಮುಂದೆ ಸಾಗಿತು. ಇಂದಿನ ಕೊನೆಯ ದರಗಳು ಹೀಗಿದ್ದವು:

ಫಿನ್ಲೆ	೨೮೦-೦-೦
ಮುಂಬಯಿ ಡಾಯಿಂಗ್	೯೪೨ ೮-೦
ಕೋಹಿನೂರು	೨೯೦-೦-೦
ಸ್ವದೇಶಿ	೨೮೧ ೪-೦
ಗೋಕಾಕ	೨೯೦-೦-೦
ಸೆಂಚುರಿ	೨೬೧-೪-೦
ಸೆಂಟ್ರಲ ಇಂಡಿಯಾ	೨೪೦-೦-೦
ಟಾಟಾ ಸ್ಟೀಲ ಡೆಫರ್ಡ	೧೬೫೦-೧೨-೦
ದೇವಾಪುರ ಸಕ್ಕರೆ	೨೧೬-೮-೦
ಸಿಂಧ್ಯ ಸ್ಟೀಮ	೧೮ ೦-೦
ಇಂಡಿಯನ್ ಅಯರ್ನ	೨೪-೦-೦
ಸೆಂಟ್ರಲ ಬ್ಯಾಂಕ್	೮೭-೮-೦
ಇಂಪೀರಿಯಲ್ ಬ್ಯಾಂಕ್(ಪೂರ್ಣ)	೧೮೮೫ ೦ ೦
ಬ್ಯಾಂಕ ಆಫ್ ಇಂಡಿಯಾ	೧೯೮ ೪-೦

ಚಿನ್ನ ಬೆಳ್ಳಿ

ಬೆಲೆಗಳು ಇಳಿಮುಖವಾಗಿವೆ.

ಚಿನ್ನ	೧೧೫-೦-೦
ಬೆಳ್ಳಿ	೧೮೬ ೧೨-೦
ಸಾವರಿನ್	—

ಅರಳೆ

ಅಧಿಕೃತ ದರಗಳು ಲಭ್ಯವಾಗುವದಿಲ್ಲ. ಅನಧಿಕೃತ ಧಾರಣೆಗಳು ಹೀಗಿವೆ:

ಮೇ	೬೨೪-೦-೦
ಜುಲೈ	೬೨೩ ೮-೦
ಸೆಪ್ಟಂಬರ	೬೨೨-೮-೦

ಎಣ್ಣೆಕಾಳು

ಶೇಂಗಾ	೧೮೬-೪ ೦
ಅಗಸಿ	೨೮-೮-೦
ಹೊಸ ಅಗಸಿ	೨೮ ೭-೨

ಹುಬ್ಬಳ್ಳಿ

ತಾ. ೧೧

ಜ. ಹತ್ತಿ ನಗಳ್ಳಿ		೪೯೦-೫೨೦
ಮುಂ. ಹತ್ತಿ		೪೮೦ ೫೦೫
ಜ. ಅರಳೆ ,,		೨೯೦ ೩೦೫
ಜ. ಹತ್ತಿಕಾಳು	೧೨೭.ಗೆ ೪	೪¼ ಪೌಂಡು
ವಿ. ಹತ್ತಿಕಾಳು ,,		೪¼ ಪೌಂಡು
ಕುಸುಬಿ (ಬ. ಮಣಕ್ಕೆ)	೧೫.೦-೦	೧೫-೧೨-೦
ಅಗಸಿ	(ಚೀಲಕ್ಕೆ) —	೩೯-೦-೦
ಔಡಲ	,,	೩೯ ೦-೦
ಜ. ಹೆಸರು	,,	೪೮ ೫೬
ಕರಿ ಎಳ್ಳು	,,	೬೨-೬೨
ಬಿಳಿ ಎಳ್ಳು	,,	೬೪ ೭೩
ಕಡಲೆ	,,	೫೬ ೫೮
ಜ. ತೊಗರಿ	,,	೩೯ ೪೨
ಹುರಳಿ	,,	೩೭
ಕೆಂ. ಅಲಸಂದಿ	,,	೫೬-೫೮
ಬಿ. ಅಲಸಂದಿ	,,	೫೮ ೬೦
ಶೇಂಗಾ (ಹೇರು)		೪೮ ೫೨

ತಿದ್ದುಪಡಿ

'ಇದೇ ಸಂಚಿಕೆಯ ೪ನೆ ಪುಟದಲ್ಲಿ ಮಹಿಳಾ ಗೋಷ್ಠಿಯನ್ನು ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರು ಉದ್ಘಾಟಿಸಿದರೆಂದು ಅದೆ ಪರಿವಿಡಿಸಮಾರ್ಗಕವಾಗಿದ್ದು, ಅನಿವಾರ್ಯ ಕಾರಣಗಳಿಂದ ಅವರು ಉಪಸ್ಥಿತರಾಗದಿದ್ದುದರಿಂದ ಅದರಲ್ಲಿನ ಸಭಾರಂಭ ಮಾಡಿಕೊಂಡು ತಿಳಿಯುತ್ತದೆ.



ಗೃಹ ಕಾರ್ಯವನ್ನೊಂದು ವೃತ್ತಿಯನ್ನಾಗಿ ಸ್ವೀಕರಿಸುವ ಸ್ತ್ರೀಯರಿಗಾಗಿ ಲಂಡನ್ನಿನ ಕೇಂದ್ರಭವನದಲ್ಲಿ ಒಂದು ಉಚಿತ ಶಿಕ್ಷಣ ಕೇಂದ್ರವನ್ನು ತೆರೆಯಲಾಗಿದೆ. ಬಟ್ಟೆ ಒಗೆಯುವ ಮತ್ತು ಇಸ್ತ್ರೀಮಾಡುವ ಮುಂತಾದ ಎಲ್ಲ ಕಾರ್ಯಗಳನ್ನೂ ಇಲ್ಲಿ ಶಿಷ್ಯವೃತ್ತಿಗೆ ಯೋಗ್ಯರಾದವರಿಗೆ ಅದನ್ನು ಕೊಟ್ಟು ಕಲಿಸಲಾಗುವದು.

(೭ ನೇ ಪುಟದಿಂದ ಬಂದುದು)

ಸಂಬಂಧಿಸಿದ ಕಾಯದೆ ಮತ್ತು ಸಮಯಾಚಾರಗಳ ಪರಿಚಯವಿರಬೇಕು. ಬೇಕಾದ ಸ್ಥಾನ ಮತ್ತು ದಕ್ಷತೆಯ ಸರಕಾರೀ ನೌಕರರು ಸಿಗಲಾರರೆಂಬ ಭಯವಿರುವದರಿಂದ ನೌಕರೇತರರು ಮತ್ತು ಸರಕಾರೇತರ ವಿದ್ಯಾಲಯಗಳ ಮತ್ತು ಇತರ ಸಂಸ್ಥೆಗಳ ಗೃಹಸ್ಥರ ನೆರವನ್ನು ಪಡೆಯಬೇಕಾಗಬಹುದು. ಅವರ ಮೇಲೆ ಪಕ್ಷಪಾತದ ಆರೋಪ ಬಾರದಿರುವಂತೆ ಬಹಳ ಎಚ್ಚರಿಕೆಯಿಂದ ಅವರನ್ನು ಆರಿಸಬೇಕು. ಒಂದೆರಡರಷ್ಟು ಏರಿಸದಿದ್ದರೂ ಕೆಲ ಮಟ್ಟಿಗೆ ಮತದಾನಾಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸಬೇಕಾಗಬಹುದು. ವೆಚ್ಚ ಉಳಿಸುವಂತಾಗಬೇಕಾದರೆ ಕೇಂದ್ರ ಮತ್ತು ಪ್ರಾಂತಿಕ ಶಾಸನ ಸಭೆಗಳೆರಡಕ್ಕೂ ಏಕಕಾಲದಲ್ಲಿ ಚುನಾವಣೆ ನಡೆಸಬೇಕಾಗುವದೇ ಇದಕ್ಕೆ ಕಾರಣ. ಅಕ್ಕಿಂತ ಕಡಿಮೆ ದಿನಗಳಲ್ಲಿ ಚುನಾವಣೆಯನ್ನು ಮುಗಿಸಬೇಕಾದರೆ ಅದೇ ಪ್ರಮಾಣದಲ್ಲಿ ಮತದಾನಾಧಿಕಾರಿ, ಪೋಲೀಸು ಅಧಿಕಾರಿ ಮತ್ತು ಕಾನ್ಸ್‌ಟೆಬಲ್ಲುಗಳ ಸಂಖ್ಯೆಯನ್ನು ಹೆಚ್ಚಿಸಬೇಕಾದೀತು.

ಮತದಾರಪಟ್ಟಿಯನ್ನು ಅಚ್ಚು ಹಾಕಿಸಿ ಚುನಾವಣೆ ನಡೆಸಲು ಮನುಷ್ಯರನ್ನು ಹುಡುಕುವಲ್ಲಿ ಸರಕಾರ ಏನು ಮಾಡಬೇಕಾಗುವುದೆಂಬುದಿಷ್ಟನ್ನೇ ನಾನು ಹೇಳಿದ್ದೇನೆ. ಚುನಾವಣೆಯ ಪ್ರದೇಶಗಳ ಸ್ವಭಾವ, ಹುರಿಯಾಳುಗಳ ಸಂಖ್ಯೆ ಮತ್ತು ಗುಣ ಮತ್ತು ರಾಜಕೀಯ ಪಕ್ಷಗಳ ಸಂಘಟನೆ ಇವುಗಳ ಮೇಲೆ ಬಹಳ ಅವಲಂಬಿಸಿರುವದರಿಂದ ಚುನಾವಣೆಗೆ ಸಂಬಂಧಿಸಿದ ಇತರ ವಿಷಯಗಳು ದುರೂಹ್ಯವಾಗಿವೆ. ಬಳಸಲಾಗುವ ಪೆಟ್ರೋಲಿನ ಪರಿಮಾಣ ಮತ್ತು ಕಾರುಗಳ ಗಾತ್ರ ಮತ್ತು ಶ್ರೇಣಿ ಇವನ್ನು ಅಂದಾಜು ಮಾಡುವದು ಕಷ್ಟ. ಬಹಳ ಮಿತವಾಗಿ ಲೆಕ್ಕ ಹಾಕಿದರೂ ಹುರಿಯಾಳುಗಳಿಗೆ ಕೋಟಿಗಟ್ಟಲೆ ಖರ್ಚಾಗಬಹುದು.

೧೫-೩ ೪೯ — ರಾಜೇಂದ್ರ ಪ್ರಸಾದ

ಶಿವಮೊಗ್ಗ ಚಿಕ್ಕಮಗಳೂರಲ್ಲಿ ಮದ್ಯಪಾನ ಪ್ರತಿಬಂಧ

ಇದೇ ಜುಲೈಯಿಂದ ಪ್ರಾರಂಭ

ಸಂಸ್ಥಾನದ ಉತ್ತರ ಭಾಗದಲ್ಲಿರುವ ಚಿಕ್ಕಮಗಳೂರು ಶಿವಮೊಗ್ಗ ಜಿಲ್ಲೆಗಳಲ್ಲಿ ಇದೇ ಜುಲೈ ತಿಂಗಳಿಂದ ಸಂಪೂರ್ಣ ಮದ್ಯಪಾನ ಪ್ರತಿಬಂಧವು ಜಾರಿಯಲ್ಲಿ ಬರುವದು. ಇದರಿಂದ ಸುಮಾರು ೩೦ ಲಕ್ಷ ರೂ. ಆದಾಯ ಕಡಿಮೆಯಾಗಬಹುದೆಂದು ಅಂದಾಜಿದೆ. ಕಳೆದ ವರುಷ ಮದ್ರಾಸಗಡಿಗೆ ಹೊಂದಿರುವ ೫ ಜಿಲ್ಲೆಗಳಲ್ಲಿ ಮದ್ಯಪಾನ ಪ್ರತಿಬಂಧವನ್ನು ಜಮಲಿನಲ್ಲಿ ತಂದದ್ದರಿಂದ ಸರಕಾರಕ್ಕೆ ೧ ಕೋಟಿ ರೂಪಾಯಿ ಆದಾಯ ಕಡಿಮೆಯಾಗಿದೆ.

ಸಾಂಗಲಿ ಪೇಟೆ

ಅರಿಸಿಣ	೧೧೭-೧೩೪
ಪೆಂಡಿಸಿನಕಾಯಿ	೧೧೦ -೧೫೦
ಶೇಂಗಾ	೧೯೩॥
ಬೆಲ್ಲ	೪೦-೬೦

ಛೋಟೇಸೀ ದುನಿಯಾ!

ಮೊನ್ನೆ ಫೆಬ್ರುವರಿ ೨೬ ಶನಿವಾರ ಅಡ್ರಿಯಾಟಿಕ ಸಮುದ್ರ ತೀರದ ಪುಟ್ಟಗಣರಾಜ್ಯವಾದ ಸ್ಯಾನ್ ಮ್ಯಾರಿನೋದಲ್ಲಿ ಪ್ರಜಾಪ್ರತಿನಿಧಿ ಸಭೆಯ ಚುನಾವಣೆಗಳಾದವು.

೧೯೩೯ ರಲ್ಲಿ ೧೪,೫೪೫ ಜನ ಸಂಖ್ಯೆಯಿದ್ದ ೩೮ ಚೌರಸ ಮೈಲು ವಿಸ್ತೀರ್ಣದ ಈ ಗಣರಾಜ್ಯವನ್ನು ಕ್ರಿಸ್ತಶಕಾರಂಭದಲ್ಲಿ ಕ್ರೈಸ್ತ ವಿರೋಧಿ ಪ್ರಜಾಪೀಡಕರ ಕೈಯಿಂದ ಪಾರಾಗಿ ದಲ್ಮಾಶಿಯಾದಲ್ಲಿ ಹೋಗಿ ನೆಲಸಿದ ಸ್ಯೆಂಟ್ ಮ್ಯಾರಿನಸ್ಸನೆಂಬ ಕ್ರೈಸ್ತ ಸಾಧು ಸ್ಥಾಪಿಸಿದನು.

ಮೂರ್ತಿ ಚಿಕ್ಕದಾದರೂ ಈ ಗಣರಾಜ್ಯದ ಸ್ವಾಭಿಮಾನ ದೊಡ್ಡದು. ನೆಪೋಲಿಯನ್ನನೊಮ್ಮೆ ಹೆಚ್ಚು ಭೂಮಿಯ ಆಸೆ ತೋರಿಸಿ ಇಲ್ಲಿಯ ರೈತಾಪಿಜನರನ್ನು ಸೆಳೆದುಕೊಳ್ಳಲು ನೋಡಿದ. ಅಭಿಮಾನಶೀಲರಾದ ಈ ಗಣರಾಜ್ಯವಾದಿಗಳಿತ್ತ ಉತ್ತರ: "ಮೊದಲಿನಿಂದಲೂ ನಾವು ಸಣ್ಣವರು, ಇನ್ನಾದರೂ ಹಾಗೆಯೆ ಉಳಿಯಬಯಸುವೆವು. ಆದರೂ ನಿಮ್ಮ ಔದಾರ್ಯಕ್ಕೆ ಧನ್ಯವಾದಗಳು!"

"ಎಷ್ಟೋ ವಿಜೇತರು ಬಂದರು, ಹೋದರು. ನಾವು ಮಾತ್ರ ಎರಡು ಸಾವಿರ ವರ್ಷಗಳಿಂದ ಯಥಾಸ್ಥಿತಿ ಇದ್ದೇವೆ" ಎಂದು ಈ ಸ್ವಾತಂತ್ರ್ಯಪ್ರಿಯ ಜನರು ಹೇಳುತ್ತಿರುತ್ತಾರೆ.

ಅಲ್ಲಿಯ ಶಾಸನ ಸಭೆಗೆ ೬೦ ಸದಸ್ಯರು ೨೦ ಜನ ಸರದಾರರು, ೨೦ ಜನ ಸಾಮಾನ್ಯರು, ೨೦ ಜನ ರೈತರು. ಹೆಂಗಸರಿಗೆ ಮತಾಧಿಕಾರ ಇಲ್ಲ.

ಅಲ್ಲಿಯ ಸೈನ್ಯದಲ್ಲಿ ೧೦೦೦ ಸೈನಿಕರು. ಅವರಿಗೆ ೪೦ ಅಧಿಕಾರಿಗಳಿದ್ದಾರೆ. ಅಲ್ಲದೆ ೧೬ ರಿಂದ ೫೫ ರೊಳಗಿನ ವಯಸ್ಸಿನ ಎಲ್ಲ ಸಮರ್ಥ ಗಂಡಸರು ಗೃಹರಕ್ಷಕರು.

ಶಾಸನಸಭಾಸದರಲ್ಲಿ ಮೂವರು ರೀಜಂಟ (ಪಾಲಕ)ರು ಪ್ರತಿ ಆರು ತಿಂಗಳಿಗೊಮ್ಮೆ ಆರಿಸಲ್ಪಟ್ಟು ೬ ಜನ ಸಭಾಸದ ಸಹಾಯಕರ ಸಹಾಯದಿಂದ ಆಡಳಿತ ಸಾಗಿಸುತ್ತಾರೆ.

ನ್ಯಾಯದಾನಕ್ಕೆ ಹೊರಗಿನವರನ್ನೆ ಅಂದರೆ ಕನಿಷ್ಠ ೪೦ ಮೈಲು ದೂರದವರನ್ನು, ನೇಮಿಸಬೇಕೆಂದು ಅಲ್ಲಿಯ ನಿಯಮ.

೨೦ ಮೈಲುದ್ದದ ಒಂದು ವಿದ್ಯುತ್ ರೇಲ್ವೆ ಅಲ್ಲಿದೆ.

ಇಟಲಿ, ಬ್ರಿಟನ್ ಅಮೇರಿಕೆ ಮೊದಲಾದ ಅನೇಕ ದೇಶಗಳೊಡನೆ ಅದು ಸಂಧಿ ಮಾಡಿಕೊಂಡಿದೆ. ಸದ್ಯದ ವಿದೇಶ ಮಂತ್ರಿ ಯುಬ್ಲಿಕ್ ಕಾರನಲ್ಲಿ ಓಡಾಡುವ ಒಬ್ಬ ಸಾಮ್ಯವಾದಿ. ಹೊಸ ಚುನಾವಣೆಯ ನಂತರ ಅವನೀಗೆ ರಾಜೀನಾಮೆ ಕೊಟ್ಟು ತನ್ನ ಹಳೆ ವೃತ್ತಿಯಾದ ಬಡಿಗತನವನ್ನೆ ಪ್ರಾರಂಭಿಸುವನಂತೆ.

ಶಿವಮೊಗ್ಗ

ತಾ. ೧೧

ದೇಶಾವರ ನಂ. ೧	ರೂ. ೩೦ ೩೩
,, ೨	
ರಾಜಾ ಅಲವು	೨೭ ೩೦
ಸುಳಿ	೨೬ ೨೯
ಚೆಟ್ಟನಂತಿ	೩೭ ೩೨
ಚಟ್ಟಿ	೧೭-೧೮
	೧೬-೧೭

ರೂಪರಂಗ

ಸಿನೆಮಗಳೂ ಅನಾಗರಿಕತೆಯೂ

ಒಬ್ಬ ಕಾಲೇಜು ಹುಡುಗಿ ವಿವಾಹವಾದವನೊಬ್ಬನನ್ನು ಪ್ರೀತಿಸತೊಡಗಿದರೆ ಏನಾಗುತ್ತದೆ? ಎಂದು ಕೇಳುತ್ತಾಳೆ ಜಲಂಧರದ ಒಬ್ಬ ಪ್ರೇಮಯೋಗಿನಿ. ಅಪ್ಸರೆಯೊಬ್ಬಳು ಸಭ್ಯನೊಬ್ಬನತ್ತ ಕಟಾಕ್ಷವಿಕ್ಷೇಪ ಮಾಡಿದರೆ ಏನಾಗುವದು? ಎಂದು ಪ್ರಶ್ನಿಸುತ್ತಾನೆ ಕಾನಪುರದ ಶೃಂಗಾರಚಂದ್ರನೊಬ್ಬ.

ಇಂಥ ಪ್ರಶ್ನೆಗಳನ್ನು ಕೇಳಿದ್ದೇನೂ ಬಹಳ ತಪ್ಪೆಂದು ನಾನು ಹೇಳುವದಿಲ್ಲ. ಹಾಗೆ ಕೇಳುವ ಮನೋವೃತ್ತಿ ಬೆಳೆಯಲು, ವಿಚಿತ್ರವಾದ ಪ್ರೇಮಾಂಕುರದ ಸಮಸ್ಯೆಯಲ್ಲಿ ಅವರ ಬುದ್ಧಿ ವೆಚ್ಚವಾಗುವಂತಾಗಲು ಇಂದಿನ ಸಾಮಾಜಿಕ ಸಿನೆಮಗಳೆಂಬ ಕಾಮಸುಂದರ ಚಿತ್ರಗಳೇ ಪ್ರಚೋದಕವಲ್ಲವೆ? ಎಂಬುದು ಮುಖ್ಯವಾಗಿ ಬೇಕಾದದ್ದು.

ಚುಂಬನವು ಆಲಿಂಗನದ ರೂಪ ತಾಳುವದು ಯಾವಾಗ?–ಗಜಿಯಾಬಾದಿನ ರೂಪರಸಿಕನೊಬ್ಬನ ಸವಾಲು. ಸಂಪೂರ್ಣವಾದ ಒಂದು ಚುಂಬನವನ್ನು ಪ್ರದರ್ಶಿಸುವುದು ಹೇಗೆ? ಎಂದು ಕಲ್ಕತ್ತದವಳೊಬ್ಬಳ ಸಮಸ್ಯೆ. ಈ ಪ್ರಶ್ನೆಗಳಿಗೇನಾದರೂ ಸಹಜಜಿಜ್ಞಾಸೆಯ ಹಿನ್ನೆಲೆಯಿದೆಯೆ? ಈ ಪ್ರಶ್ನಕರ್ತರು ಇಂದಿನ ನಾಗರಿಕ ತರುಣ ತರುಣಿಯರು; ನಾಳಿನ ವಿದ್ಯಾವಂತರೂ ಸ್ವತಂತ್ರ ಭಾರತದ ಸಭ್ಯ ಪ್ರಜೆಗಳೂ ಎನಿಸುವವರು! ಇಂದಿನ ಪ್ರಜಾ ನಿರ್ಮಾತರೆನಿಸುವ ಗುರುಹಿರಿಯರು, ಶಿಕ್ಷಣತಜ್ಞರು ಮತ್ತು ಸಮಾಜಸುಧಾರಕರು ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರ ಬುದ್ಧಿಯನ್ನು ತಿದ್ದುವ ಪ್ರಯತ್ನದಲ್ಲಿ ಬಹಳ ಒಷ್ಠಾಧರಸೇವೆ ಸಲ್ಲಿಸುತ್ತಿರುವದು ಸುವೇದ್ಯವಿದೆ, ಆದರೆ ಅವರ ಶ್ರಾವಕರು ವಿದ್ಯಾರ್ಥಿ ವಿದ್ಯಾರ್ಥಿನಿಯರ ಖಾಸಗಿ ಮಾತುಕತೆಗಳನ್ನು, ಆಚಾರ ವಿಚಾರಗಳನ್ನು ಗುಪ್ತಪೋಲೀಸಗಿರಿಯಿಂದ ತಿಳಿಯಲು ಒಮ್ಮೆಯಾದರೂ ಸ್ವಲ್ಪ ಪ್ರಯತ್ನಿಸಿದರೆ ವಸ್ತುಸ್ಥಿತಿಯ ಪರಿಚಯವಾಗದಿರದು.

ಹಿಂದುಗಳ ಕೇಂದ್ರ ಯಾತ್ರಾಸ್ಥಳವಾದ ಕಾಶಿಯ ನಿವಾಸಿಯೊಬ್ಬ ಕೇಳುತ್ತಾನೆ: ತನ್ನ ಮೈಯನ್ನು ಎಲ್ಲರಿಗಿಂತ ಹೆಚ್ಚಾಗಿ ಪ್ರದರ್ಶಿಸುವ ನಟಿ ಯಾವಳು?–ಎಂದು. ಇಂಥ ಮತ್ತು ಇದಕ್ಕೂ ಹೆಚ್ಚಿನ ಅನಾರೋಗ್ಯಕರವಾದ ಆಸಕ್ತಿಯನ್ನು ಉದ್ದೀಪಿಸುವ ಪ್ರಶ್ನೆಗಳನ್ನು ಸಿನೆಮ ಮಾಸಿಕಗಳಾದ "ಫಿಲ್ಮಿಂಡಿಯಾ" "ಸಿನೆವ್ಹ್ಯಾಸ್" ಮುಂತಾದವುಗಳಲ್ಲಿ ನೀವು ಕಾಣಬಹುದು. ವಾಚಕಭಕ್ತರ ಅಮೂಲ್ಯ ಕಾಣಿಕೆಗಳ ಅನೇಕ ಮಾದರಿಗಳು ಅಲ್ಲಿ ಪ್ರದರ್ಶಿಸಲ್ಪಟ್ಟಿರುತ್ತವೆ. ಅವರವರ ಅಭಿರುಚಿಯಿಂದ ಅವರ ಗುಣ, ನಡತೆ, ಆಚಾರ, ವಿಚಾರಗಳನ್ನು ಯಾವನಾದರೂ ಅಳೆದು ಬಿಡಬಹುದಲ್ಲವೆ? ಅಥವಾ ಅದರಿಂದ ಅಳೆಯಲಾಗದೆಂದರೆ ಇನ್ನಾವುದರಿಂದ ಅಳೆಯಬೇಕು?

ವೇದದಲ್ಲಿ ಯಜ್ಞಕ್ಕೆ ಸೋಮರಸ ಅಗತ್ಯವೆಂದರು. ಆದರೆ ಸೋಮಲತೆಯನ್ನು ದ್ವಿಜರು ಕಡಿದು ತರಬಾರದೆಂದು ವಿಧಿಸಿದರು. ಅಂದರೆ ದ್ವಿಜೇತರನು ಆ ಬಳ್ಳಿಯನ್ನು ಕಡಿವ ಪಾಪದ ಕೆಲಸ ಮಾಡಬೇಕು. ದ್ವಿಜರು ಅದನ್ನು ಬಳಸಿ ಪುಣ್ಯವಂತರಾಗಬೇಕು ಎಂದ ಹಾಗಾಯಿತು. ಅಯೋಗ್ಯ ವ್ಯಾಪಾರ ವ್ಯವಹಾರಕರ್ತರು ಮತ್ತು ಅವರಿಂದ ಪ್ರಯೋಜನ ಪಡೆವವರಲ್ಲಿ ಇಂದು ಅದೇ ಪ್ರಕಾರ ಎರಡನೆಯವರು ಒಂದನೆಯವರನ್ನು ನಿಂದಿಸಿ ಅನಿವಾರ್ಯತೆಯ ಸೋಗಿನಲ್ಲಿ ತಾವು ಯೋಗ್ಯರೆನಿಸಿಕೊಳ್ಳುವದು ರೂಢಿಯಾಗಿದೆ. ನ್ಯಾಯವಾಗಿ ನೋಡಿದರೆ ಇಬ್ಬರೂ ಪರಸ್ಪರಾವಲಂಬಿಗಳು, ಲಂಚಕೊಡುವವ ಮತ್ತು ತೆಗೆದುಕೊಳ್ಳುವವ, ಮದ್ಯಮಾರುವವ ಮತ್ತು ಕೊಂಡು ಕುಡಿವವ, ವೇಶ್ಯೆ ಮತ್ತು ವಿಟ, ಕಳ್ಳಪೇಟೆಗಾರ ಮತ್ತು ಗಿರಾಕಿ ಈ ಇಬ್ಬಣದವರೂ ಸಮಪಾಪಿಗಳು. ಇದೇ ಮೇರೆಗೆ ಅಯೋಗ್ಯ ಕಲಾಕೃತಿಗಳ ಕರ್ತರು ಮತ್ತು ಅವುಗಳ ರಸಿಕರು ಈ ಇಬ್ಬರೂ ಅಯೋಗ್ಯರು, ಅಪರಾಧಿಗಳು. ಆದರೆ ಅಸದ್ಭಾವನಾಪ್ರೇರಕ ಕೃತಿಗಳು ಕಾರಣಗಳೂ ಪ್ರೇಕ್ಷಕರು ಪರಿಣಾಮಕ್ಷೇತ್ರಗಳೂ ಆಗಿರುವದರಿಂದ ಕಾರಣವಿಘಟನ ಮೊದಲು ಮಾಡಿದರೆ ಕಾರ್ಯವಿಘಟನೆ ತಾನಾಗಿಯೇ ಆಗುವದಲ್ಲವೆ? ಬೇಡಿಕೆ ಇದ್ದರೆ ತಯಾರಿಕೆ ಇರುವದು ನಿಜವಾದರೂ ಎಷ್ಟೋ ಸಲ ತಯಾರು ಮಾಡಿ ಮುಂದಿಟ್ಟರೆ ಆ ವಸ್ತು ಬೇಕೆನಿಸುವುದೂ ಸ್ವಾಭಾವಿಕ. ಇನ್ನು ಒಂದು ವೇಳೆ ಒಂದು ಅಸತ್ಕಾರ್ಯಕ್ಕೆ ಬೇಡಿಕೆಯ ಪ್ರಾಬಲ್ಯವೇ ಹೆಚ್ಚಿದ್ದ ಪಕ್ಷದಲ್ಲಿ ಅದಕ್ಕೆ ಮೊದಲು ಮರ್ದನ ಮಾಡಬೇಕು. ಇಂದಿನ ಸಿನೆಮಗಳು ಕೇವಲ ಜನರ ಬೇಡಿಕೆಯಿಂದ ತಯಾರಾದವಲ್ಲ; ನಿರ್ಮಾಪಕರ ದುಡ್ಡಿನ ಆಸೆಯಿಂದ. ಆದುದರಿಂದ ಇಲ್ಲಿ ಕೊಳ್ಳುವವನಿಗಿಂತ ಮಾರುವವನನ್ನು ಮೊದಲು ನಿಯಂತ್ರಣಕ್ಕೊಳಪಡಿಸಬೇಕು. ಚಿತ್ರಪರೀಕ್ಷಕರೂ ಪತ್ರಿಕಾಪರಿಶೀಲಕರೂ ಹೆಚ್ಚಿನ ವಿಮರ್ಶಾನಿಶಿತತೆಯನ್ನು ತೋರಿ ಅಸದನುಶಾಸನ ಮಾಡಬೇಕು. ಅಲ್ಲದಿದ್ದರೆ ಶ್ರೀ ಶಾಂತಾರಾಮರೆಂದಂತೆ ಭಾರತೀಯ ಸಮಾಜ ಕೆಲವೇ ವರ್ಷಗಳಲ್ಲಿ ಕೆಳಗಿಳಿದು ಹೋಗದಿರದು.

—ರಂಗ

ಎಲ್ಲ ಬಣ್ಣ ಮಸಿ ನುಂಗಿತು

ಆಧುನಿಕರೆನಿಸಿಕೊಂಡವರು ಪಾಶ್ಚಾತ್ಯರ ಜೀವನದ ವಿವಿಧಾಂಶಗಳನ್ನು ದೂರುವ ವರ್ಗಕ್ಕೆ ಕೇಳುತ್ತಾರೆ— ಏನ್ರೀ ಅವರಲ್ಲಿ ಗುಣಾಂಶಗಳೇ ಇಲ್ಲವೋ?— ಎಂದು. 'ಅಲ್ರೀ, ಅವರ ದೋಷಾಂಶಗಳನ್ನಷ್ಟೇ ನೀವು ಅನುಕರಣಮಾಡ ಹೇಳುತ್ತೀರಲ್ಲ— ಎಂದು ಉತ್ತರಿಸಿದರೆ, ಶೇಷವನ್ನು ಕೋಪದಿಂದ ಪೂರಯಿಸಿ ಬಿಡುತ್ತಾರೆ. ಜಗತ್ತಿನಲ್ಲಿ ಸದಸತ್ ಶಕ್ತಿಗಳೆರಡೂ ಇವೆ. ಅವೆರಡರ ಘರ್ಷಣದಿಂದ ಜೀವನವೆಂಬುದು ಸಂಪೂರ್ಣ ಸತ್ತೂ ಅಲ್ಲ, ಅಸತ್ತೂ ಅಲ್ಲ ಎಂಬ ಮಾದರಿಯದಾಗಿದೆ. ಪಾಶ್ಚಾತ್ಯ ನಾಗರಿಕತೆ ನಮ್ಮದರಂತಿದ್ದರೆ ಹಾಗೆನಿಸುತ್ತಿತ್ತು. ಆದರೆ ಅಲ್ಲಿ ಅಸತ್ತಿನ ಅಂಶವೇ ಹೆಚ್ಚಾಗಿದೆ ಎಂಬುವದನ್ನು ಆಧುನಿಕರು ಗಮನಿಸುವರೆ?

ವಯಸ್ಕರ ವಿದ್ಯಾಭ್ಯಾಸ ಸಂಸ್ಥೆಯ ಕಾರ್ಯಾಧಿಕಾರಿಗಳಾದ ಡಾ. ಮೋರ್ಸೆ ಕಾರ್ಟ್‌ರೈಟರು ಕಣ್ಣಿವಿಗಳ ಮೂಲಕ ಕೊಡುವ ವಿದ್ಯೆಯ ಸಾಧನಗಳೆನಿಸಿದ ಸಿನೆಮಗಳ ಯೋಗ್ಯತಾನಿರ್ಣಯದ ಸಲುವಾಗಿ ಕೊಲಂಬಿಯ ವಿಶ್ವವಿದ್ಯಾನಿಲಯದ ಟೀಚರ್ಸ್ ಕಾಲೇಜಿನ ಅಂಗವಾಗಿ ಒಂದು ಪ್ರಯೋಗಶಾಲೆಯನ್ನು ತೆರೆದಿದ್ದಾರಂತೆ. ಇಂಥ ಯೋಗ್ಯತಾನಿರ್ಣಾಯಕ 'ಪ್ರಯೋಗ ಶಾಲೆಗಳನ್ನು ತೆರೆದರೆ ಯೋಗ್ಯಮಾರ್ಗದಲ್ಲಿ ಸಿನೆಮ ಕಲೆ ಸಾಗಲು ಅನುಕೂಲಮಾಡಿಕೊಟ್ಟಂತಾಗುವುದೆಂಬುದನ್ನು ಯಾರೂ ಅಲ್ಲಗಳೆಯಲಾರರು. ಈ ಸಂಸ್ಥೆ ಅಂತಾರಾಷ್ಟ್ರೀಯ ಸಂಗತಿಗಳು ಮತ್ತು ಮಾನವ್ಯ ಸಂಬಂಧಗಳು ಎಂಬ ಅಂಶಗಳನ್ನು ಮಾನದಂಡದ ಎರಡು ಮುಖಗಳನ್ನಾಗಿ ತೆಗೆದುಕೊಂಡಿದೆ.

ಎಲ್ಲ ವಯಸ್ಸಿನವರಿಗೂ ಆಗುವಂತೆ ಚರ್ಚಿನವರು ಬೈಬಲ್ಲಿನ ಕೆಲಸೂಕ್ತಗಳನ್ನು ಪರೋಕ್ಷದರ್ಶಕ ಖಂಡ ಚಿತ್ರಗಳಲ್ಲಿ (Television Fetures) ಪ್ರದರ್ಶಿಸುವ ವ್ಯವಸ್ಥೆಮಾಡಿದ್ದಾರೆ. ಇದು ನೀತಿವೇತ್ತರಿಗೆಲ್ಲ ಸಮಾಧಾನವನ್ನುಂಟುಮಾಡತಕ್ಕ ಸಮಾಚಾರ. ಸಾಮಾಜಿಕ ಜೀವನದಲ್ಲಿ ಸ್ನೇಹ, ದಯೆ, ಔದಾರ್ಯ ಮತ್ತು ಸಹಕಾರ ಬೆಳೆಯಬೇಕಾದರೆ ಕೆಲವಂಶ ಆಧ್ಯಾತ್ಮಿಕತೆ ಇರಬೇಕೆಂಬುದು ಶಾಸ್ತ್ರಸಿದ್ಧವಷ್ಟೇ ಅಲ್ಲದೆ ಅನುಭವಸಿದ್ಧವೂ ಆಗಿದೆ ಎಂಬುದನ್ನು ಒಪ್ಪದ ನಾಗರಿಕರಿರಲಾರರು.

೧೪ ವರ್ಷ ವಯಸ್ಸಿನ ಕೆಳಗಿನವರಿಗೆ ಬೇರೆ, ಅದರ ಮೇಲಿನ ಪ್ರಾಯದವರಿಗೆ ಬೇರೆ, ಮಧ್ಯವಯಸ್ಸಿನವರಿಗೆ ಬೇರೆ, ವೃದ್ಧರಿಗೆ ಬೇರೆ, ಉದ್ಯಮಿಗಳಿಗೆ ಬೇರೆ, ಒಕ್ಕಲಿಗರಿಗೆ ಬೇರೆ (ಆದರೆ ಸ್ತ್ರೀಯರಿಗೆ ಬೇರೆ ಪುರುಷರಿಗೆ ಬೇರೆ ಎಂದಿಲ್ಲ- ಅದು ಮುಖ್ಯವಾಗಿ ಇರಬೇಕಾದದ್ದು. ಏಕೆಂದರೆ ಹಿಂದಿನ ಮತ್ತು ಈಗಿರುವ ಸಿನೆಮ ಮುಂತಾದ ಸರ್ವಕಲೆಗಳೂ ಪುರುಷರ ಆಸ್ವಾದಕ್ಕಾಗಿವೆ,ಪುರುಷಾಭಿರುಚಿ ನಿರ್ದಿಷ್ಟವಾದವಿವೆ.) ಎಂಬುದಾಗಿ ಶೈಕ್ಷಣಿಕ ಚಿತ್ರಗಳು ಬಗೆಬಗೆಯಿಂದ ಲೋಕಶಿಕ್ಷಣಕ್ಕೆ ನೆರವಾಗುತ್ತಿವೆ ಎಂದರೆ ಯಾರಿದನ್ನು ಪ್ರಗತಿಪರವಲ್ಲವೆಂಬಾರು?

ಆದರೆ ಸೋವಿಯತ್ ಪಾಶ್ಚಾತ್ಯರ ಹುಡುಕಿಂಬ ಸ್ಪರ್ಧಾನೀ ಪ್ರಯೋಗಶಾಲೆಯಲ್ಲಿ ಹೊಸ ಹೊಸ ಪ್ರಯೋಗಗಳಾಗುವಂತೆ ಪ್ರೇರಿಸುವ ತರುಣಾಕರ್ಷಕ ಚಿತ್ರಗಳೂ ಅಸಂಖ್ಯವಾಗಿ ತಯಾರಾಗುತ್ತಿವೆ ಎಂದರೆ ಪಾಶ್ಚಾತ್ಯಪ್ರಿಯರು ಸುಳ್ಳೆನ್ನಲು ಧೈರ್ಯಮಾಡಬಹುದೆ? 'ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ, ಎಂಬ ಗಾದೆ ಅವರಿಗೆ ಅಪರಿಚಿತವಿರಲಿಕ್ಕಿಲ್ಲ. ಹಾಲಿವುಡ್ಡಿನ ಕ್ವಾಲಿಟಿ ಪಿಕ್ಚರ್ಸ್ ಕಂಪನಿಯ ಅಶ್ಲೀಲ ಭಾಂಡಾಗಾರದಲ್ಲಿಯ ಚಿತ್ರಮುಕ್ತಾಫಲಗಳ ಹೆಸರನ್ನು ಅವರು ಕೇಳಬಲ್ಲರೆ? ಇಕೋ— Midnight Follies— ನಟ್ಟಿರುಳ ಅಪರಾಧಗಳು, Variety Girls– ವೈವಿಧ್ಯದ ಹುಡುಗಿಯರು, Sweet hearts o' Burlesque— ಪ್ರಹಸನದ ಪ್ರಿಯತಮೆಯರು Night Club Girls ಇರುಳ್ಕೂಟದ ಹುಡುಗಿಯರು, Dancing Dolls of Burlesque— ಪ್ರಹಸನದ ನರ್ತನ ಪುತ್ಥಳಿಗಳು ಎಂಬ ಚಿತ್ರಗಳನ್ನು ಕಣ್ಣು ಕಾಣುವ ಹುಡುಗರ ತಲೆಯ ಸಂಸ್ಕಾರ ಏಳು ಜನ್ಮಗಳ ತಪಃಪುಣ್ಯದ ಫಲವಿದ್ದರೂ ನಿಮಿಷಾರ್ಧದಲ್ಲಿ ನಾಶ ಹೊಂದದಿದ್ದೀತೆ? ಅವರ ಆರೋಗ್ಯ, ನೀತಿ, ಸದಾಚಾರ, ಸದ್ಭಾವನೆಗಳನ್ನು ಬೆಳೆಸಲು ವರ್ಷಗಟ್ಟಲೆಯಲ್ಲಿ ಮಾಡಿದ ಶೈಕ್ಷಣಿಕ ಪ್ರಯೋಗಗಳೆಲ್ಲ ಮೇಲಿನ ಒಂದೇ ಒಂದು ಚಿತ್ರದ ಉಪಸ್ಮಾತ್ರದ ಈಕ್ಷಣದಿಂದ ನಾಮಶೇಷವಾಗುವುದರಲ್ಲಿ ಸಂಶಯವಿದೆಯೆ? ಇಲಿಯನ್ನು ಒಳಗಿಟ್ಟು ಬೀಲಹೊಲಿದಂತೆ ಇಂಥ ಅಪ್ರೇಕ್ಷಣೀಯ ಚಿತ್ರಗಳನ್ನು ಶುಕ್ಲಪಕ್ಷದ ಚಂದ್ರನಂತೆ ವರ್ಧಿಸಲು ಒಂದೆಡೆ ಅವಕಾಶ ಕೊಡುತ್ತಿರುವುದು, ಮತ್ತೊಂದೆಡೆ ಬಹಳ ಪವಿತ್ರ ಕಾರ್ಯವನ್ನು ಮಾಡುತ್ತೇವೆಂದು ಉಚ್ಚಾದರ್ಶಗಳನ್ನು ಉದಾಸೀನ ಪ್ರೇಕ್ಷಕರೆಮರು ಇಟ್ಟು, ಕರ್ತವ್ಯ ಮಾಡಿ ಬಿಟ್ಟೆವೆಂದು ಬೆನ್ನು ಚಪ್ಪರಿಸಿಕೊಳ್ಳುವುದು– ಇದರಿಂದ ಎಲ್ಲ ಬಣ್ಣ ಮಸಿ ನುಂಗಿತು ಎಂಬ ಸತ್ಯದ ಸಾಕ್ಷಾತ್ಕಾರವಾಗದಿದ್ದೀತೇ? ರಾಜವೈದ್ಯನಿಂದ ತಂದ ಭೂಪತಿ ಮಾತ್ರೆಯನ್ನು ಸೇವಿಸುತ್ತಿರುವುದು ಮತ್ತು ಅದೇ ವೇಳೆಗೆ ಹಂದಿಯ ಮಾಂಸವನ್ನು ಯಥೇಚ್ಛ ತಿನ್ನುವುದು! ಹೀಗಾಗಲಿಲ್ಲವೇ ಅಮೇರಿಕನ್ನರ ಶಿಕ್ಷಣ ಕ್ರಮ, ಅಲ್ಲಿಯ ಸಿನೆಮದ ಸಮಾಜಸೇವೆ? ವೇದ ಓದಿಸುತ್ತಿರುವ ಕಾಲದಲ್ಲೇ ಮಾಘ ಓದಿಸಿದರೆ ಯಾವುದರ ಪರಿಣಾಮ ಬ್ರಹ್ಮಚಾರಿಯ ಮೇಲೆ ಹೆಚ್ಚಾದೀತು?

ಶ್ರವಣದರ್ಶನಗಳಲ್ಲಿ" ನಿತ್ಯದ ಸಾರ್ವಜನಿಕ ಜೀವನದಲ್ಲಿ ಯಾವುವು ಅನಾಗರಿಕವೆನಿಸುವುವೋ ಅಂಥವನ್ನು ಕಲೆಯಲ್ಲಿ ಕೇಳಲು ಮತ್ತು ನೋಡಲು ಅವಕಾಶ ಕೊಟ್ಟರೆ ಮಾನವನ ಮನಸ್ಸು ವಂಚಕತೆ ಡಾಂಭಿಕತೆಗಳತ್ತ ಹರಿಯದೆ ಮತ್ತೇನಾದೀತು? ಭೂಲೋಕದಲ್ಲಿ ಸೂಳೆಗಾರಿಕೆ ನಿಂದ್ಯವಿರುವಾಗ ಸ್ವರ್ಗದಲ್ಲಿ ರಂಭೆ, ಊರ್ವಶಿ, ಮೇನಕೆ, ತಿಲೋತ್ತಮೆಯರೊಡನೆ ಬಾಳುವುದು ಯೋಗ್ಯವೆಂದರೆ ಯಾವ ಮನುಷ್ಯನು ಲೋಕದ ನೀತಿಯನ್ನು ಪ್ರಾಮಾಣಿಕತೆಯಿಂದ ಅನುಸರಿಸಿಯಾನು ?

— ಸಮಾಜಸೇವಕ

ಆಮ್ಲಚಿತ್ರವಾದ 'ಗಾನ್ ವಿತ್ ದಿ ವಿಂಡ್' ನ ದಿಗ್ದರ್ಶಕ ವಿಕ್ಟರ್ ಫ್ಲೆಮಿಂಗನು ಕಳೆದ ಜನವರಿ ೬ ರಲ್ಲಿ ಸ್ವರ್ಗಸ್ಥನಾದನು.

ಮಹಿಳಾ ಲೋಕ

ಹೊಸ ವಿಚಾರ

[illegible] ಮದುವೆಯಾಗುವ ಕವಿಮಯ [illegible] ಈ ಪದಿಗೆ ತನ್ನ ದೃಷ್ಟಿ [illegible] ಪುರುಷರಿಗೆ ಉಚಿತ [illegible]

ಹೆಂಗಸರು ಭಾವನಾಪ್ರಧಾನರೆಂದು ಗಂಡಸರು ಹೇಳುವರೆ ಅದಕ್ಕೆ ಹೆಮ್ಮೆಪಟ್ಟುಕೊಳ್ಳುವುದನ್ನು ನಾವು ಮೊದಲು ಬಿಟ್ಟುಬಿಡಬೇಕು. [illegible] ಬುದ್ಧಿಪ್ರಧಾನರಾದ ಗಂಡಸರನ್ನು [illegible] ಮೇಲೆಗೆ ನಾವು ಅನುಸರಿಸುವುದಲ್ಲದೆ, ನಮ್ಮ [illegible] ಬುದ್ಧಿಪ್ರಧಾನರಾದ ಹೆಂಗಸರನ್ನು ಮಾತ್ರ ಗೌರವಿಸುವ ರೂಢಿಯನ್ನು ಬೆಳೆಸಬೇಕು. ಈ ಮಹುರ್ಗವನ್ನು ತಿಳಿದ ಹೆಂಗಸರು ದುರ್ಲಭರಾಗಿರುವುದೇ ನಮ್ಮ ಕಲ್ಪಿತ ದಾಸ್ಯದ ಕಾರಣ.

ಹುಸ್ಸು ಹಂಬಲು

ಒಬ್ಬ ಗಂಡಸಿಗೆ ಕುಟುಂಬಭರಣ ಶಕ್ತಿಯಿದ್ದರೆ ಅವನು ಮದುವೆಯಾಗ ಹೊರಟಾಗ ತನಗೆ ಪ್ರೀತಿಕರವೂ ಅನುಕೂಲವಾಗಬೇಕೆಂಬ ಒಂದೇ ಒಂದು ದೃಷ್ಟಿಯಿಂದ ಲಕ್ಷಣವತಿಯನ್ನೂ ಸಾತ್ವಿಕ ಸ್ವಭಾವದವಳನ್ನೂ ಆರಿಸುತ್ತಾನೆ. ಹೆಂಡತಿ ತನಗೆ ಗಂಡನ ಸಮಾನ ಪಾಲ್ಗೊಂಡು ದುಡಿದು ತಾರಬೇಕು, ಬುದ್ಧಿವಂತಳಿರಬೇಕು ಎಂಬ ಯಾವುದನ್ನೂ ಅವನು ಗಣಿಸುವದಿಲ್ಲ. ಅವಳು ಕೇವಲ ಸಾಧಾರಣ ಪ್ರಿಯ ದರ್ಶನೆಯೂ ಪ್ರಿಯಂವದೆಯೂ ಮನೆಗೆಲಸ ನಿರ್ವಹಿಸುವ ಶಕ್ತಿಯುಳ್ಳವಳೂ ಆಗಿದ್ದರೆ ಸಾಕೆನ್ನುತ್ತಾನೆ. ಹೆಂಡತಿಯಾಗುವ ಹುಡುಗಿ ಗಾದರೂ ತಾನು ಗಂಡನ ಅಪೇಕ್ಷೆಗಳಿಗೆ ತಕ್ಕವಳಾದರೆ ತಾನು ಸಕಲಗುಣಸಂಪನ್ನೆ ಎಂದು ತಿಳಿದುಕೊಳ್ಳುತ್ತಾಳೆ. ಅವಳಿಗೆ "ಸಮಾನ ಶೀಲ ವ್ಯಸನೇಷು ಸಖ್ಯಂ" ಎಂಬುದು ಹೊಳೆಯದು. ಗಂಡನು ಗೆಳೆಯನಂತಿರಬೇಕಾದರೆ, ತನಗೆ ಸಮತ್ವವನ್ನು ಕೊಡಬೇಕಾದರೆ ಅವನ ಶಾರೀರಿಕ ಮತ್ತು ಬೌದ್ಧಿಕ ಮಟ್ಟಗಳಿಗೆ ತಾನು ಹತ್ತಿರವಿರಬೇಕು ಎಂಬ ಅರಿವನ್ನು [illegible] ಕೇವಲ ತಾನು ಸೌಂದರ್ಯಪ್ರದ [illegible], ವಾಮಮಾರ್ಗದ ರಸಿಕತೆ [illegible] ಇಲ್ಲವೆ ದಾಸೀ ವೃತ್ತಿಯಿಂದಲೇ ಒಲಿಸಿಕೊಂಡು ಗಂಡನನ್ನು ತನ್ನ ಸಖ್ಯಕ್ಕೆ ಅವಿರೋಧವಾಗಿ ನಡೆಸಿಕೊಳ್ಳುವಂತೆ ಮಾಡಬೇಕೆಂಬ ಹುಚ್ಚು ಹಂಬಲೇ ತಲೆತಲಾಂತರದಿಂದ ನಡೆದುಕೊಂಡು ಬಂದಿದೆ. ಈ [illegible] ಅಯುಕ್ತವೂ ಅದ [illegible] ಬಿಡುವುದು ಸ್ವಾತಂತ್ರ್ಯಕರಲ್ಲಿಯ [illegible] ಸ್ವತಂತ್ರ ಜೀವಿಗಳಾದ ಹೆಂಗಸರಿಗೂ [illegible].

ವ್ಯವಹಾರ ನೀತಿ

[illegible] ಶಿಕ್ಷಿತ, ಸ್ವತಂತ್ರರಾಗಿ ಜೀವಿಸುವ [illegible] ಕಲಿತ ಅಥವಾ ಸಾಗರಿಕ [illegible] ಗಂಡಸರನ್ನು ಅವರ ರೂಪದಿಂದ [illegible] ಇಲ್ಲವಾದರೆ ಮೇಲಿನ [illegible] ಹಾಗೆ ಇಲ್ಲದಾಗಲು [illegible] ಸಿದ ಕೆಲಸ ಗಂಡಸರು ಎಂಬ [illegible]

ಸಂಯುಕ್ತ ಕಂಪೆನಿಯಂತೆ. ಗಂಡಹೆಂಡಿರಾಗುವವರು ಅವರವರ ಅನುಕೂಲತೆಗಳನ್ನು ಹೊಂದಿಕೊಳ್ಳುವ ದೃಷ್ಟಿಯಿಂದ, ಆ ವಿಚಾರ ಮಾಡಿ ಒಪ್ಪಂದ ಮಾಡಿಕೊಂಡೇ ಮದುವೆಯಾಗುವುದು ನಾಗರಿಕ ಪದ್ಧತಿ. ಸ್ವಕಲ್ಪಿತ ಗುಣಗಳನ್ನು ಮದುವೆಯಾದ ಬಳಿಕ ಪರಸ್ಪರರಲ್ಲಿ ಕಾಣುವಾಗಲು ನಿರಾಶರಾಗುವುದು ಬುದ್ಧಿಯುಳ್ಳ ಮನುಷ್ಯಜೀವಿಗಳಿಗೆ ತಕ್ಕದ್ದಲ್ಲ. ಸದ್ಯದ ಸಾಮಾಜಿಕ ಪರಿಸ್ಥಿತಿಯಲ್ಲಿ ಪ್ರಮುಖ ಜನಾಸೂತ್ರದನ್ವಯವಾಗಿ ಅವರವರ ಶಾರೀರಿಕ ಮತ್ತು ಮಾನಸಿಕ ಶಕ್ತಿ, ಅರ್ಹತೆಗಳ ಹೊರಲಕ್ಷ್ಯದ ದೃಷ್ಟಿಯಿಂದ ಸ್ಪಷ್ಟ ಮಾತುಕತೆಯನ್ನು ವಧೂವರರು (ಸಿನೆಮ ಸಾಹಿತ್ಯಗಳ ಅಸಹಜ, ಅಸಾಧ್ಯ, ಗಾಳಿಗೋಪುರ, ಸ್ವರ್ಗ ಸೀಮೆಗಳ ವಿಹಾರದಿಂದ ಉನ್ಮತ್ತರಾಗದೆ) ವ್ಯಾವಹಾರಿಕ ಅನುಕೂಲದ ದೃಷ್ಟಿಯಿಂದ ಅಡಿ ಮುಗಿಸಿಕೊಂಡ ಹೊರತು ನಮ್ಮ ಕುರುಡು ಅತೃಪ್ತಿಗೆ ಶಾಂತಿ ಸಿಗದು. ನಾಚಿಗೆ, ಅಭಿಮಾನ, ಆಭಾಸಿಕ, ನಾಗರಿಕತೆ, ಅಂಜಿಕೆ ಮುಂತಾದ ಅಪ್ರಬುದ್ಧವೂ ಅತೃಪ್ತಿಕರವೂ ಆದ ನಡೆನುಡಿಗಳನ್ನು ನಂಬುವ, ನಂಬಿ ಅದರಂತೆ ಆಚರಿಸುವ ಹಟ ತೊಡುವವರು ಎಂದೆಂದೂ ವ್ಯವಹಾರ ಪ್ರಪಂಚದಲ್ಲಿ ಈ 'ಸ್ವಾತಂತ್ರ್ಯ'ವನ್ನು ಪಡೆಯಲಾರರು. ಕಲಿತ, ಸ್ವತಂತ್ರ ಉದ್ಯೋಗಿಗಳಾದ ಹೆಂಗಸರು ಗಂಡಂದಿರ ಹೊಟ್ಟೆಯನ್ನು ಹೊರೆಯುವ ಬುದ್ಧಿಯನ್ನು ತಾಳಿದರೆ ಅವರ ಸರ್ವ ಅತೃಪ್ತಿಗಳೂ ನಾಶವಾಗುತ್ತವೆ. ಕಡೆಯದಾಗಿ ಹೇಳುವುದಾದರೆ, ಯಾವ ಕಾಯದೆ ಕಟ್ಟಳೆ ಅಥವಾ ಸಂರಕ್ಷಣೆ ಮತ್ತು ಹಕ್ಕುಗಳೂ ಸದ್ಬುದ್ಧಿ ಇಲ್ಲದ ಸ್ತ್ರೀಯರಿಗೆ ಸ್ವಾತಂತ್ರ್ಯವನ್ನಾಗಲಿ, ಪ್ರೀತಿ ಸಂತುಷ್ಟಿಗಳನ್ನಾಗಲಿ ಕೊಡಲಾರವು.

"ಬುದ್ಧಿರ್ಯಸ್ಯ ಬಲಂ ತಸ್ಯ
ನಿರ್ಬುದ್ಧೇಸ್ತು ಕುತೋ ಬಲಂ?"

—ಹಿರಿಯಕ್ಕ

ಮಹಿಳೆಯರ ಮನೋಗತಿ

(ಫೆ. ೧೮ ರ ಸುಭದ್ರೆಯ 'ಕರುಣಾಪಾತ್ರತೆ'ಗೆ ಉತ್ತರ)

೧. ಜ್ಞಾನಿಗಳ ವಿಧಾನಗಳೇ ಸುಳ್ಳೆನ್ನಬೇಕೇ? ಅಥವಾ ಜ್ಞಾನಿಗಳೇ ಸುಳ್ಳಾಡುತ್ತಾರೆನ್ನಬೇಕೆ? ಅವರು ಹೆಣ್ಣನ್ನು ಹೊಗಳಿದ್ದು ಸುಳ್ಳಾಗುವುದೆಂತು?

೨. ಹೆಣ್ಣಿನ ಮೂಲಭೂತ ಗುಣಗಳನ್ನು ಬಹಳವಾಗಿ ಹೊಗಳಿದ ಮಾತ್ರಕ್ಕೇ ಗಂಡಸರನ್ನು ತೆಗಳಿದಂತಾಯಿತೇ? ಹೆಣ್ಣಿನ ಜೀವನ ಕುರಿತು ಬಗೆಯುವಾಗ ಗಂಡಸರ ಉಪಕಾರ, ಮೇಧಾವಿತ್ವ, ಸಹಾನುಭೂತಿಗಳನ್ನೇಕೆ ವರ್ಣಿಸಬೇಕೋ ನನಗೆ ತಿಳಿಯದು.

೩. ಹೆಂಗಸರ ಬಗೆಗೆ ನನಗಾವ ದುರಹಂಕಾರವೂ ಇಲ್ಲ. ಗಂಡಸರ ಬಗೆಗೆ ನನಗಾವ ಛಲವೂ ಇಲ್ಲ. ಛಲವೊಂದೇ ಬಲವಲ್ಲ. ಸದ್ಗುಣವೊಂದೇ ಬಲ, ಸುಹೃದಯವೊಂದೇ ಬಲ, ಆತ್ಮಶಕ್ತಿಯೊಂದೇ ಬಲ. ಉಳಿದ ಬಲಗಳೇತರ ಬಲಗಳು?

೪. ದೈವಾಯತ್ತ ದಿವ್ಯ ಪ್ರತಿಭೆಗೆ ಗಂಡು ಹೆಣ್ಣೆಂಬ ಭೇದವಿಲ್ಲ. ಅದಕ್ಕೆ ಪೂಜೆ ಸಲ್ಲಲೇಬೇಕು. ಮಹಾಕವಿಗಳ ದೃಷ್ಟಿ ಎಲ್ಲವನ್ನೂ ಸರಿಸಮವಾಗಿ ತೂಗುವುದು.

೫. ಹೆಣ್ಣು ಸಮಾಜವನ್ನು ನೋಡುವ ದೃಷ್ಟಿಯೇ ಬೇರೆಯಾಗಿದೆ. ಆ ದೃಷ್ಟಿಯೆಂಥದೆಂಬುದನ್ನು ನಾವಿಂದು ಅರಿಯಬೇಕಾಗಿದೆ; ಬೇರೆಯವರಿಗೆ ಅರುಹಬೇಕಾಗಿದೆ. ತನ್ನ ಜೀವನದ ಬಗೆಗೆ ಅವಳಿಗೆ ನಿಕಟ ಸಂಬಂಧ ಇರುವುದರಿಂದ ಹೆಣ್ಣು ಹೃದಯವನ್ನು ಅವಳು ಎಳೆ ಎಳೆಯಾಗಿ ತಿಳಿದುಕೊಳ್ಳಬಲ್ಲಳು. ಇದರರ್ಥ ಗಂಡಸರೂ ಅಷ್ಟೇ ಚೆನ್ನಾಗಿ ತಿಳಿದುಕೊಳ್ಳಲಾರರು ಎಂಬುದಲ್ಲ.

೬. ಒಬ್ಬೊಬ್ಬರು ಒಂದೊಂದು ವಿಧವಾಗಿ ಸಮಾಜವನ್ನು ನೋಡುವರು. ಹೆಂಗಸರೇನು? ಗಂಡಸರೇನು? ಮಾನವನೆಂದ ಮೇಲೆ ಅವನ (ಳ)ಲ್ಲಿ ಅಸೂಯೆ ಹಾಗೂ ದ್ವೇಷ ಗುಣಗಳ ಆಗರವಿರಲೇಬೇಕು. ಹೆಂಗಸರು ಒಳ್ಳೆಯವರಿದ್ದಂತೆ ಕೆಟ್ಟವರೂ ಆಗಿರುವರು. ಅದಕ್ಕೇ "ಒಲಿದರೆ ನಾರಿ ಮುನಿದರೆ ಮಾರಿ" ಎನ್ನುವ [illegible]

[illegible]

ಪತ್ರಕ್ಕೆ ಉತ್ತರ

[illegible] ಕರ ಮೂಲಕ ನನಗೆ ದೊರಕಿತು. ಅದನ್ನೋದಿದ ನಂತರ 'ಜಯಂತಿ'ಯಲ್ಲಿ ನೀವು ಬರೆದ ಆ ಪತ್ರದಲ್ಲೇ ಉತ್ತರದ ಅಂಶವನ್ನು ಸಂಕ್ಷೇಪಿಸಿ ಸೇರಿಸಿದ್ದರೆ ಇಂಥ ಸಮಸ್ಯೆ ಉದ್ಭವಿಸುತ್ತಲೇ ಇಲ್ಲ, ಎಂದು ಹೇಳಬೇಕೆನಿಸಿತು. ಅದರೂ ಮೇಲಿನ ಆವರ ಕೆಲವು ಮಾತುಗಳು ಭಾವನಾಜೀವಿಗಳಿಗೆ ತಕ್ಕವೆ ಸಮಂಜಸವೆಂದು ತೋರಬಹುದಲ್ಲದೆ, ಬುದ್ಧಿಜೀವಿಗಳಿಗಲ್ಲ ಎಂಬ ಅಂಶವನ್ನು ಈ ಕೆಳಗೆ ತೋರಿಸಿಕೊಡುವುದು ಮಹಿಳಾಸೇವೆಗಾಗಿ ನಾನು ಮಾಡಬೇಕಾದ ಅದ್ಯಕರ್ತವ್ಯವೆಂದು ತಿಳಿದಿದ್ದೇನೆ:

೧. ಗುರು ಶಿಷ್ಯಳಿಗೆ ಪ್ರಶಸ್ತಿ ಕೊಟ್ಟಾಕ್ಷಣ ಗುರುವಿಗಿಂತ ಶಿಷ್ಯಳು ಶ್ರೇಷ್ಠಳಾಗಿಬಿಟ್ಟಳೆ? ಜ್ಞಾನಿಗಳ ಉದಾರವಾಣಿಯಿಂದ ಮಾತ್ರ ಹೆಂಗಸು ಶ್ರೇಷ್ಠಳಾಗುವಂತಿದ್ದರೆ ಅವಳಿಗೆ ಶಿಕ್ಷಣದ ಅಗತ್ಯವೇನು? ಅವರ ಮಾತು ಅಕ್ಷರಶಃ ನಿಜವೇ ಆಗಿದ್ದರೆ ಹೆಣ್ಣಿನ ಗತಿ ಕೆಟ್ಟದೆಯೆಂದು ನಮ್ಮ ಸೋದರಿಯಂಥವರು ತಿಳಿದುಕೊಳ್ಳುವ ಪರಿಸ್ಥಿತಿ ಬರುತ್ತಿತ್ತೆ? ಔದಾರ್ಯದ ಮಾತುಗಳಲ್ಲಿ ಅತಿಶಯೋಕ್ತಿಯ ಅಸತ್ಯಾಂಶ ಇಲ್ಲವೆಂದು ಯಾವ ಜ್ಞಾನಿ ನಮ್ಮ ಸೋದರಿಗಾಗಿ ಬರೆದಿಟ್ಟಿದ್ದಾನೆ?

೨. ಭಿನ್ನವಸ್ತುಗಳು ಎರಡಕ್ಕಿಂತ ಹೆಚ್ಚಿದ್ದಾಗ ಅವುಗಳಲ್ಲಿ ಒಂದರ ಬಗ್ಗೆ ಏನು ಹೇಳಿದರೂ ಇನ್ನೊಂದಕ್ಕೆ ಅದು ತಾಗುವುದಿಲ್ಲ. ಅವು ಎರಡೇ ಇದ್ದಾಗ ಒಂದರ ಬಗ್ಗೆ ವಿಶೇಷ ಒತ್ತಿ ಹೇಳಿದರೆ ಇನ್ನೊಂದಕ್ಕೆ ತದ್ವಿರುದ್ಧವಾದ ಅರ್ಥ ಉಂಟಾಗುವುದು ಸ್ವಾಭಾವಿಕವಲ್ಲವೆ?

೩. ಮೇಲಿನ ಪತ್ರದ ೫ ನೆಯ ಭಾಗದಲ್ಲಿ ಹೆಣ್ಣು ಸಮಾಜವನ್ನು ನೋಡುವ ದೃಷ್ಟಿಯೇ ಬೇರೆಂದೂ ಅದನ್ನಿನ್ನೂ ತಮ್ಮ ವರ್ಗದವರು ತಿಳಿದುಕೊಂಡಿಲ್ಲವೆಂದೂ ಹೇಳಿ ಕೊನೆಯಲ್ಲಿ ಗಂಡಸರೂ ಹೆಂಗಸಿನಷ್ಟೇ ಚೆನ್ನಾಗಿ ತಿಳಿದುಕೊಳ್ಳಬಲ್ಲರು ಎಂದಿರುವುದು ಎಷ್ಟು ಸೀಗೆಗಳನ್ನು ಒಟ್ಟಿಗಿಟ್ಟಷ್ಟು ಸುಸಂಬದ್ಧವಾಗಿವೆ. ಇನ್ನೂ ಬೇಕಾದರೆ ಅದರ ೬ ನೆಯ ಭಾಗವನ್ನು ತೆಗೆದುಕೊಳ್ಳಬಹುದು. ಅಲ್ಲಿ ಪತ್ರಕರ್ತೆಯವರು ಆ ಭೇದವನ್ನು ಉಲ್ಲೇಖಿಸಿರುವುದು ಹೆಂಗಸಿನ ದೃಷ್ಟಿ ಬೇರೆಂಬುದಕ್ಕೆ ಹೇಗೆ ಹೊಂದುತ್ತದೆ? ೬ ನೆಯ ಭಾಗದಲ್ಲೂ ದೃಷ್ಟಿಭೇದವು ವ್ಯಕ್ತಿನಿಷ್ಠವಲ್ಲದೆ ಲಿಂಗನಿಷ್ಠವಲ್ಲ

ಗಂಡಸು ಹೆಂಗಸು ಎಂದರೆ ಸಮಾಜದ ಎರಡು ಕಣ್ಣುಗಳು; ಏಕಾಕ್ಷಿಗೆ ಜಗತ್ತು ಎಂದೂ ಚೆನ್ನಾಗಿ ಕಾಣಿಸದು. ಎರಡು ಕಣ್ಣುಗಳೇ ಚೆನ್ನಾಗಿ ಚಿತ್ರವನ್ನು ಗ್ರಹಿಸಬಲ್ಲವು. ಹೊರಗಣ್ಣುಗಳಿಗೆ ಮೂಗೊಂದೇ ಅಂತರವಿದ್ದರೆ, ಒಳಗಣ್ಣಿಗೆ ಆ ಅಂತರವಿಲ್ಲ. ಹಾಗೆಯೇ ಹೆಣ್ಣು ಗಂಡುಗಳಲ್ಲಿ ಯಾವ ಅಂತರವೂ ಇಲ್ಲ. ಒಬ್ಬರ ಸಮಸ್ಯೆಗಳು ಒಬ್ಬರಿಂದ ಬೇರೆ ಇವೆ ಎಂದು ಎಂದಿಗೂ ಹೇಳಲಿಕ್ಕೆ ಬಾರದು.

೪. ಗಂಡಸು ಎಂದೆಂದಿಗೂ ಬುದ್ಧಿಜೀವಿ, ಹೆಣ್ಣು ಭಾವನಾಜೀವಿ.

(ಶ್ರೀಮತಿ ಜಾ. ನ ಇಂದಿರಾ, ವಿಜಾಪುರ ಇವರ ಪತ್ರದ ಸಾರ)

ಎಂದಿರುವುದು ಅವರ ಮಾತಿನ ಮೂಲಕ್ಕೇ ಕೊಡಲಿಯಂತಿದೆ.

೮. ಪತ್ರದ ೮ ನೆಯ ಭಾಗದಲ್ಲಿ ಗಂಡಸು ಎಂದೆಂದಿಗೂ ಬುದ್ಧಿಜೀವಿ, ಹೆಣ್ಣು ಭಾವನಾಜೀವಿ [illegible] ಕಲಿತು [illegible]. ಅದು ನಿಜವೇ ಆದರೆ ಇಂಥ ಸಮಸ್ಯೆಗಳನ್ನು ಚರ್ಚಿಸುವ ಯೋಗ್ಯತೆ ಹೆಂಗಸಿಗೆಂದೂ ಬರಲಾರದು: "...ಬುದ್ಧಿಂತು ಸಾರಥಿಂ ವಿದ್ಧಿ" ಎಂದು ಭಗವದ್ಗೀತೆಯಲ್ಲಿ ಹೇಳಿದೆ. ಆ ಪ್ರಕಾರ ಬುದ್ಧಿವಂತರ ನೇತೃತ್ವದಲ್ಲಿ ಬುದ್ಧಿಹೀನರು ಸಾಗುವುದು ಸ್ವಾಭಾವಿಕವಿರುವುದರಿಂದ ಹೆಣ್ಣುಗಂಡಿನೊಡನೆ ಸಮಾನತೆಯನ್ನು ಕೇಳುವುದು ಹುಚ್ಚೆನಿಸುವುದು, ಕೇಳಿದರೂ ಅವನು ಕೊಟ್ಟರೂ ಅವಳಿಗದು ದಕ್ಕಲಾರದು.

ಮಹಾಕವಿಗಳೂ ಕವಯಿತ್ರಿಯರೂ ಚಿತ್ರಿಸಿರುವ ಸ್ತ್ರೀಪಾತ್ರಗಳು ಅವರ ಪುರುಷಪಾತ್ರಗಳಿಗೆ ಎಲ್ಲಿಯೂ ಸರ್ವತಃ ಸರಿಸಾಟಿಯಾಗಿಲ್ಲ. ಅವೆಂದೂ ತಂತಮ್ಮ ಪುರುಷರೊಡಗೆ ಸರ್ವ ಕಾರ್ಯಕ್ಷೇತ್ರಗಳಲ್ಲಿ ಸಮಾನ ಹಕ್ಕುಗಳನ್ನು ಕೇಳಿಲ್ಲ, ಸಮಾನವಾದ ನಡತೆಯನ್ನು ತೋರಿಲ್ಲ; ಸಮಾನರೆಂದು ಹೇಳಿಲ್ಲ. ಈ ಮೂಲಭೂತ ಅಂಶವನ್ನು ಬಹಳ ಜನ ಸೋದರಿಯರು ಅರಿತಿಲ್ಲ. ಬಾಧ್ಯತೆಯಲ್ಲಿ ಸರ್ವತ್ರ ಸಾಮ್ಯವಿದ್ದಲ್ಲದೆ ಹಕ್ಕಿನಲ್ಲಿ ಅದು ಸಿಗದು.

—ಸುಭದ್ರೆ

(೫ ನೇ ಪುಟದಿಂದ)

ಸಂರಕ್ಷಣ ಬೇಡಿಕೆ

ಸೋಮವಾರ ತಾ. ೭ ಕ್ಕೆ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭವಾಯಿತು. ಇದೇ ಮುಂಗಡ ಪತ್ರದ ಅತಿ ದೊಡ್ಡ ಬೇಡಿಕೆ (೧೫೫ ಕೋಟಿಗೂ ಹೆಚ್ಚು). ಇದನ್ನು ಮಂಡಿಸುತ್ತ ಸಂರಕ್ಷಣ ಮಂತ್ರಿ ಬಲದೇವಸಿಂಗರು ಸೈನ್ಯದ ಹಿಂದೀಕರಣ ಭರದಿಂದ ಸಾಗಿದೆ. ಈಗ ೨೦೦ ಕ್ಕಿಂತ ಕಡಿಮೆ ಬ್ರಿಟಿಶ ಅಧಿಕಾರಿಗಳು— ಅದೂ ಹೆಚ್ಚಾಗಿ ಸಲಹೆಗಾರರಾಗಿ— ಉಳಿದಿದ್ದಾರೆ. ವಿಮಾನದಲದಲ್ಲಿಯೂ ಹಿಂದೀಯರು ಮುಂದುವರಿದಿದ್ದು, ಕೇವಲ ೧೨ ಜನ ಅಧಿಕಾರಿಗಳೂ ತಾಂತ್ರಿಕ ಶಾಖೆಯಲ್ಲಿ ೧೪ ಜನರೂ ಮಾತ್ರ ಬ್ರಿಟಿಶರುಳಿದಿದ್ದಾರೆ. ನೌಕಾದಲದ ಹಿಂದೀಕರಣ ಮಾತ್ರ ನಾವಕಾಶವಾಗಿ ಆಗಬೇಕಾಗಿದೆ. ಇದಕ್ಕೆ ಪರರಾಷ್ಟ್ರಗಳ ನೆರವು ಬೇಕು, ಎಂದರು. ಶಸ್ತ್ರ ಬಲಗಳ ಶಿಕ್ಷಣದ ವ್ಯವಸ್ಥೆಗಳನ್ನೂ ಅವರು ವಿವರಿಸಿದರಲ್ಲದೆ, ಪಾಕಿಸ್ತಾನದವರು ೧೦೦ ಕ್ಕೆ ೬೫.೪ ರಷ್ಟು ಹಣವನ್ನು ಸಂರಕ್ಷಣೆಗಾಗಿ ವೆಚ್ಚ ಮಾಡುತಿರುವಾಗ ನಾವು ನೂರಕ್ಕೆ ೪೪.೬ ಮಾತ್ರ ತೆಗೆದಿಡುತಿದ್ದೇವೆಂದೂ ಅವರು ತಮ್ಮ ವೆಚ್ಚವನ್ನು ಸಮರ್ಥಿಸಿಕೊಂಡರು.

ಚರ್ಚೆಯಲ್ಲಿ ಬಂದ ಹಲ ಸೂಚನೆಗಳಲ್ಲಿ ಪಾಕಿಸ್ತಾನದೊಡನೆ ಅನಾಕ್ರಮಣ ಒಪ್ಪಂದ ಮತ್ತು ಸಂಯುಕ್ತ ಸಂರಕ್ಷಣ ವ್ಯವಸ್ಥೆ ಬೇಕೆಂಬವೂ ಇದ್ದವು. ಆದರೆ ಕಾಶ್ಮೀರದ ಬ್ಗಂಟಾದ ಮನಃಕಷಾಯ ದೂರವಾದಲ್ಲದೆ ಇದು ಸಾಧ್ಯವಿಲ್ಲೆಂದು ಮಂತ್ರಿಗಳು ಉತ್ತರವಿತ್ತರು.

ಕರ್ನಾಟಕ

ಧಾರವಾಡ

ಧಾರವಾಡ ಜಿಲ್ಲಾ ಗ್ರಾಮೋದ್ಧಾರ ಸಮಿತಿಯವರು ಸಾರ್ವಜನಿಕ ಕಾರ್ಯಕರ್ತರ ಲಘು ಶಿಕ್ಷಣ ಕೇಂದ್ರವನ್ನು ಇದೇ ೨೨ ನೇ ತಾರೀಕಿನಿಂದ ಹಂಸಭಾವಿಯಲ್ಲಿ ಪ್ರಾರಂಭಿಸಲಾಗುವದೆಂದು ನಿರ್ಧರಿಸಿದ್ದು ಈ ಸುಸಂಧಿಯ ಲಾಭವನ್ನು ಕಾರ್ಯಕರ್ತರೆಲ್ಲ ಪಡೆಯಬಲ್ಲರೆಂದು ಸಮಿತಿಯ ಕಾರ್ಯದರ್ಶಿಗಳು ಬಿನ್ನವಿಸಿಕೊಂಡಿದ್ದಾರೆ.

ನಿಡಗಿನಕೊಪ್ಪ (ಹಾನಗಲ್ಲ) ಬಾಳಂಬೀಡ (ಹಿರೇಕೆರೂರ) ಕ್ಯಾಲಕೊಂಡ (ಶಿಗ್ಗಾವಿ) ಹಾರೋಗೇರಿ (ಮುಂಡರಗಿ) ಇಬ್ರಾಹಿಮಪುರ (ನವಲಗುಂದ) ಖಾನಾಪುರ (ನರಗುಂದ) ಮಲ್ಲಸಮುದ್ರ (ಗದಗ) ಮುಳ್ಳಾಲ (ಕಲಘಟಗಿ) ಕಲ್ಲೇದೇವರ (ಹಾವೇರಿ) ಈ ಗ್ರಾಮಗಳನ್ನು ಆದರ್ಶ ಹಳ್ಳಿಗಳನ್ನು ರಚಿಸಬೇಕೆಂದು ಧಾರವಾಡ ಜಿಲ್ಲಾ ಗ್ರಾಮೋದ್ಧಾರ ಸಮಿತಿಯವರು ನಿರ್ಧರಿಸಿದ್ದಾರೆ. ಇದಕ್ಕಾಗಿ ಪ್ರತಿಹಳ್ಳಿಗೆ ೨೦೦ ರೂ. ಕೂಡಿಸಲಾಗುವದು. ಆಯಾ ಹಳ್ಳಿಯವರು ೫೦೦ ರೂ. ಕೊಡಬೇಕು ಮುಂತಾಗಿ ಪ್ರಕಟಿಸಲಾಗಿದೆ.

ಉತ್ತರ ಕನ್ನಡ

ಕಾರವಾರದ ಮಿತ್ರ ಸಮಾಜದಲ್ಲಿ ೫ ನೇ ತಾರೀಕು ಶ್ರೀ ತೆಲಂಗ ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಶ್ರೀ ಆರ್. ಎಸ್. ಪಡಬಿದ್ರಿಯವರ ಭಾಷಣವಾಯಿತು. ಜಿಲ್ಲೆಯ ಕೆಲ ಸಮಸ್ಯೆಗಳನ್ನು ಅವರು ವಿವರಿಸುತ್ತ ಟೆನನ್ಸಿ ಕಾಯಿದೆಯಿಂದ ಜಿಲ್ಲೆಗೆ ಲಾಭವಾಗಿರದೆ ರೈತ ಮತ್ತು ಭೂಮಿಯೊಡೆಯರಲ್ಲಿ ವೈಮನಸ್ಯ ಬೆಳೆದಿದೆಯೆಂಬ ಸಾರ್ವಜನಿಕರ ಅಭಿಪ್ರಾಯ ಉಲ್ಲೇಖಿಸಿ ಸರಕಾರದವರು ಜಿಲ್ಲೆಯ ಜೂರುಗಳನ್ನು ಪರಿಣಾಮಕರವಾಗಿ ಇಡಬೇಕೆಂದು ಅಭಿಪ್ರಾಯಪಟ್ಟರು.

ಕಸ್ತೂರಿಬಾ ಸಪ್ತಾಹದ ಕೊನೆಯ ದಿನದ ನಿಮಿತ್ತ ಕಾರವಾರ ಮಿತ್ರ ಸಮಾಜದಲ್ಲಿ ನೆರೆದ ಸ್ತ್ರೀ ಪುರುಷರನ್ನು ಉದ್ದೇಶಿಸಿ ಮಾತಾಡುತ್ತ ಗ್ರಾಮೋದ್ಧಾರ ಕಾರ್ಯಕರ್ತರಾದ ವಾಮನರಾವ ಹೊದಿಕೆಯವರು ಬಾ ನಿಧಿಯಿಂದಾಗುವ ಕಾರ್ಯ ವಿವರಿಸಿದರು.

ಉತ್ತರಕನ್ನಡ ಜಿಲ್ಲಾ ಲೋಕಲ್ ಬೋರ್ಡಿನ ೧೯೪೯-೫೦ ರ ಮುಂಗಡ ಪತ್ರಿಕೆ ಸಿದ್ಧವಾಗಿದೆ. ಅದರಲ್ಲಿ ಆದಾಯವು ೨೦೩೮೮೪೬ ರೂಪಾಯಿ ಎಂದು ಅಂದಾಜ ಮಾಡಲಾಗಿದೆ. ಇದರಲ್ಲಿ ಭೂಕಂದಾಯದ ಮೇಲೆ ಸರಕಾರದವರು ಕೊಡಲು ನಿರ್ಧರಿಸಿದ ೧೨೫೭೦೧ ರೂ. ಸೇರಿದೆ. ಹಳ್ಳಿಗಳಲ್ಲಿ ನೀರಿಗಾಗಿ ೩೦ ಸಾವಿರ ಮತ್ತು ಅಪ್ರೋಚರಸ್ತೆಗಳಿಗಾಗಿ ೪೦ ಸಾವಿರ ರೂ. ಮೀರಿಸಲಾಗಿದೆ.

ಕನ್ನಡ ಸಂಸ್ಥಾನ

ಭದ್ರಾವತಿ ಕಾರಖಾನೆಯ ವಿದ್ಯುಚ್ಛಕ್ತಿ ವಿಭಾಗದ ೧೦೦ ಕೆಲಸಗಾರರು ಸೀದಾ ಧಾನ್ಯಗಳನ್ನು ಸರಿಯಾಗಿ ಪೂರೈಸದ್ದರಿಂದ ೬ ನೇ ತಾರೀಕಿನಿಂದ ಸಂಪು ಹೂಡಿದ್ದಾರೆ.

ಮಿರಜೆಯಲ್ಲಿ ಎಪ್ರೀಲ ೧ ರಿಂದ ಅಂಗಡಿ ಗುಮಾಸ್ತೆಕಾಯ್ದೆಯನ್ನು ಅನ್ವಯಿಸಲು ನಿರ್ಣಯಿಸಿದ್ದನ್ನು ಅಲ್ಲಿಯ ಗುಮಾಸ್ತ ವರ್ಗವು ಹಾರ್ದಿಕವಾಗಿ ಸ್ವಾಗತಿಸಿರುವದು.

ಹೊಸ ಗ್ರಾಮಸುಧಾರಣಾ ಯೋಜನೆಯನ್ನು ಮೈಸೂರು ಸರಕಾರದವರು ಸಂಸ್ಥಾನದಲ್ಲೆಲ್ಲ ಮಾರ್ಚ ೬ ರಿಂದ ಏಕಕಾಲಕ್ಕೆ ಪ್ರಾರಂಭಿಸಿದರು. ಒಕ್ಕಲತನ ಮತ್ತು ಗೃಹ ಕೈಗಾರಿಕೆಗಳ ಮುಖಾಂತರ ಬಡತನವನ್ನು ನಿವಾರಿಸಿ ಗ್ರಾಮಾಂತರಗಳಲ್ಲಿರುವ ಜನತೆಯ ಜೀವನ ಮಟ್ಟವನ್ನು ಹೆಚ್ಚಿಸುವದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಹೊನ್ನಾಳಿ ತಾಲೂಕು ಮಲ್ಲಿಗೆ ಹಳ್ಳಿಯಲ್ಲಿ ಕಳ್ಳತನದಿಂದ ಶರೆಯ ಭಟ್ಟಿಯನ್ನು ಇಳಿಸುತಿದ್ದಾಗ ಅಕಸ್ಮಾತ್ತಾಗಿ ಬೆಂಕಿ ತಗಲಿ ೫೬ ಮನೆಗಳು ಸುಟ್ಟು ಬೂದಿಯಾದವು. ೯ ದನಗಳು ಸತ್ತವು. ೨೦೦ ಪಲ್ಲ ಆಹಾರ ಧಾನ್ಯ ೬೦ ಹುಲ್ಲಿನ ಬಣವೆ ಸುಟ್ಟುಹೋದವು. ಸುಮಾರು ಒಂದು ಲಕ್ಷ ರೂಪಾಯಿಗಳ ಹಾನಿಯಾಗಿದೆಯೆಂದು ತಿಳಿಯುತ್ತದೆ.

ಅನವಟ್ಟಿಯಲ್ಲಿ ಆಕಸ್ಮಿಕವಾಗಿ ಹತ್ತಿದ ಬೆಂಕಿಯಲ್ಲಿ ೪೫ ಮನೆಗಳು ಭಸ್ಮವಾಗಿವೆಯಲ್ಲದೆ ಮೂರು ವರುಷದ ಮಗುವೊಂದು ಸುಟ್ಟುಹೋಗಿದೆ. ಸಂತ್ರಸ್ತರಿಗೆ ಅಧಿಕಾರಿಗಳು ಪರಿಹಾರ ಕೊಡುತಿರುವರು.

ದ. ಕನ್ನಡ

೫ ನೇ ತಾರೀಕಿನ ದಿನ ಮಂಗಳೂರ ಪೌರ ಸಭಾ ಸಮಿತಿಯ ಸಭೆ ಸೇರಿ ಶ್ರೀಮತಿ ಸರೋಜಿನಿ ದೇವಿಯವರ ನಿಧನಕ್ಕಾಗಿ ದುಃಖ ಸೂಚಿಸುವ ಗೊತ್ತುವಳಿಯನ್ನು ಸಭಿಕರೆಲ್ಲರು, ಮೌನವಾಗಿ ನಿಂತು, ಮನ್ನಿಸಿ ಸ್ವೀಕರಿಸಲಾಯಿತು. ಬೆಸೆಂಟ ಬಾಲಿಕಾ ಪಾಠಶಾಲೆ ಮತ್ತು ಸರಕಾರೀ ಕಾಲೇಜಿನಲ್ಲಿಯೂ ದುಃಖಸೂಚಕ ಗೊತ್ತುವಳಿ ಸ್ವೀಕೃತವಾಯಿತು.

ಮಂಗಳೂರಿಗೆ ನೀರಿನ ಸರಬರಾಯಿ ಮಾಡುವ ಕೆಲಸವನ್ನು ಕೂಡಲೇ ಆರಂಭಿಸಬೇಕೆಂಬುದಕ್ಕಾಗಿ, ಮುನ್ಸಿಪಾಲಿಟಿಯ ಸ್ವಾಧೀನವಿರುವ ೨ ಲಕ್ಷ ರೂಪಾಯಿಗಳನ್ನು ಸರಕಾರದ ಸ್ವಾಧೀನವೀಯುವುದೆಂದೂ ನಗರ ಸಭೆಯಲ್ಲಿ ನಿರ್ಣಯಿಸಲಾಯಿತು.

ಮಂಗಳೂರಿನ ಸ್ವಾಮಿ ಈಶ್ವರಾನಂದ ವಿದ್ಯಾರ್ಥಿ ಸಾಹಿತ್ಯ ಸಂಘದ ವಾರ್ಷಿಕೋತ್ಸವವು ದಿನಾಂಕ ೨೬ ರಂದು ಸಂಜೆ ಇಲ್ಲಿನ ಸರಕಾರಿ ಕಾಲೇಜಿನ ಅಧ್ಯಾಪಕ ಶ್ರೀ. ಪಿ. ಎಸ್. ಶಿವಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿ ವರದಿ ವಾಚನ, ಬಹುಮಾನ ವಿತರಣ ಭಾಷಣಾದಿಗಳಾದುವು.

ಮಂಗಳೂರಿನ ಆರ್ಯ ಸಮಾಜದಲ್ಲಿ ದಿನಾಂಕ ೨೬ ರಂದು ಋಷಿಬೋಧೋತ್ಸವವೂ, ಶ್ರದ್ಧಾನಂದ ಅನಾಥಾಶ್ರಮದ ವಾರ್ಷಿಕೋತ್ಸವವೂ ಜರಗಿದವು. ಶ್ರೀ. ಎಂ. ಮಾಧವರಾಯರು ವೈದಿಕ ಧ್ವಜಾರೋಹಣ ಮಾಡಿದರು. ತರುವಾಯ ಆಶ್ರಮದ ಬಾಲಕರಿಂದ ವೇದಮಂತ್ರ ಘೋಷದೊಂದಿಗೆ ಬೃಹತ್ ಯಜ್ಞವಾಗಿ ಸ್ವಾಮಿ ಸದಾನಂದ ಸರಸ್ವತಿಯವರು ವೇದೋಪದೇಶ ಮಾಡಿದರು. ಬಳಿಕ ಶ್ರೀ ಎಂ. ಆರ್. ಭಟ್ಟರ ಅಧ್ಯಕ್ಷತೆಯಲ್ಲಿ ವಾರ್ಷಿಕೋತ್ಸವ ಕಾರ್ಯಕ್ರಮವಾರಂಭಿಸಿ, ವರದಿ, ವಾಚನ, ಭಾಷಣಾದಿಗಳಿಂದ ಕಾರ್ಯಕ್ರಮವು ಕೊನೆಗೊಂಡಿತು.

ಪುತ್ತೂರಿನ ಸಮೀಪದ ಕಾಪು ಎಂಬಲ್ಲಿನ ಹರಿಜನಕೇರಿಗೆ ಬೆಂಕಿ ಬಿದ್ದು ೫ ಮನೆಗಳು ಸುಟ್ಟುಹೋಗಿದ್ದು ಹರಿಜನ ಕುಟುಂಬಗಳು ಕಷ್ಟಕ್ಕೊಳಗಾಗಿದ್ದಾರೆ. ಕೊಡುಗೈಯ ದಾನಿಗಳು ಸಹಾಯ ಮಾಡುವರೆಂದು ಹಾರೈಸಲಾಗಿದೆ.

ಬಸ್ರೂರು ಹಿಂದೂ ಎಯ್ಡೆಡ್ ಹಾಯರ್ ಎಲಿಮೆಂಟರಿ ಶಾಲೆಗಳ ವರ್ಧಂತ್ಯುತ್ಸವವು ದಿನಾಂಕ ೨೮ ರಂದು ಡಾ|| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರುಗಿತು. ವರದಿ, ಸ್ವಸ್ತಿ ವಾಚನಗಳಾದ ಮೇಲೆ ಭಾಷಣ ವಿನೋದಗಳಾದುವು.

ಮಂಗಳೂರಿನ ತೆರಿಗೆದಾರರ ಸಭೆ ೨೮ ರಂದು ಸಂಜೆ ಶ್ರೀ. ಕೆ. ಆರ್. ಆಚಾರ್ ಅವರ ಅಧ್ಯಕ್ಷತೆಯಲ್ಲಿ ಜರಗಿ, ಮದ್ರಾಸು ಸರಕಾರದ ೪೮ ನೇ ಇಸವಿಯ ಆಜ್ಞೆಯಂತೆ ಮುನಿಸಿಪಾಲಿಟಿ ಕ್ಷೇತ್ರದೊಳಗಿನ ಖಾಲಿ ಸ್ಥಳಗಳಿಗೆ ತೆರಿಗೆ ಹೊರಿಸಿದ್ದನ್ನು ನಿಷೇಧಿಸಯುತಲ್ಲದೆ ಆ ಕುರಿತು ತೆರಿಗೆದಾರರಿಗಾದ ಅನ್ಯಾಯವನ್ನೂ ಸರಕಾರಕ್ಕೂ, ಮುನ್ಸಿಪಾಲಿಟಿಗೂ ಮನವಿಯ ಮೂಲಕ ತಿಳಿಸುವುದೆಂದೂ ನಿರ್ಣಯವಾಗಿ ತೆರಿಗೆದಾರ ಸಂಘದ ಕಾರ್ಯದರ್ಶಿಗೆ ಆ ಕುರಿತು ಅಧಿಕಾರ ನೀಯಲಾಯಿತು.

ಬಳ್ಳಾರಿ

ರೈತರ ಪಕ್ಷಪಂಗಡಗಳಲ್ಲಿಯೇ ತಿಕ್ಕಾಟವುಂಟಾಗಬಾರದೆಂದು ಬಳ್ಳಾರಿ ಜಿಲ್ಲೆಯ ರಾಯದುರ್ಗ ತಾಲೂಕಿನ ಮರಡಿ, ಮಣಿಮಪುರಂ ಮತ್ತು ನೆರೆಹೊರೆಯ ಹಳ್ಳಿಗಳಲ್ಲಿ ದಂಡಾತ್ಮಕ ಪೋಲೀಸ ಠಾಣೆಗಳನ್ನು ಹಾಗೇ ಇಡಲಾಗಿದೆಯೆಂದು ಮದ್ರಾಸ ನಿಧಿಮಂಡಳದಲ್ಲಿ ಸರಕಾರದ ಪರವಾಗಿ ಹೇಳಲಾಯಿತು. ೧೯೪೪ ರಿಂದ ಆ ಪೋಲೀಸ ಪಡೆ ಅಲ್ಲಿದೆಯೆಂದೂ ೧೯೪೮ ರಲ್ಲಿ ಹಳ್ಳಿಗರಿಂದ ಸಾಮೂಹಿಕ ದಂಡ ರೂಪದಲ್ಲಿ ೧೩ ಸಾವಿರ ರೂಪಾಯಿ ಸಂಗ್ರಹಿಸಲಾಗಿದೆಯೆಂದೂ ಹೇಳಲಾಯಿತು.

ಬೆಳಗಾವಿ

ಅಥಣಿಯ ಡಾಕ್ಟರರಾದ ಎಚ್. ಎಂ. ಕುಲಕರ್ಣಿ ಇವರು ಹುಲ್ಯೇರಿರೋಡಿನಲ್ಲಿಯ ಆರೋಗ್ಯಧಾಮಕ್ಕೆ ೧೦೦೦ ರೂಪಾಯಿಗಳನ್ನು ಕಾಣಿಕೆ ಕೊಟ್ಟಿರುವರು.

ವಿಲೀನ ಸಂಸ್ಥಾನಗಳಲ್ಲಿ ಧಾನ್ಯದ ಎತ್ತುವಳಿ ಪದ್ಧತಿ

ಮುಂಬಯಿ ಸರಕಾರದವರು ಹೊರಡಿಸಿದ ಒಂದು ಆಜ್ಞೆಯಲ್ಲಿ ಈ ರೀತಿ ಹೇಳಲಾಗಿದೆ-

ಪ್ರಾಂತದ ಜಿಲ್ಲೆಗಳಲ್ಲಿದ್ದಂತೆ ಜೊತ್ತೆ ಹೊಸ ಪ್ರಾಂತದಲ್ಲಿ ವಿಲೀನ ಹೊಂದಿದ ಸಂಸ್ಥಾನಗಳಲ್ಲಿ ಪ್ರತಿಯೊಬ್ಬ ಸಾಗುವಳಿದಾರನ ಹೊಲದ ಕ್ಷೇತ್ರ ಕರಗತಿಗಳ ಬಗ್ಗೆ ಕಾಗದಪತ್ರಗಳಿಲ್ಲವಾದ್ದರಿಂದ ಸರಕಾರದ ಧಾನ್ಯ ಎತ್ತುವಳಿ ವ್ಯವಸ್ಥೆಯ ಮುಖ್ಯಾಂಗವಾದ ಧಾನ್ಯ "ಲೆವ್ಹಿ" ಆಜ್ಞೆಯನ್ನು ಅವುಗಳಿಗೆ ಅನ್ವಯಿಸುವದು ಶಕ್ಯವಿಲ್ಲವೆಂದು ಕಂಡುಬಂದಿದೆ. ಅದ್ದರಿಂದ ಸರಕಾರವು ವಿಲೀನ ಸಂಸ್ಥಾನಗಳಿಗಾಗಿ ಅಲ್ಪಸ್ವಲ್ಪ ಬೇರೆಯಾದ ಒಂದು "ಲೆವ್ಹಿ" ಪದ್ಧತಿಯ ಪ್ರಕಾರ ಬೆಳೆಯ ಅಂದಾಜನ್ನು ಮಾಡಲು ಬೇರೊಂದು ರೀತಿಯನ್ನು ಹೇಳಿಕೊಡಲಾಗಿದೆ.

ಹಿಂದೀ ಸಂಸ್ಥಾನ ಲೆವ್ಹಿ ಆಜ್ಞೆ (೧೯೪೯) ಇದು ಮಾರ್ಚ ೪, ೧೯೪೯ ರಿಂದ ಅಮಲಿನಲ್ಲಿ ಬರುವದು. ಇದನ್ನು ಅದೇ ದಿನಾಂಕದ ವಿಶೇಷ ಸರಕಾರಿ ಗೆಜೆಟ್ಟಿನಲ್ಲಿ ಪ್ರಸಿದ್ಧಿಸಲಾಗಿದೆ.

ಈ ಆಜ್ಞೆಯನ್ವಯ ಜಿಲ್ಲಾಧಿಕಾರಿಗಳು ಯಾವದೊಂದು ಭಾಗದಲ್ಲಿಯ ಹೊಲಗಳ ಸರಾಸರಿ ಹುಟ್ಟುವಳಿಯು ಎಕರೆಗೆ ಇಂತಿಷ್ಟೆಂದು ಸಾರಬಲ್ಲರು. ಸಾಗುವಳಿದಾರರು ತಮ್ಮ ತಾಲೂಕಿನ ಮಾಮಲೇದಾರರಿಗೆ ತಮ್ಮ ಹೊಲವು ಯಾವ ಭಾಗದಲ್ಲಿದೆ, ಅದರ ಕ್ಷೇತ್ರ ವೆಷ್ಟು ಎಂಬುದನ್ನು ತಿಳಿಸಬೇಕು. ಕ್ಷೇತ್ರದಲ್ಲಿ ನೀರಾವರಿ ಭಾಗವನ್ನು ಒಣ ಭಾಗವನ್ನು ಪ್ರತ್ಯೇಕವಾಗಿ ತೋರಿಸತಕ್ಕದ್ದು. ಈ ಹೇಳಿಕೆಯನ್ನು ಅಥವಾ ಲಭ್ಯವಾದ ಇತರ ಮಾಹಿತಿಯನ್ನು ಮತ್ತು ಜಿಲ್ಹಾಧಿಕಾರಿಗಳು ಹೇಳಿಕೆ ಕೊಟ್ಟ ಸರಾಸರಿಯನ್ನು ಗಮನಿಸಿ ಅವರು ಪ್ರತಿಯೊಬ್ಬ ಸಾಗುವಳಿದಾರನ ಹೊಲದ ಹುಟ್ಟುವಳಿಯ ಅಂದಾಜು ಮಾಡುವರು. ಹೆಚ್ಚಿಗೆ ಧಾನ್ಯವಿದ್ದವರಿಗೆ "ಲೇವ್ಹಿ ಬಿಲ್" ಗಳನ್ನು ಕಳಿಸಲಾಗುವದು.

ಜಿಲ್ಲಾ ಆಜ್ಞೆಯಲ್ಲಿ ಇದ್ದಂತೆಯೆ ಈ ಹೊಸ ಆಜ್ಞೆಯಲ್ಲೂ ೨೫ ಮಣಕ್ಕಿಂತ ಕಡಿಮೆ ಹುಟ್ಟುವಳಿ ಕೊಡುವವೆಂದು ಅಂದಾಜು ಮಾಡಲ್ಪಟ್ಟ ಹೊಲಗಳ ಸಾಗುವಳಿದಾರರನ್ನು ಆಜ್ಞೆಯ ಕಕ್ಷೆಯಿಂದ ಹೊರತುಪಡಿಸಲಾಗಿದೆ.

ಕುಟುಂಬವು ದೊಡ್ಡದು ಅಥವಾ ಸಣ್ಣದು ಇದ್ದಂತೆ ಲೆವ್ಹಿ ಬಿಲ್ಲಿನಲ್ಲಿ ಹೆಚ್ಚು ಕಡಿಮೆ ಮಾಡುವ ವ್ಯವಸ್ಥೆಯು ಜಿಲ್ಲಾ ಲೆವ್ಹಿ ಆಜ್ಞೆಯಲ್ಲಿದ್ದಂತೆ ಈ ಆಜ್ಞೆಯಲ್ಲೂ ಇದೆ.

ಅಕ್ಕಿಯನ್ನೇ ಮುಖ್ಯವಾಗಿ ಬೆಳೆಯುವ ಸಂಸ್ಥಾನೀ ಪ್ರದೇಶವನ್ನು ಆಜ್ಞೆಯ ಕಕ್ಷೆಯಿಂದ ಹೊರತು ಪಡಿಸಲಾಗಿದೆ.

ಕ. ವಿ. ವ. ಸಂಘ ಧಾರವಾಡ

೧೯೪೮-೪೯ ರ ಬಹುಮಾನ

ಕ. ವಿ. ವ. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆದ್ಯ ರಂಗಾಚಾರ್ಯರು ಈ ರೀತಿ ತಿಳಿಸುತ್ತಾರೆ.

ಕ. ವಿ. ವ. ಸಂಘವು ಪ್ರತಿವರ್ಷ ಕೊಡುತ್ತ ಬಂದಿರುವ ಬಹುಮಾನಗಳು ಈ ವರುಷ ಕೆಳಗೆ ಕಾಣಿಸಿದ ಗ್ರಂಥಗಳಿಗೆ ದೊರೆತಿವೆ.

(೧) ಫಾರಸೀ ಕಾಗದಪತ್ರಗಳು ಕಿತ್ತೂರ ಚನ್ನಮ್ಮ ರಾಣಿ ಸಂಶೋಧನ ಮಂಡಲಿ, ಬೈಲಹೊಂಗಲ (೨) ದೊರೆ ಮಲ್ಲಸರ್ಜ್ಯಕಾವ್ಯ ಕಿತ್ತೂರ ಚನಮ್ಮ ರಾಣಿ ಸಂಶೋಧನ ಮಂಡಲ ಬೈಲಹೊಂಗಲ (೩) ಮನೋವಿಶ್ಲೇಷಣ ಶಾಸ್ತ್ರ ಪ್ರೊ. ಎನ್. ಆರ್. ಕುಲಕರ್ಣಿ, ಧಾರವಾಡ (೪) ವಿಜಯಯಾತ್ರೆ. ವ್ಹಿ. ಎಂ. ಇನಾಂದಾರ.

ಗಾಂಧಿ ಸ್ಮಾರಕ ನಿಧಿ ಸಂಗ್ರಹ

ಕರ್ನಾಟಕದಲ್ಲಿ ೪ ಲಕ್ಷಕ್ಕೂ ಮಿಕ್ಕಿದೆ

ಕರ್ನಾಟಕ ಪ್ರಾಂತದ ಗಾಂಧಿ ಸ್ಮಾರಕ ನಿಧಿ ಸಮಿತಿಯಲ್ಲಿ ಸಮಾವೇಶವಾಗಿರುವ ಕೆಳಗೆ ಕಾಣಿಸಿದ ಜಿಲ್ಲೆಗಳಲ್ಲಿ ಫೆಬ್ರುವರಿ ತಿಂಗಳ ಕೊನೆಯ ತಾರೀಖಿನ ವರೆಗೆ ನಿಧಿ ಸಂಗ್ರಹವಾದ ವಿವರವು ಕೆಳಗಿನಂತೆ ಇರುವದೆಂದು ಗಾಂಧಿ ಸ್ಮಾರಕ ನಿಧಿಯ ಕರ್ನಾಟಕ ಶಾಖೆಯ ಗೌರವ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಧಾರವಾಡ	೧,೬೯,೧೨೭-೬-೧೧
ವಿಜಾಪೂರ	೧,೦೫,೦೭೨-೯-೩
ಬೆಳಗಾಂವ	೩೬,೨೭೯-೨-೩
ಉತ್ತರಕನ್ನಡ	೨೮,೨೨೨-೧೩-೯
ದಕ್ಷಿಣಕನ್ನಡ	೫೩,೯೭೨-೮-೪
ಕೊಡಗು	೧೫,೨೩೫-೬-೯
ಬಳ್ಳಾರಿ	—
ಮದ್ರಾಸ ಸರಕಾರದಿಂದ	೧,೫೦೦-೦-೦
	೪,೦೬,೯೨೨-೧೫-೩

ವಿಜಾಪೂರ ಜಿಲ್ಲೆಯಿಂದ ಫೆಬ್ರುವರಿ ತಿಂಗಳ ಕೊನೆಯ ವರೆಗೆ ವಸೂಲಿಯಾದ ಪ್ರಕಾರ ಸಂಗ್ರಹವಾದ ೨೦೦೨-೮-೦ ರಕಮನ್ನು ಮತ್ತು ಧಾರವಾಡ ಜಿಲ್ಲೆಯಿಂದ ಸಂಗ್ರಹವಾದ ೧೧೩೬-೦-೦ ರಕಮನ್ನು ಮಾರ್ಚ ತಿಂಗಳಲ್ಲಿ ಕೂಡಿಸಲಾಗುವದು.

೩೨ ನೆಯ ಕನ್ನಡ ಸಾಹಿತ್ಯ ಸಮ್ಮೇಲನ

(೪ ನೆಯ ಪುಟದಿಂದ ಮುಂದರಿದುದು)

ಅಧ್ಯಕ್ಷ ನಿಜಲಿಂಗಪ್ಪನವರಿಗೂ ಹಾಗೆಯೆ ಅನಿಸಿತ್ತೇನೊ. ಅವರು ಗೊತ್ತುವಳಿಯಿಂದ ತೊಂದರೆಯಾಗುವದೆಂದು ಒಪ್ಪಿಕೊಂಡರು. "ಆದರೆ ನಾನು ಯಾವಾಗಲೂ ಆಶಾವಾದಿ. ಈ ಗೊತ್ತುವಳಿಯೇನೂ ಕೊನೆಯದಲ್ಲ. ಮೈಸೂರಿನವರು ನಮ್ಮೆಲ್ಲರ ಹಿತವೂ ಒಂದೇ ಎಂದು ಮನಗಾಣಬೇಕು," ಎಂದು ಅವರು ಸಮಾರೋಪ ಮಾಡಿದರು.

ಇದಲ್ಲದೆ ದರ್ ಸಮಿತಿಯ ಖಂಡನೆ, ಮೈಸೂರು, ತಿರ್ವಾಂಕೂರು, ಕೊಚ್ಚಿ, ಹೈದರಾಬಾದಗಳ ವಿಲಯನದ ಬೇಡಿಕೆ, ಭಾಷಾನ್ವಯ ಪ್ರಾಂತಗಳ ಗಡಿಗಳನ್ನು ಆಯಾ ಪ್ರದೇಶಗಳ ಧುರೀಣರು ಚರ್ಚೆಯಿಂದ ಗೊತ್ತುಪಡಿಸಬೇಕೆಂಬ ಬೇಡಿಕೆ ಮೊದಲಾದವನ್ನೊಳಗೊಂಡ ಗೊತ್ತುವಳಿಗಳಾದವು.

ಸಾಹಿತ್ಯ ಸಮ್ಮೇಲನದಲ್ಲಿ ಶ್ರೀ ದಿವಾಕರ ಹಾಗು ಡಾ. ಕಾರ್ಯಪ್ಪನವರನ್ನು ಅವರಿಗೆ ದೊರೆತ ಪದವಿಗಳಿಗಾಗಿ ಅಭಿನಂದಿಸುವ ಗೊತ್ತುವಳಿಗಳಾದವು. ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮರು ಮುಂದಿನ ವರ್ಷ ಪರಿಷತ್ತಿನ ಕಾರ್ಯದರ್ಶಿಗಳಾಗಬೇಕೆಂದು ನಿರ್ಣಯವಾಯಿತು.

ಮಹಿಳಾಗೋಷ್ಠಿಯಲ್ಲಿ ಏಕೀಕರಣವನ್ನು ಬೇಡುವ, ಕೇಂದ್ರ ಸರಕಾರವು ಮಹಿಳೆಯರ ಹಕ್ಕುಬಾಧ್ಯತೆಗಳ ವಿಷಯದಲ್ಲಿ ಅನುಸರಿಸಿದ ಧೋರಣೆಯನ್ನು ಸಂಸ್ಥಾನಗಳಿಗೂ ಅನ್ವಯಿಸಬೇಕೆಂಬ ಗೊತ್ತುವಳಿಗಳಾದವು.

ಸಮ್ಮೇಲನದ ಸಮಾರೋಪ ಮಾಡುತ್ತ ಅಧ್ಯಕ್ಷ ಉತ್ತಂಗಿಯವರು ಆ ಗೊತ್ತುವಳಿಗಳ ಮೇಲೆ ನಿದ್ದೆ ಮಾಡದೆ ಕಾರ್ಯ ಪ್ರವೃತ್ತರಾಗಬೇಕೆಂದು ಸೂಚಿಸಿದರು.

● ಇಪಿ ಫಕೀರನ ಕಡೆಯ ವಜೀರ ಗುಪ್ತಗಾದಿನ ೩೦೦ ಜನರು ಪಾಕಿಸ್ತಾನ-ಅಫಗಾಣಿಸ್ತಾನದ ಗಡಿ ಪ್ರದೇಶದಲ್ಲಿರುವ ಥಾಲ ಎಂಬ ಪಾಕಿಸ್ತಾನದ ದುರ್ಗದ ಮೇಲೆ ದಾಳಿ ಮಾಡಿದರೆಂದು ಸುದ್ದಿ ಬಂದಿದೆ. ಪಾಕಿಸ್ತಾನದ ದುರ್ಗ ರಕ್ಷಕರು ಅವರನ್ನು ಓಡಿಸಿದರು.

ಹಿಂದುಸ್ತಾನ

ಹೊಸದಿಲ್ಲಿ

ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದ ಉಪಮುಖ್ಯ ಮಂತ್ರಿಗಳಾದ ಬಕ್ಷಿಗುಲಾಮ ಮಹಮ್ಮದರು ಪಾಕಿಸ್ತಾನವು ಮತ್ತೆ ಹಿಂದುಸ್ಥಾನದಲ್ಲಿ ಸೇರಲು ಶೀಘ್ರದಲ್ಲಿಯೇ ಸರ್ವ ಪ್ರಯತ್ನಗಳನ್ನು ಮಾಡುವದೆಂದು ಅಜಮೀರದಲ್ಲಿಯ ಒಂದು ಭಾಷಣದಲ್ಲಿ ಹೇಳಿದರು.

ಪಂಡಿತ ಜವಾಹರಲಾಲರ ನೇತೃತ್ವದಲ್ಲಿ ಹಿಂದುಸ್ಥಾನವು ಬಿರುಗಾಳಿಗಳನ್ನೆಲ್ಲ ಒಂದೊಂದಾಗಿ ಎದುರಿಸುತ್ತ ಇದೀಗ ನವಭಾರತವನ್ನು ಕಟ್ಟುತ್ತಲಿದೆ ಎಂದು ಬ್ರಿಟಿಶ ವಿದೇಶಮಂತ್ರಿಗಳಾದ ಬಾಟವಿಲ್ಲೇಯವರು ಮುಂಬಯಿಯಲ್ಲಿ ಶರೀಫ ಶ್ರೀ ಅಳ್ವರವರು ಕೊಟ್ಟ ಸಂತೋಷ ಕೂಟದ ಸಮಯದಲ್ಲಿ ಹೇಳಿದರು.

ಅಖಿಲ ಭಾರತ ಹಿಂದೂ ಕಾಯದೆ ಮಸೂದೆ ವಿರೋಧೀ ಪರಿಷತ್ತಿನ ಬಹಿರಂಗ ಅಧಿವೇಶನದಲ್ಲಿ ಭಾಷಣ ಮಾಡುತ್ತ ಕಾಂಗ್ರೆಸ್ಸಿನ ಅಧ್ಯಕ್ಷ ಡಾ. ಪಟ್ಟಾಭಿಯವರು ಧಾರ್ಮಿಕ ಪದ್ಧತಿಯಲ್ಲಿ ರಾಜಕೀಯ ಕಾಯದೆಯಿಂದ ಹಸ್ತಕ್ಷೇಪ ಮಾಡುವದನ್ನು ವಿರೋಧಿಸಿದರು. ಆಯಾ ಧರ್ಮಗಳ ಸಾಮಾಜಿಕ ಧುರೀಣರೇ ಈ ಕೆಲಸ ಮಾಡಬೇಕೆಂದು ಅವರು ಹೇಳಿದರು.

ರಾಮಾಯಣ ಮಹಾ ಕಾವ್ಯದ ಅತ್ಯುತ್ತಮ ಇಂಗ್ಲೀಷ ಪರಿವರ್ತನೆಗೆ ೨೦೦೦ ಗಿನಿ ಅಂದರೆ ೩೧೦೦೦ ರೂಪಾಯಿಗಳನ್ನು ಕೊಡುವದಾಗಿ ಸರ್ ಪುರುಷೋತ್ತಮದಾಸರು ಸಾರಿದ್ದಾರೆ.

ಸಿಖರು ಉಳಿದ ಸಮಾಜಗಳೊಡನೆ ಸಹಕರಿಸಿ ಮಹಾತ್ಮರ ಕನಸಿನ ಸ್ವರಾಜ್ಯವನ್ನು ಪಡೆಯಬೇಕೆಂದು ಸಂರಕ್ಷಣ ಮಂತ್ರಿಗಳಾದ ಸರದಾರ ಬಲದೇವಸಿಂಗರು ಒಂದು ಹೇಳಿಕೆಯ ಮೂಲಕ ಕೇಳಿಕೊಂಡಿದ್ದಾರೆ.

ಪಟಿಯಾಳಾ ಸಂಸ್ಥಾನದಲ್ಲಿಯ ಲೋಕಸೇವಕ ಸಭೆ ಎಂಬ ರಾಜಕೀಯ ಸಂಸ್ಥೆಯನ್ನು ವಿಸರ್ಜಿಸಲಾಗಿದೆ ಮತ್ತು ಈ ಸಭೆಯ ಸದಸ್ಯರೆಲ್ಲ ಕಾಂಗ್ರೆಸ್ಸನ್ನು ಸೇರಬೇಕೆಂದು ಬಿನ್ನವಿಸಿಕೊಳ್ಳಲಾಗಿದೆ.

ಪಶ್ಚಿಮ ಬಂಗಾಲ

ಮುಖ್ಯ ಮುಖ್ಯ ರೇಲ್ವೆ ಕೇಂದ್ರಗಳನ್ನು ಕಾಯಲು ಪೋಲೀಸರನ್ನು ಸೈನಿಕರನ್ನು ಕಳಿಸಿದ್ದು ಹಿಂಸಾಪ್ರವರ್ತಕರನ್ನು ಉಗ್ರೋಪಾಯಗಳಿಂದ ದಂಡಿಸಲು ಅಜ್ಞಾಪಿಸಲಾಗಿದೆ. ನಾಗರಿಕರಿಗೆ ರಕ್ಷಣೆಯನ್ನು ಕೊಡಲೂ ವ್ಯವಸ್ಥೆ ಮಾಡಿದೆ. ಪಶ್ಚಿಮ ಬಂಗಾಲ ಸರಕಾರದವರು ಪ್ರಕಟಣೆಯೊಂದನ್ನು ಹೊರಡಿಸಿ ತಾವು ಕೈಕೊಳ್ಳುವ ಕ್ರಮಗಳು ಕಾರ್ಯಕಾರಿಯಾಗುವಂತೆ ಜನತೆ ಸಹಕರಿಸಬೇಕೆಂದು ಕೇಳಿಕೊಂಡಿದ್ದಾರೆ.

ಪೂರ್ವ ಬಂಗಾಲದ ನಿರಾಶ್ರಿತರ ಪುನರ್ನಿವೇಶನಕ್ಕಾಗಿ ಪಶ್ಚಿಮ ಬಂಗಾಲ ಸರಕಾರದವರು ೨೪ ಪರಗಣೆ ಜಿಲ್ಹೆಯಲ್ಲಿ ೨೦೦ ಎಕರೆ ಭೂಮಿಯ ವಸತಿ ಪ್ರದೇಶಗಳನ್ನು ಸ್ಥಾಪಿಸಲಿದ್ದಾರೆ.

ಕೇರಿ ಪುರದ ಮದ್ದು ಗುಂಡಿನ ಕಾರಖಾನೆಯ ಹೆದ್ದಾರಿಗೆ ಅಕ್ಷೇಪಾರ್ಹ ಭಿತ್ತಿಪತ್ರಿಕೆಗಳನ್ನು ಅಂಟಿಸುತಿರುವಾಗ ಕಲಕತ್ತಾ ಪೋಲೀಸರು ಮೂವರನ್ನು ಬಂಧಿಸಿರುವರು. ಅವರ ವಶದಲ್ಲಿದ್ದ ಭಿತ್ತಿ ಪತ್ರಿಕೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ಹೈದರಾಬಾದ

ಪ್ರಮುಖ ಕಮ್ಯುನಿಸ್ಟ ಮುಖಂಡರೆನಿಸಿದ ರಾಮಪುರದ ಲಕ್ಷ್ಮೀಪತಿಯೆಂಬವನನ್ನು ಪೋಲೀಸರು ಬಂಧಿಸಿದ್ದಾರೆ. ಪೋಲೀಸರು ಎರಡು ನಾಡಬಂದೂಕುಗಳನ್ನು ಕಸಿದುಕೊಂಡಿದ್ದಾರೆ. ಇದಲ್ಲದೆ ಪೋಲೀಸರು ವೀರಲಪಲ್ಲಿಯಲ್ಲಿ ಮತ್ತೆ ನಾಲ್ವರು ಕಮ್ಯುನಿಸ್ಟರನ್ನು ಸೆರೆ ಹಿಡಿದು ಅವರ ಬಳಿಯಲ್ಲಿದ್ದ ೧೦ ಸಾವಿರ ಆಸ್ತಿಯನ್ನು ವಶಕ್ಕೆ ತೆಗೆದುಕೊಂಡಿರುವರು.

ಹೈದರಾಬಾದ ಕಾಂಗ್ರೆಸ ಕಾರ್ಯ ಸಮಿತಿಯ ಸದಸ್ಯರಾದ ಶ್ರೀ ಜನಾರ್ದನರಾಯರು ಮತ್ತು ಬಿ. ರಾಮಕೃಷ್ಣರಾಯರು ಪ್ರಕಟನೆಯನ್ನು ಹೊರಡಿಸಿ ಕಾಂಗ್ರೆಸ್ಸಿಗರೆಲ್ಲ ಪಕ್ಷಪಂಗಡ ಭೇದವನ್ನಳಿಸದೆ ಕಾಂಗ್ರೆಸನ್ನು ಬಲಪಡಿಸಲು ಸಹಕರಿಸಬೇಕೆಂದು ಕೇಳಿಕೊಂಡರು.

ಮುಂಬಯಿ

ಕೇಂದ್ರ ಸರಕಾರದವರು ಸರ್ ರಾಧಾಕೃಷ್ಣನ್‌ರ ಅಧ್ಯಕ್ಷತೆಯಲ್ಲಿ ನೇಮಿಸಿದ ವಿಶ್ವವಿದ್ಯಾಲಯ ಸಮಿತಿಯವರು ಮುಂಬಯಿಗೆ ಬಂದಿದ್ದು ಸಾಕ್ಷಿಗಳನ್ನು ಸಂಗ್ರಹಿಸುವ ಕಾರ್ಯವನ್ನು ಪ್ರಾರಂಭಿಸಿರುವರು. ಮಂತ್ರಿಗಳನ್ನು ಭೆಟ್ಟಿಯಾಗಿದ್ದು ಕಾಲೇಜುಗಳನ್ನು ಸಂದರ್ಶಿಸಿ ಪ್ರಾಧ್ಯಾಪಕರನ್ನು ಮತ್ತು ಮಾಧ್ಯಮಿಕ ಶಾಲೆಗಳ ಮುಖ್ಯಸ್ಥರನ್ನು ಕಾಣಲಿರುವರು.

ಕಮ್ಯುನಿಸ್ಟ ಪ್ರಚೋದಿತ ರೇಲ್ವೆ ಕೆಲಸಗಾರರು ಸಂಪು ಹೂಡಿದರೆ ಅದನ್ನೆದುರಿಸಲು ಸರಕಾರವು ಉಗ್ರ ಮುಂಜಾಗ್ರತೆ ತೆಗೆದುಕೊಂಡಿದ್ದಾರೆ. ಕುಚೋದ್ಯಗಾರರನ್ನು ಕಂಡಲ್ಲಿ ಗುಂಡಿಕ್ಕಬೇಕೆಂದು ನಿರ್ಧರಿಸಲಾಗಿದೆಯೆಂದು ತಿಳಿಯುತ್ತದೆ.

ಬಿ. ಬಿ. ಸಿ. ಆಯ. ರೇಲ್ವೆಯ ಮೇಲೆ ಅಹಮ್ಮದಾಬಾದಿನಿಂದ ೩೦ ಮೈಲುಗಳ ಮೇಲೆ ಇರುವ ಮೆಹಸಾನಾ ಸ್ಟೇಶನ ಹತ್ತರ ಮಧ್ಯರಾತ್ರಿಯಲ್ಲಿ ಒಂದು ಗೂಡ್ಸ ಗಾಡಿಯ ಮೇಲೆ ಸಶಸ್ತ್ರ ದರೋಡೆಗಾರರು ದಾಳಿ ಮಾಡಿದಾಗ ಪೋಲೀಸನೊಬ್ಬನಿಗೆ ಗಾಯವಾಯಿತು. ಪರಸ್ಪರ ಗುಂಡುಗಳು ಹಾರಾಡಿದವು. ದರೋಡೆಗಾರರು ಪಲಾಯನ ಸೂಕ್ತ ಹೇಳಿದರು.

ಅಹಮದಾಬಾದ ನಗರ ಸಭೆಯವರು ಅಲ್ಪಾವಧಿ ನೀರಿನ ಯೋಜನೆಯನ್ನು ತಯಾರಿಸಿದ್ದು ಅದಕ್ಕಾಗಿ ೩೦ ಲಕ್ಷ ರೂಪಾಯಿ ಅಂದಾಜ ಮಾಡಲಾಗಿದೆ.

ಮುಂಬಯಿ ಪ್ರಾಂತದ ಮಾಧ್ಯಮಿಕ ಶಾಲೆಗಳಲ್ಲಿಯೂ ಕನಿಷ್ಠ ಫೀ ದರಗಳನ್ನು ಕಳೆದ ಡಿಸೆಂಬರದಲ್ಲಿ ಪ್ರಕಟಪಡಿಸಲಾಗಿತ್ತು. ಆದರೀಗ ಮುಂಬಯಿ ಸರಕಾರವು ನಿರ್ದಿಷ್ಟಪಡಿಸಿದ ಕನಿಷ್ಠ ದರಕ್ಕಿಂತ ಕಡಮೆ ಫೀಯನ್ನು ವಸೂಲ ಮಾಡಲು ಅರ್ಹತೆಯುಳ್ಳ ಶಾಲೆಗಳಿಗೆ ಅಪ್ಪಣೆ ಕೊಡಲು ನಿರ್ಧರಿಸಿದೆ.

ಮದರಾಸ

ಮದರಾಸ ಪ್ರಾಂತದ ಅಕ್ಕಿಯ ಬೇಡಿಕೆ ೪೫೬೦ ಸಾವಿರ ಟನ್ನುಗಳಿದ್ದಿರುವಾಗ ನಮ್ಮ ಪ್ರಾಂತದಲ್ಲಿ ೪೩೫೩೦೦೦ ಟನ್ನುಗಳಷ್ಟು ಅಕ್ಕಿ ಬೆಳೆಯಬಹುದು. ಆದುದರಿಂದ ಕೊರತೆ ಬೀಳುವ ೭ ಲಕ್ಷ ಟನ್ನ ಅಕ್ಕಿಯನ್ನು ಪೂರಯಿಸಬೇಕಾಗಿ ಕೇಂದ್ರ ಸರಕಾರವನ್ನು ಬಿನ್ನವಿಸಿಕೊಳ್ಳಲಾಗಿದೆ ಎಂದು ಪ್ರಾಂತದ ಆಹಾರ ಮಂತ್ರಿಗಳು ಶಾಸನ ಸಭೆಯಲ್ಲಿ ಹೇಳಿದರು.

ಕೊಯಿಮತ್ತೂರಿನಲ್ಲಿಯ ಕೆಲವು ಜವಳಿ ಗಿರಣಿಗಳು ತಮ್ಮ ಗಿರಣಿಯ ಕೆಲವು ಭಾಗಗಳನ್ನು ೧೫ ದಿವಸಗಳ ನಂತರ ಮುಚ್ಚಿಬಿಡುವದಾಗಿಯೇ ನೋಟೀಸು ಕೊಟ್ಟಿರುವರು. ಸರಕಾರದವರು ಇನ್ನು ಮುಂದೆ ಹತ್ತಿಯನ್ನು ಪೂರಯಿಸುವದಾಗುವದಿಲ್ಲೆಂದು ಹೇಳಿದ್ದರಿಂದ ಅನಿವಾರ್ಯರಾಗಿ ಈ ನಿರ್ಧಾರಕ್ಕೆ ಬರಬೇಕಾಯಿತು.

ಸಂಪು ಹೂಡಲು ನೋಟೀಸು ಕೊಟ್ಟ ಎಸ್. ಆಯ. ರೇಲ್ವೆ ಕೆಲಸಗಾರ ಸಂಘವು ೯ ನೇ ತಾರೀಕಿನಿಂದ ಸಂಪು ಹೂಡದೆ ೧೪ ನೇ ಮಧ್ಯರಾತ್ರಿಯಿಂದ ಹೂಡುವದೆಂದು ಪ್ರಕಟನೆಯ ಮೂಲಕ ಸಾರಿದೆ.

ಮದರಾಸ ಸರಕಾರವು ಜಮೀನದಾರಿ ನಿರ್ಮೂಲನ ಮಸೂದೆ ಪಾಸಾದ ನಂತರ ಜಮೀನದಾರರ ಭೂಮಿಗಳನ್ನೆಲ್ಲ ವಶಪಡಿಸಿಕೊಂಡು ಅದಕ್ಕೆ ಪರಿಹಾರವನ್ನು ಕೊಡುವದು-ಪರಿಹಾರವನ್ನು ಯಾವ ಸ್ವರೂಪದಲ್ಲಿ ಕೊಡಬೇಕೆಂಬುದನ್ನು ಸರಕಾರದವರು ಹಿಂದಿನಿಂದ ನಿರ್ಧರಿಸುವರು.

ಗೋಲ್ಡನ್ ರಾಕ ಪೋಲೀಸರು ತ್ರಿಚಿಯಲ್ಲಿ ೭ ನೇ ತಾರೀಕು ಓರ್ವ ಕಮ್ಯುನಿಸ್ಟ ಮತ್ತು ಎಸ್. ಆಯ. ರೇಲ್ವೆ ಕಾರ್ಮಿಕರ ಸಂಘದ ನಾಲ್ವರು ಕಾರ್ಯಕರ್ತರನ್ನು ಬಂಧಿಸಿರುವರು. ಈ ವರೆಗೆ ೭೫ ಜನರನ್ನು ಬಂಧಿಸಲಾಗಿದೆ.

ತಿರುವಾಂಕೂರ ಮತ್ತು ಕೊಚ್ಚಿ ಸಂಸ್ಥಾನಗಳು ಒಂದಕ್ಕೊಂದು ಹೊಂದಿಕೊಂಡಿವೆ ಅವರ ಸಂಸ್ಕೃತಿಯೂ ಒಂದೇ ಆಗಿದೆ. ಅದ್ದರಿಂದ ಇವೆರಡೂ ಕೂಡಿ ಒಂದು ಒಕ್ಕೂಟವನ್ನೇ ರಚಿಸಬಾರದೆಂದು ಸಂಸ್ಥಾನ ಸಲಹೆಗಾರರಾದ ಶ್ರೀ ಮೆನನ್‌ರು ಪತ್ರಿಕಾ ಸುದ್ದಿಗಾರರ ಸಭೆಯಲ್ಲಿ ತಿರುವನಂತಪುರದಲ್ಲಿ ಹೇಳಿದರು.

ಪ್ರಾಂತಗಳಿಗೆ ಸರಿಸಮಾನವಾಗದಿರುವ ಸಂಸ್ಥಾನಗಳು ಉಳಿಯಬಾರದೆಂದೇ ಹಿಂದುಸ್ಥಾನ ಸಂಸ್ಥಾನ ಶಾಖೆಯ ಧೋರಣವಾಗಿದೆಯೆಂದು ಶ್ರೀ ವಿ. ಪಿ. ಮೆನನ್‌ರು ತಿರುವನಂತಪುರದಲ್ಲಿ ಸುದ್ದಿಗಾರರ ಪರಿಷತ್ತಿನಲ್ಲಿ ಸಾರಿದರು.



ದಿಲ್ಲಿಯಲ್ಲಿ ಜರುಗಿದ ಅ. ಭಾ. ದನಕರುಗಳ ಪ್ರದರ್ಶನದಲ್ಲಿ ಪ್ರಥಮ ಬಹುಮಾನ ಹೊಂದಿದ ಹಿಸ್ಸಾರ ಹೋರಿ. ೪ ವರ್ಷ ವಯಸ್ಸಿನ ಈ ಹೋರಿ ಹಿಸ್ಸಾರದ ಸರಕಾರಿ ಪಶು ಸಂಗೋಪನಾಲಯದಲ್ಲಿ ಸಾಕಲ್ಪಟ್ಟಿದೆ.

ಸುರಾಜ್ಯ ನಿರ್ಮಾಣದಲ್ಲಿ ಪತ್ರಿಕೆಗಳ ಹೊಣೆ

ಸರಕಾರದಷ್ಟೇ ಇದೆ ಎಂದು ಮಾನ್ಯ ದಿವಾಕರರ ಸೂಚನೆ

ಅಖಿಲ ಭಾರತ ಪತ್ರಿಕಾ ಸಂಪಾದಕರ ಪರಿಷತ್ತಿನ ಸ್ಥಾಯಿಸಮಿತಿಯ ಸಭೆಯು ಮುಂಬಯಿಯಲ್ಲಿ ೭ ನೇ ತಾರೀಕು ಮುಂಜಾನೆ ೧೧ ಗಂಟೆಗೆ ಶ್ರೀ ದೇವದಾಸ ಗಾಂಧಿಯವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಈ ಸಭೆಗೆ ಶ್ರೀ ಜೋಕಿಂ ಅಳ್ವಾ, ಹ್ಯಾರಿಸ, ಎಂ. ಎಂ. ಜೋಶಿ, ಕಸ್ತೂರಿ ಶ್ರೀನಿವಾಸನ್, ಆಯ್. ಎಸ್. ಜೋಸೂ, ಎಸ್. ಜಿ. ಗೋಖಲೆ, ಎ. ಡಿ. ಮಣಿ, ಹಣಮಂತರಾವ ಮೋಹರೆ, ಎಸ್. ಸದಾನಂದ, ಕೆ. ಶ್ರೀನಿವಾಸನ್ ಇವರು ಆಗಮಿಸಿದ್ದರು.

ಮುಂಬಯಿ ಕ್ರಾನಿಕಲ ಪತ್ರಿಕೆಯ ಸಂಪಾದಕರಾದ ಶ್ರೀ ಎಸ್. ಎ. ಬ್ರೇಲ್ವಿಯವರ ನಿಧನದಿಂದ ಪತ್ರಿಕಾ ಪ್ರಪಂಚಕ್ಕೆ ಅಪಾರ ಹಾನಿಯಾಗಿದೆ. ಈ ಪರಿಷತ್ತಿಗೂ ತುಂಬಾ ವ್ಯಸನವಾಗಿದೆಂಬ ಆಶಯದ ಗೊತ್ತುವಳಿಯು ಪಾಸಾಯಿತು.

ಶ್ರೀ ಬ್ರೇಲ್ವಿಯವರು ಅ. ಭಾ. ಪತ್ರಿಕಾ ಸಂಪಾದಕರ ಪರಿಷತ್ತಿನ ಅಧ್ಯಕ್ಷರೂ ಆಗಿದ್ದರು.

ಈ ಅಧ್ಯಕ್ಷರು ಗೊತ್ತುವಳಿಯನ್ನು ಮಂಡಿಸುತ್ತ ಈ ಸಭೆಯಲ್ಲಿ ಇಷ್ಟು ಆಸನಗಳು ಬರಿದಾಗಿವೆ. ಇವುಗಳಲ್ಲಿ ಒಂದನ್ನು ಮಾತ್ರ ತುಂಬಲು ಎಂದಿಗೂ ಸಾಧ್ಯವಿಲ್ಲ. ಆ ಆಸನವೆಂದರೆ ಶ್ರೀ ಬ್ರೇಲ್ವಿಯವರದು ಎಂದು ಹೇಳಿದರು. ಶ್ರೀಗಳಾದ ಕಸ್ತೂರಿ ಶ್ರೀನಿವಾಸನ್, ಹಣಮಂತರಾವ ಮೊಹರೆ, ಹ್ಯಾರಿಸ, ಅಳ್ವಾ, ಎಂ. ಎಂ. ಜೋಶಿ ಮುಂತಾದವರು ಶ್ರೀ ಬ್ರೇಲ್ವಿಯವರ ಗುಣಗಾನ ಮಾಡಿದರು.

ನಂತರ ಈ ಸಭೆಯು ಶ್ರೀ ಹಾರ್ನಿಮನ್, ನಟೇಶನ್, ಡಾ ಸಯ್ಯದ ಹುಸೇನ ಇವರ ನಿಧನದ ಬಗ್ಗೆಯೂ ದುಃಖಸೂಚಕ ಗೊತ್ತುವಳಿಗಳನ್ನು ಅಂಗೀಕರಿಸಿತು.

ಶ್ರೀ ದಿವಾಕರರಿಗೆ ಸ್ವಾಗತ

ಕೇಂದ್ರ ಆಕಾಶವಾಣಿ ಮಂತ್ರಿಗಳಾದ ಶ್ರೀ. ರಂಗರಾವ ದಿವಾಕರರು ಸುಮಾರು ೧೨ ಗಂಟೆಗೆ ಬಂದು ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿದರು. ಶ್ರೀ ದಿವಾಕರರನ್ನು ಸ್ವಾಗತಿಸುತ್ತ ಅಧ್ಯಕ್ಷರಾದ ಶ್ರೀ. ದೇವದಾಸರು ಹೀಗೆ ಹೇಳಿದರು.

"ಸ್ವತಃ ಪತ್ರಿಕೋದ್ಯೋಗಿಯಾದ ಶ್ರೀ. ದಿವಾಕರರು ಆಕಾಶವಾಣಿ ಮತ್ತು ಸುದ್ದಿ ಶಾಖೆಯ ಮಂತ್ರಿಗಳಾಗಿದ್ದು ನಮಗೆ ಸಂತೋಷದ ಸಂಗತಿ. ಅವರಿಂದ ನಮ್ಮ ಈ ಪರಿಷತ್ತಿಗೆ ಬಹಳ ಸಹಾಯವಾಗುವದೆಂಬಲ್ಲಿ ಸಂದೇಹವಿಲ್ಲ."

ಶ್ರೀ ದಿವಾಕರರು ಹೀಗೆ ಉತ್ತರಿಸಿದರು.

ಪತ್ರಿಕೋದ್ಯೋಗಿಯೆಂದೇ ನನ್ನ ಜೀವನ ಪ್ರಾರಂಭಿಸಿದ ನನಗೆ ಪತ್ರಿಕಾ ಪ್ರಪಂಚದ ವಿಘ್ನಗಳೆಲ್ಲವೂ ಗೊತ್ತಿವೆ. ವಿಘಾತಕ ಶಕ್ತಿಗಳನ್ನು ತೊಡೆದುಹಾಕಿ ಪ್ರಾತಿನಿಧಿಕ ಪ್ರಜಾರಾಜ್ಯವನ್ನು ಕಟ್ಟುವ ಹೊಣೆಗಾರಿಕೆಯು ಸರಕಾರದ ಮೇಲಿದ್ದಷ್ಟೇ ಪತ್ರಿಕೆಗಳ ಮೇಲೆಯೂ ಇದೆ.

ಸಾರ್ವಜನಿಕ ಸುರಕ್ಷಿತತೆ ಕಾನೂನಿನ ಬಗ್ಗೆ ಸಂಪಾದಕರ ಅಭಿಪ್ರಾಯವೇನಿದೆಂಬುದನ್ನು ನಾನು ಅರಿತಿದ್ದೇನೆ. ಆದರೆ ಸರಕಾರವು ಎದುರಿಸಬೇಕಾಗಿರುವ ಸಮಾಜವಿಘಾತಕ ಶಕ್ತಿಗಳನ್ನೂ ನೀವು ಮರೆಯಬಾರದು. ನೀವು ಮಂಡಿಸಿದ ಕೆಲವು ಸಮಸ್ಯೆಗಳು ಗೃಹಶಾಖೆಗೆ ಹೆಚ್ಚಾಗಿ ಸಂಬಂಧಿಸಿರುವದರಿಂದ ನಾನು ಅವನ್ನು ಆ ಶಾಖೆಗೆ ಕಳಿಸುವೆ.

ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಸೌಹಾರ್ದವನ್ನು ಸ್ಥಾಪಿಸುವ ವಿಚಾರದಲ್ಲಿ ಪತ್ರಿಕೆಗಳು ಮಾಡಿದ ಕಾರ್ಯವನ್ನು ನಾನು ಪ್ರಶಂಸಿಸದಿರಲಾರೆ.

ಅಂತರ್ರಾಷ್ಟ್ರೀಯ ಪತ್ರಿಕೆ ಮತ್ತು ವಾರ್ತಾ ಸಂಸ್ಥೆಯನ್ನು ಸ್ಥಾಪಿಸಬೇಕೆಂದಿದ್ದು ಸರಕಾರವು ಸರ್ವ ಸೌಕರ್ಯ ನೀಡಲು ಸಿದ್ಧವಿದೆ. ಹೊಸ ರಾಜ್ಯಘಟನೆಯಲ್ಲಿ ಪತ್ರಿಕೆಗಳಿಗೆ ಯೋಗ್ಯ ಸ್ಥಾನ ಕೊಡಲಾಗಿದೆ.

ಅಕ್ಷೇಪಾರ್ಹ ಹಾಗೂ ಉದ್ರೇಕಜನಕವಾದ ಲೇಖಗಳನ್ನೂ ಸುದ್ದಿಗಳನ್ನೂ ಪ್ರಸಿದ್ಧಿಸುವ ಪತ್ರಿಕೆಗಳಿಗೆ ಯೋಗ್ಯ ದಂಡನೆ ಆಗಬೇಕು. ಈ ವಿಷಯದಲ್ಲಿ ಈ ಸಭೆಯು ಅಧಿಕಾರಿಗಳೊಂದಿಗೆ ಸಹಕರಿಸಬೇಕು ಎಂಬ ಆಶಯದ ಗೊತ್ತುವಳಿಯು ಮಧ್ಯಾಹ್ನದ ಸಭೆಯಲ್ಲಿ ಸ್ವೀಕೃತವಾಯಿತು.

ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಸೌಹಾರ್ದ ಸ್ಥಾಪಿಸುವ ವಿಚಾರದಲ್ಲಿ ಪತ್ರಿಕೆಗಳು ಅಂತರ್ದೇಶೀಯ ಪರಿಷತ್ತು ಸ್ಥಾಪಿಸಿರುವ ಪತ್ರಿಕಾ ಸಲಹೆ ಸಮಿತಿಯ ಸೂಚನೆಯನ್ನು ಅನುಸರಿಸಬೇಕೆಂದು ಅಧ್ಯಕ್ಷರು ಬಿನ್ನವಿಸಿದ್ದನ್ನು ಸಭೆಯು ಒಪ್ಪಿಕೊಂಡಿತು.

ದೇಶದ ಆಹಾರ ಕೊರತೆ ನಿವಾರಿಸಲು ಪಂ. ನೆಹರೂರ ವೈಯಕ್ತಿಕ ಪ್ರಯೋಗಗಳು

ಮುಖ್ಯಮಂತ್ರಿ ಪಂ. ನೆಹರೂರವರು ತಮ್ಮ ಆಹಾರದ ಬಗ್ಗೆ ಕೆಲ ಪ್ರಯೋಗಗಳನ್ನು ನಡೆಸಿದ್ದು ಅದರಿಂದ ದೇಶದ ಆಹಾರ ಕೊರತೆ ನಿವಾರಣೆಯ ಮಾರ್ಗವು ದೊರೆಯಬಹುದೆಂದು ಹೇಳಲಾಗುತ್ತಿದೆ. ಪಂ. ನೆಹರೂರವರು ತಮ್ಮ ನಿತ್ಯದ ಆಹಾರದಲ್ಲಿ ಅಕ್ಕಿ ತೆಗೆದುಕೊಳ್ಳುವದನ್ನು ಸಂಪೂರ್ಣ ನಿಷೇಧಿಸಿರುವದಾಗಿಯೂ ಗೆಣಸಿನ ಹಿಟ್ಟನ್ನು ಬೆರಸಿದ ಗೋದಿಹಿಟ್ಟಿನ ಚಪಾತಿಗಳನ್ನು ಮಾತ್ರ ತಾವು ತೆಗೆದುಕೊಳ್ಳುತ್ತಿರುವದಾಗಿಯೂ ಅವರು ಮೊನ್ನೆ ರವಿವಾರದ ಪತ್ರಿಕಾ ಪರಿಷತ್ತಿನಲ್ಲಿ ಹೇಳಿದರು ಈ ಸಮ್ಮಿಶ್ರಣವು ರುಚಿಗೆಟ್ಟದಾಗಿರುವದಲ್ಲದೆ ಆರೋಗ್ಯಕರವೂ ಆಗಿರುವದೆಂದು ಅವರು ನುಡಿದರು.

ದಿಲ್ಲಿಯ ಓರ್ವ ಗಿರಣಿ ಒಡೆಯರಾದ ಶ್ರೀರಾಮರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಲಾಗಿದ್ದು ಗೋದಿ ಪೂರೈಕೆಯ ಕೊರತೆಯನ್ನು ನಿವಾರಿಸುವ ಉದ್ದೇಶದಿಂದ ಗೋದಿಹಿಟ್ಟಿನಲ್ಲಿ ಗೆಣಸಿನ ಹಿಟ್ಟನ್ನು ಮಿಶ್ರಣ ಮಾಡುವ ಪ್ರಶ್ನೆಯನ್ನು ವಿಚಾರಿಸುವದನ್ನು ಆ ಸಮಿತಿಗೆ ಒಪ್ಪಿಸಲಾಗಿದೆಯೆಂದು ತಿಳಿದುಬರುತ್ತದೆ.

ವಾರದ ಭವಿಷ್ಯ

ಜ್ಯೋತಿಷಿ-- ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯ ಕಥನ ಆಫೀಸ ಖಡೇಬಝಾರ, ಬೆಳಗಾವಿ

ಮಾರ್ಚ ೧೪ ರಿಂದ ೨೦ ರ ವರೆಗೆ

ಮೇಷ

'ಶರೀರಮಾದ್ಯಂ ಖಲು ಧರ್ಮಸಾಧನಂ' ಎಂಬ ಆರ್ಯೋಕ್ತಿಯನ್ನು ನೆನೆದು ನಿಮ್ಮ ಮತ್ತು ನಿಮ್ಮ ಪತ್ನಿಯ ಆರೋಗ್ಯದ ಕಡೆಗೆ ವಿಶೇಷ ಗಮನವೀಯಿರಿ. ಉದ್ಯೋಗದಲ್ಲಿ ಲಾಭವೂ ಪ್ರತಿಷ್ಠೆಯೂ ಚೆನ್ನಾಗಿದ್ದರೂ ಬುಡ ತೂತಾದ ಪಾತ್ರದಲ್ಲಿ ನೀರು ತುಂಬಿದಂತಾಗಿ ಕೊನೆಗೆ ಸಾಲವೇ ಉಳಿಯುವ ಸಂಭವವಿದೆ. ವಾದ ಸ್ಪರ್ಧೆಗಳಲ್ಲಿ ಎದುರಾಳಿ ಒಡಂಬಡಿಕೆಗೆ ಬಂದರೆ ಒಪ್ಪಿಕೊಂಡುಬಿಡಿರಿ. ಏಕೆಂದರೆ ಮತ್ತೂ ಹಟಹಿಡಿದರೆ ನಿಮಗೇ ನಷ್ಟವಾದೀತು. ಮಿತ್ರರು ಒಳ್ಳೆಯವರಿದ್ದರೂ ಅವರ ಹೆಂಡತಿ ಮಕ್ಕಳು ನಿಮ್ಮ ಮೇಲೆ ಉರಿದುಬೀಳುವರು. ಭೆಟ್ಟಿಗಿಂತ ಪತ್ರವ್ಯವಹಾರ ಲೇಸು. ಅಶ್ವಿನಿಯ ಉತ್ತರಾರ್ಧ ಮತ್ತು ಭರಣಿಯ ಪೂರ್ವಾರ್ಧಗಳಿಗೆ ಅಷ್ಟು ಅನಿಷ್ಟವಿಲ್ಲ. ತಾ. ೧೪, ೧೬, ೧೮ ಅನುಕೂಲ.

ವೃಷಭ

ಈ ವಾರ ನೀವು ನಿರೀಕ್ಷೆ ಮೀರಿ ಯಶದೊರೆಕಿಸಿಕೊಳ್ಳುವಿರಿ. ಸ್ಥಾವರದಲ್ಲಿ ಅನುಕೂಲ ಮಾತುಕತೆಗಳಾಗುವವು. ಉದ್ಯೋಗದಲ್ಲಿಯೂ ಪ್ರತಿಷ್ಠೆ, ಲಾಭ ಧಾರಾಳ. ವಾದ ಸ್ಪರ್ಧೆಗಳಲ್ಲಿ ಮೇಲ್ಮೈ. ಆದರೆ ಹೆಂಡತಿ ಮಕ್ಕಳೊಡನೆ ದಿನ ಬೆಳಗಾದರೆ ವಿತಂಡವಾದ. ಪ್ರವಾಸಕ್ಕಿಂತ ಪತ್ರವ್ಯವಹಾರ ಒಳಿತು. ಕೃತ್ತಿಕೆಯ ಉತ್ತರಾರ್ಧ ಹಾಗು ರೋಹಿಣಿಯ ಪೂರ್ವಾರ್ಧಗಳು ಮಾತ್ರ "ದೈವಂ ನಿಹತ್ಯ ಕುರು ಪೌರುಷಂ" ಎಂದು ಸಾಹಸಪ್ರವೃತ್ತರಾಗಬೇಕು. ತಾ. ೧೫, ೧೬, ೧೯, ೨೦ ಅನುಕೂಲ.

ಮಿಥುನ

ಬಂಡವಾಳವಿಲ್ಲದ ಬಡಾಯಿಗೆ ಹೋಗಬೇಡಿರಿ ಅಧಿಕಾರ ಲಾಭವಾದರೂ ಉದ್ಯೋಗದಲ್ಲಿ ಪ್ರತಿಷ್ಠೆ ಹೆಚ್ಚಿದರೂ ಲಾಭಕ್ಕೆ ಮೋಸವಾದೀತು. ಮಿತಿ ಮೀರಿ ವೆಚ್ಚ ಮಾಡಿಯೇ ನಿಮ್ಮ ಇಷ್ಟಾರ್ಥ ಸಾಧಿಸಿಕೊಳ್ಳಬೇಕಾಗುವದು. ಹೆಂಡತಿಯ ಪ್ರಕೃತಿ ಕೆಡುವ ಸಂಭವವುಂಟು. ವಾದ ಸ್ಪರ್ಧೆಗಳಲ್ಲಿ ಸೋಲೂ ಇಲ್ಲ ಗೆಲವೂ ಇಲ್ಲ. ಭೆಟ್ಟಿಗಿಂತ ಪತ್ರವ್ಯವಹಾರ ಒಳ್ಳೇದು. ಆರ್ದ್ರೆಯ ಉತ್ತರಾರ್ಧ ಮತ್ತು ಪುನರ್ವಸುವಿನ ಪೂರ್ವಾರ್ಧಗಳು "ಶ್ರೇಯಾಂಸಿ ಬಹುವಿಘ್ನಾನಿ" ಎಂದು ಕೈಯೂರದೆ ಮುಂದೆ ಸಾಗಬೇಕು. ತಾ. ೧೪, ೧೭, ೧೮ ಹಿತ.

ಕರ್ಕ

ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಲಾಭಗಳೂ ವಾದ ಸ್ಪರ್ಧೆಗಳಲ್ಲಿ ಮೇಲ್ಮೈಯೂ ದೊರೆತರೂ ನಿಮ್ಮ ಪ್ರಾಪಂಚಿಕ ಸುಖ ಮಧ್ಯಮವಾಗಲು ಹೆಂಡತಿಯ ಪ್ರಕೃತಿ ಅಷ್ಟು ಚನ್ನಾಗಿಲ್ಲದ್ದೇ ಕಾರಣವಾಗುವದು. ಮಕ್ಕಳಲ್ಲೊಬ್ಬನ ಏಳ್ಗೆ. ಸ್ವಲ್ಪ ಅನಿರೀಕ್ಷಿತ ಲಾಭವೂ ಆಗಬಹುದು. ಮಿತ್ರ-ದಾಯಾದ್ಯರಿಗೆ ಕ್ಲೇಶ. ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಲಾಭಕರ. ಪುಷ್ಯದ ಉತ್ತರಾರ್ಧ ಹಾಗು ಆಶ್ಲೇಷೆಯ ಪೂರ್ವಾರ್ಧಗಳಿಗೆ ಸುಸು ಕೊಂಡರೆ ಹೆಚ್ಚು. ತಾ. ೧೫, ೧೬, ೧೯, ೨೦ ಹಿತ.

ಸಿಂಹ

ನಿಮ್ಮ ಆರೋಗ್ಯ ನೆಟ್ಟಗಿದ್ದರೂ ಹೆಂಡತಿಗೆ ಆಗಾಗ್ಗೆ ಅಸ್ವಸ್ಥ. ಮಕ್ಕಳ ಏಳ್ಗೆಯಾದರೂ ಅವರು ನಿಮ್ಮ ಮುಂದೆ ತಮ್ಮ ಕುದುರೆಗೆ ಮೂರೇ ಕಾಲೆಂದು ಪೀಡಿಸುವರು. ಉದ್ಯೋಗದಲ್ಲಿ ಪ್ರಗತಿಗಿಂತ ಲಾಭ ಹೆಚ್ಚು. ವಾದ ಸ್ಪರ್ಧೆಗಳಲ್ಲಿಯೂ ಯಶ. ಖರ್ಚು ಮಾತ್ರ ಒಂದಕ್ಕೆರಡು. ಪ್ರವಾಸ ಸುಖಕಾರಿಯಲ್ಲ. ಆದರೆ ಭೆಟ್ಟಿ ಪತ್ರವ್ಯವಹಾರ ನೆಟ್ಟಗೆ. ಮಘೆಯ ಉತ್ತರಾರ್ಧ ಹಾಗೂ ಪೂರ್ವಾಭಾದ್ರದ ಪೂರ್ವಾರ್ಧಕ್ಕೆ ಅಷ್ಟು ತೊಂದರೆಯಿಲ್ಲ. ತಾ. ೧೪, ೧೫, ೧೬, ೧೭ ಅನುಕೂಲ.

ಕನ್ಯಾ

ನಿಮ್ಮ ಹಾಗು ಮಕ್ಕಳ ಪ್ರಕೃತಿಗೆ ಏನಾದರೊಂದು ಕಿರುಕುಳ. ಸ್ತ್ರೀಸುಖದಲ್ಲಿ ವ್ಯತ್ಯಯ. ಉದ್ಯೋಗದಲ್ಲಿ ನಿಕೃಷ್ಟಾವಸ್ಥೆ. ಮೇಲಾಗಿ ವೆಚ್ಚದ ಹೆಚ್ಚಳ. ಪೂರ್ವಿಕರ ಪರಂಪರೆಯನ್ನು ಕಾಯ್ದುಕೊಳ್ಳುವ ಹುಚ್ಚು ಹಂಬಲದಿಂದ ಮನಸೊಪ್ಪದ ವೆಚ್ಚಗಳಿಗಿಳಿದು ಪಶ್ಚಾತ್ತಾಪ ಪಡುವ ಪ್ರಸಂಗ. ಧಂದೆಯವರಿಗಿಂತ ನೌಕರಿಯುದ್ದವರಿಗೇ ಎಷ್ಟೋ ಅನುಕೂಲ. ವಾದ ಸ್ಪರ್ಧೆಗಳಲ್ಲಿಯೂ ನಿರ್ಣಯಾತ್ಮಕ ಪರಿಣಾಮವಿಲ್ಲ. ಪ್ರವಾಸಾದಿ ಕಾರ್ಯಗಳು ಕಠಿನ. ಉತ್ತರೆಯ ಉತ್ತರಾರ್ಧ ಹಾಗು ಹಸ್ತದ ಪೂರ್ವಾರ್ಧಗಳಿಗೆ ಹೆಚ್ಚು ಅನುಕೂಲ. ತಾ. ೧೫, ೧೬, ೧೭, ೧೮ ಅನುಕೂಲ.

ತುಲಾ

ಪ್ರಕೃತಿ ಚನ್ನಾಗಿದ್ದರೂ ಹೆಂಡತಿಯೊಡನೆ ಅಕಲ್ಪಿತ ವಿರಸವಾಗುವದು. ಉಳಿದ ಪ್ರಾಪಂಚಿಕ ಸುಖಗಳೂ ಅಷ್ಟಕ್ಕಷ್ಟೆ. ಮಕ್ಕಳು ದಾಯಾದ್ಯರಲ್ಲಿ ಎಲ್ಲೋ ಸ್ವಲ್ಪ ಉನ್ನತಿ. ಉದ್ಯೋಗದಲ್ಲಿ ಲಾಭ ಪ್ರತಿಷ್ಠೆಗಳು ಚನ್ನಾಗಿದ್ದರೂ ವೆಚ್ಚ ಕಂಡಾಬಟ್ಟೆ-ಅದೂ ಅಕಾರ್ಯಗಳಲ್ಲಿ, ವಾದ ಸ್ಪರ್ಧೆಗಳಲ್ಲಿ ಎರಡೂ ಪಕ್ಷಗಳು ಕೈಸುಟ್ಟುಕೊಳ್ಳುವದು. ಪ್ರವಾಸಾದಿ ಕಾರ್ಯಗಳು ಹಿತಕರ. ಸ್ವಾತಿಯ ಉತ್ತರಾರ್ಧ ಮತ್ತು ವಿಶಾಖೆಯ ಪೂರ್ವಾರ್ಧಕ್ಕೆ ತುಂಬ ತೊಂದರೆ. ತಾ. ೧೪, ೧೮, ೧೯ ಹಿತ.

ವೃಶ್ಚಿಕ

ಪ್ರಕೃತಿ ಉತ್ತಮ. ಸ್ತ್ರೀಸುಖವೂ ಪ್ರಾಪಂಚಿಕ ಸುಖವೂ ಬಯಸಿದಂತೆ. ಉದ್ಯೋಗದಲ್ಲಿ ಬಯಸಿದಷ್ಟು ಲಾಭವಾದರೂ ಅದಕ್ಕಾಗಿ ತುಂಬ ಕಷ್ಟಪಡಬೇಕಾಗುವದು. ವಾದ ಸ್ಪರ್ಧೆಗಳಲ್ಲಿ ಯಶ ತುಂಬ ವೆಚ್ಚ ಮಾಡಬೇಕಾಗಿ ಬಂದರೂ ಉದ್ದೇಶ ನೆರವೇರುವದೊಂದು ಸಮಾಧಾನ. ಭೆಟ್ಟಿಗಿಂತ ಪತ್ರವ್ಯವಹಾರ ಲೇಸು. ಅನುರಾಧೆಯ ಉತ್ತರಾರ್ಧ ಹಾಗೂ ಜ್ಯೇಷ್ಠದ ಪೂರ್ವಾರ್ಧಗಳಿಗೆ ಅನಿಷ್ಟ. ತಾ. ೧೫, ೧೬, ೧೯, ೨೦ ಅನುಕೂಲ.

ಧನು

ಮಕ್ಕಳ ಹೊರತು ಉಳಿದವರ ಪ್ರಕೃತಿ ಚನ್ನಾಗಿದ್ದು ಸಾಧಾರಣ ಒಳ್ಳೆ ಪ್ರಾಪಂಚಿಕ ಸುಖವನ್ನೆ ಅನುಭವಿಸುವಿರಿ. ಪ್ರಿಯ ಜನರ ಸಹವಾಸದ ಸುಖವಿದ್ದರೂ ನೆರೆಹೊರೆಯವರೊಡನೆ ಸ್ವಲ್ಪ ಕಲಹ. ಸ್ಥಾವರದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪ್ರತಿಷ್ಠೆ ಕಡಿಮೆಯಾದರೂ ಲಾಭ ಉತ್ತಮ. ವಾದ ಸ್ಪರ್ಧೆಗಳಲ್ಲಿ ಶತ್ರು ಬಿದ್ದರೂ ತನ್ನ ಮೂಗು ಮೇಲೆಂದು ಮತ್ತೂ ಕಾಡುವವನೆ. ಭೆಟ್ಟಿಗಿಂತ ಪತ್ರವ್ಯವಹಾರ ಒಳಿತು. ಮೂಲದ ಉತ್ತರಾರ್ಧ ಹಾಗು ಪೂರ್ವಾಷಾಢದ ಪೂರ್ವಾರ್ಧಗಳಿಗೆ ಕೊಂಚ ಕಡಿಮೆ. ತಾ. ೧೫, ೧೬, ೧೮ ಒಳಿತು.

ಮಕರ

ಸ್ನೇಹದ ಮತ್ತು ಹೆಂಡತಿಯ ಪ್ರಕೃತಿ ಅಷ್ಟು ಚನ್ನಾಗಿರದು. ಕಿರಿಕಿರಿಯುಂಟು ಕುತಂತ್ರ ದೂರಬಹುದು. ಆದರೆ ಉದ್ಯೋಗದಲ್ಲಿ ಪ್ರತಿಷ್ಠೆಯುಂಟು ಲಾಭವೂ ಪೂಜ್ಯ ಜನರ ಸಹವಾಸವೂ ಮಿತ್ರಸುಖವೂ ಚನ್ನಾಗಿದೆ. ವಾದ ಸ್ಪರ್ಧೆಗಳಲ್ಲಿ ಜೋಕೆಕೊಳ್ಳುಸಂಭವದೇನೂ ಇಲ್ಲ. ಪ್ರವಾಸಾದಿ ಕಾರ್ಯಗಳು ಇಚ್ಛಾನುಸಾರ. ಉತ್ತರಾಷಾಢದ ಉತ್ತರಾರ್ಧ ಹಾಗು ಶ್ರವಣದ ಪೂರ್ವಾರ್ಧದವರಿಗೆ ಅನಿಷ್ಟ ಫಲಗಳ ಬಾಧೆ ಕಡಿಮೆ. ತಾ. ೧೬, ೧೮, ೧೯, ೨೦ ಅನುಕೂಲ.

ಕುಂಭ

ಪ್ರಕೃತಿ ಚನ್ನಾಗಿದ್ದು ಸ್ತ್ರೀಸುಖ ಒಳಿತಾಗಿದ್ದರೂ ಒಲ್ಲದ ಜನರ ಸಹವಾಸ. ಗೆಳೆಯರೇ ತಿರುಗಿ ಬೀಳುವರು. ಲಾಭವಿಲ್ಲದ ಉದ್ಯೋಗ ಸ್ಥಿತಿಗಳಿಂದ ಸುಖಕ್ಕೆ ಅಡ್ಡಿ ಬರುವದು. ವಾದ ಸ್ಪರ್ಧೆಗಳಲ್ಲಿ ಮಧ್ಯಮ. ಬೌದ್ಧಿಕ ಕಾರ್ಯಗಳಲ್ಲಿ ಹೆಚ್ಚು ಸಾಫಲ್ಯ ಪಡೆಯುವಿರಿ. ಪ್ರವಾಸಾದಿ ಕಾರ್ಯಗಳಿಗೆ ವ್ಯತ್ಯಯುದಾರದು. ಶತತಾರೆಯ ಉತ್ತರಾರ್ಧ ಹಾಗು ಪೂರ್ವಾಭಾದ್ರದ ಪೂರ್ವಾರ್ಧಗಳಿಗೆ ಬಹಳ ಪ್ರಯತ್ನದಿಂದ ಇಷ್ಟ ಸಿದ್ಧಿಯಾಗಬಹುದು. ತಾ. ೧೬, ೧೮, ೧೯ ಅನುಕೂಲ.

ಮೀನ

ದೊಡ್ಡಿಸ್ತನದ ಹುಬ್ಬಿಗೆ ಬಿದ್ದು ಸುಮ್ಮಸುಮ್ಮನೆ ಹಣ ಕಳೆದುಕೊಳ್ಳುವ ಹುಚ್ಚು ಬಿಡಿರಿ. ಉದ್ಯೋಗದಲ್ಲಿಯೂ ನಿಮ್ಮ ಹೆಸರು ವಾಸಿಗೆ ಸರಿಯಾದ ಲಾಭ ಸಿಗಲಾರದು. ಹೆಂಡತಿಯ ಮಕ್ಕಳ ಅಸ್ವಾಸ್ಥ್ಯದಿಂದಲೂ ನಿಮಗೆ ಹಾನಿಯಾಗಬಹುದು. ಜಗಳಗಳಲ್ಲಿ ಕೈಹಾಕಬೇಡಿರಿ. ವಾದ ಸ್ಪರ್ಧೆಗಳಲ್ಲಿ ಶತ್ರುವಿಗೆ ಸಾಕೋಸಾಕಾಗಿದ್ದರೂ ನಿಮಗೆ ಯಶಸ್ಸಿನ ದರ್ಶನ ಇನ್ನೂ ಆಗದು. ಪತ್ರವ್ಯವಹಾರಕ್ಕಿಂತ ಭೆಟ್ಟಿ ಹಿತ. ಉತ್ತರಾಭಾದ್ರದ ಉತ್ತರಾರ್ಧ ಮತ್ತು ರೇವತಿಯ ಪೂರ್ವಾರ್ಧಗಳಿಗೆ ಅನುಕೂಲ ದೈವವಿಲ್ಲ. ತಾ. ೧೫, ೧೬, ೧೯, ೨೦ ಅನುಕೂಲ.

Reg. No. B. 3148

LICENCE No. 3
Licenced to Post without Prepayment

KARMAVEER 14-3-49

ಪುಸ್ತಕ ಪರಿಚಯ

[ನಮಗೆ ಬಂದ ಎಲ್ಲ ... ಸ್ವೀಕರಿಸಿ ಉಲ್ಲೇಖ ಮಾಡುವೆವಾದರೂ ಆ ಎಲ್ಲವುಗಳ ವಿಮರ್ಶೆ ... ಮೂಲಕ ತಿಳಿಸಬಯಸುತ್ತೇವೆ. —ಸಂ]

ಜೀವನ ಸಮಸ್ಯೆ—ಗಾಂಧೀಜಿ

ಬರೆದವರು : ಶ್ರೀ ಕರಗುದರಿ ರಾಮರಾಯರು. ಪ್ರಕಾಶಕರು : ವಿಚಾರಸಾಹಿತ್ಯ ಲಿ., ಬಳೇಪೇಟೆ, ಬೆಂಗಳೂರು. ೩೭ ಪುಟ, ೧ ರೂಪಾಯಿ.

ಜೀವನ ಸಮಸ್ಯೆ ಅನಾದಿ ಕಾಲದಿಂದಲೂ ಬಿಡಲಾರದ ಸಮಸ್ಯೆ. "ಜೀವನವೊಂದು ಕಗ್ಗಂಟು," ಎಂದು ಲೇಖಕರು ಹೇಳಿದ್ದು ಶಾಸ್ತ್ರವಿದೆ. ಮಾನವ ಜೀವಿತದ ಬಗ್ಗೆ ಗಾಂಧೀಜಿಯವರು ಪ್ರತಿಪಾದಿಸಿದ ವಿಷಯಗಳನ್ನೆ ತಳಹದಿಯನ್ನಾಗಿಟ್ಟುಕೊಂಡು, ಚೊಕ್ಕವಾಗಿ ವಿಂಗಡಿಸಲ್ಪಟ್ಟ ಹದಿಮೂರು ಭಾಗಗಳಲ್ಲಿ, ಜೀವನದ ಆಗುಹೋಗು ಗೊತ್ತುಗುರಿಗಳನ್ನು ಸಿಕ್ಷಪ್ತವಾದ ಶೈಲಿಯಲ್ಲಿ ವಿವೇಚಿಸಿದೆ. ಈ ಪುಸ್ತಕದ ಯೋಗ್ಯತೆಯನ್ನು ಅದರ ಲಘು ಆಕಾರದಿಂದ ಊಹಿಸಲು ಬರುವಂತಿಲ್ಲ.

ಶ್ರೀ ಕರಗುದರಿಯವರ ತತ್ವಜ್ಞಾನ ಸರಳವಾಗಿದೆ : ಹುಟ್ಟಿದ ಮೇಲೆ ಜೀವಿಸಬೇಕು, ಜೀವಿಸಿದ ಮೇಲೆ ಬದುಕಬೇಕು. ಬದುಕಿದ ಮೇಲೆ ಎಲ್ಲ ಪ್ರಾಣಿಗಳು ಸುಖವನ್ನು ಅಪೇಕ್ಷಿಸುತ್ತವೆ, ಅದಕ್ಕಾಗಿ ಹೆಣಗುತ್ತವೆ. ಆದರೆ ಸುಖವೆಂದರೇನು ? ಅದರ ಸಾಧನೋಪಾಯವೇನು ? ಇದು ವಾದಗ್ರಸ್ತವಾಗಿದೆ.

ಈ ಪ್ರಪಂಚದಲ್ಲಿ, ಎಲ್ಲರಿಗೂ ಸುಖದುಃಖಗಳಿದ್ದೇ ಇವೆ. ಎಷ್ಟು ತೊಂದರೆಗಳು ಬಂದರೂ ಅದನ್ನೆಲ್ಲ ಜಯಿಸಿಕೊಂಡು, ಅದರಿಂದಲೇ ತೃಪ್ತಿಯಿಂದಿರುವವನಿಗೆ ಈ ಜಗತ್ತು ಆನಂದವಾಗಿ ತೋರುತ್ತದೆ. ಇಲ್ಲದಿದ್ದರೆ ಎಲ್ಲವೂ ದುಃಖ. ಯಾವುದಕ್ಕೂ ಬೆದರದೆ ತೃಪ್ತಿಯಿಂದಿರುವುದಕ್ಕೇ ಮುಕ್ತಿ ಎನ್ನುತ್ತಾರೆ. ಜಗತ್ತಿನ ಯಾವ ಸುಖಕ್ಕೂ ಉಬ್ಬದೆ, ದುಃಖಕ್ಕೆ ಕುಗ್ಗದೆ ಇದ್ದವರಲ್ಲಿ ಗಾಂಧೀಜಿ ಒಬ್ಬರು. ಗಾಂಧೀಜಿ ಮೊದಲು ತಮ್ಮನ್ನೇ ತಾವು ಜಯಿಸಿಕೊಂಡಿದ್ದರು. ಹಾಗಾದುದರಿಂದಲೇ ಜಗತ್ತಿನ ಬಹು ಜನರ ಪ್ರೀತಿ ವಿಶ್ವಾಸಗಳನ್ನು ಗಳಿಸಿ ಅವರು ಜಗತ್ತನ್ನು ಜಯಿಸಲು ಶಕ್ತರಾದರು. ಇತರರ ಮೇಲೆ ಹೇಳಿದ ಮಾತುಗಳ ಪರಿಣಾಮವಾಗಬೇಕಾದರೆ ಒಳ್ಳೆಯ ಗುಣಗಳ ಜೊತೆಗೆ ವ್ಯಕ್ತಿತ್ವವೂ ಬಹಳ ಮುಖ್ಯವಾದುದು. ಈ ವ್ಯಕ್ತಿತ್ವವೆಂಬುದು ಗಾಂಧಿಯವರಲ್ಲಿತ್ತು. ಬೇರೆ ಬೇರೆ ಕಾಲಕ್ಕೆ ಬೇರೆ ಬೇರೆ ಧರ್ಮಗಳು ಹುಟ್ಟಿದವು. ಅವುಗಳೆಲ್ಲ ಜನರನ್ನು ಉತ್ತಮ ಮಾರ್ಗಕ್ಕೆ ಒಯ್ಯಲು ಹುಟ್ಟಿದವೇ ಹೊರತು ಪರಸ್ಪರ ಬಡಿದಾಡಲು ಅಲ್ಲ.

ಇದೀಗ ಕರಗುದರಿಯವರ ಗಾಂಧೀ ಸ್ಫೂರ್ತ ವಿಚಾರಧಾರೆಯ ಸಾರ. ದೇವರೆಂದರೇನು ? ಸಮಾಜವೆಂದರೇನು ? ಶಿಕ್ಷಣ ಹೇಗಿರಬೇಕು ? ಇತ್ಯಾದಿ ಲೌಕಿಕ ಸಮಸ್ಯೆಗಳಿಗೂ ಅವರು ಅದೇ ನೆಲೆಯಿಂದ ಉತ್ತರ ಕೊಟ್ಟಿದ್ದಾರೆ. ಗಾಂಧೀ ಜೀವನದ ಹಲ ಪ್ರಸಂಗಗಳನ್ನು ದೃಷ್ಟಾಂತವಾಗಿ ಉಪಯೋಗಿಸಿಕೊಂಡಿದ್ದಾರೆ.

ಕೆಲವೆಡೆ ಪುನರುಕ್ತಿಯ ದೋಷಗಳಿದ್ದರೂ ಅವು ಇದರ ಸಮಷ್ಟಿ ಗುಣಗಳ ಮಧ್ಯದಲ್ಲಿ ಕ್ಷಮ್ಯವೇ ಆಗಿವೆ. ವಿಚಾರದ ಮತ್ತು ನಿರೂಪಣೆಯ ಸರಳತೆ ಇದರಲ್ಲಿ ಕಾಣುವ ಮುಖ್ಯ ಗುಣ.

ಪತಿ

ಬರೆದವರು : ಶ್ರೀ 'ನವಗಿರಿನಂದ.' ಪ್ರಕಾಶಕರು : ಪ್ರತಿಭಾ ಗ್ರಂಥಮಾಲೆ, ಧಾರವಾಡ ೧೧೪ ಪುಟ, ರೂ. ೧॥

ಕಾಲಚಕ್ರ

ಬರೆದವರು : ಶ್ರೀ ಬಿ. ಎಚ್. ಕೊಪ್ಪರ, ಸಂಜೀವಿನಿ ಪ್ರಕಾಶನ ಹುಬ್ಬಳ್ಳಿ. ೧೭೩ ಪುಟ, ರೂ. ೩—

ಪತಿಯೇ ಪರದೈವವೆಂದು ಹೇಳುವ ಭಾರತೀಯ ಸಂಪ್ರದಾಯ ಎಲ್ಲ ಸಂದರ್ಭಗಳಲ್ಲಿ ಯೋಗ್ಯವಲ್ಲ. ಸತಿಯಲ್ಲಿ ಯಾವ ಪ್ರೇಮವನ್ನೂ ತೋರಿಸದೆ, ಅವಳನ್ನು ವ್ಯಾಪಾರದ ಕೊತ್ತೆಂದು ಭಾವಿಸಿ ವ್ಯಭಿಚಾರದ ಮಾರ್ಗದಲ್ಲಿ ತಾನೇ ತೊಡಗಿಸಲು ಹಿಂಜರಿಯದ ಗಂಡಸರೂ ಇರುವಾಗ ಅವರನ್ನು ತೊರೆದು ಬೇರೊಬ್ಬನನ್ನು ಮಾಡಿಕೊಳ್ಳುವದೇ ಪತ್ನಿಗೆ ಯೋಗ್ಯವೆಂಬಭಿಪ್ರಾಯವನ್ನು ಪ್ರತಿಪಾದಿಸುವ 'ನವಗಿರಿನಂದರ' 'ಪತಿ' ಕಾದಂಬರಿ ನಡೆದ ಘಟನೆಗಳ ಆಧಾರದಿಂದ ಬರೆಯಲ್ಪಟ್ಟದ್ದೆಂದು ಲೇಖಕರು ಹೇಳಿದ್ದರೂ ಅವರು ಚಿತ್ರಿಸಿರುವ ಉಚ್ಚ ಸಮಾಜದಲ್ಲಿ, ಪತಿಯ ಜೀವನಮಾನಕಾಲದಲ್ಲಿ, ಅದೂ ತೀರ ಕಡಿಮೆ ದಿನಗಳ ನೋಟೀಸು ಕೊಟ್ಟು ಪುನರ್ವಿವಾಹಕ್ಕೆ ಸದ್ಯದ ಕಾಯದೆ ಸಮ್ಮತಿ ಕೊಡುವದೇ ಎಂಬುದು ಸಂಶಯಾಸ್ಪದ. ಉಳಿದ ಅಂಶಗಳಲ್ಲಿ ಕಥೆಯ ಸಂವಿಧಾನ ನೈಸರ್ಗಿಕವಾಗಿದ್ದು ಒಂದು ಓದಿಗೆ ಅಡ್ಡಿಯಿಲ್ಲ.

ಧ್ಯೇಯವೆಂದರೇನು ? ಶ್ರೀ ಕೊಪ್ಪರರ 'ಕಾಲಚಕ್ರ'ದ ೧೭೩ ಪುಟಗಳನ್ನೋದಿದ ಬಳಿಕ ನಮ್ಮ ಮನಸ್ಸಿನಲ್ಲಿ ಎದ್ದ ದೊಡ್ಡ ಕೂಟ ಪ್ರಶ್ನೆಯೆಂದರೆ ಇದು. ಅವರ ನಾಯಕನಿಗೆ ಮಾತ್ರವಲ್ಲ, ಸ್ವತಃ ಅವರಿಗೆ ಧ್ಯೇಯ ಶಬ್ದದ ಗೌರವದ ಕಲ್ಪನೆ ಇದ್ದಂತಿಲ್ಲ. ಎರಡು ಮಹಾಯುದ್ಧಗಳ ನಡುವೆ ಪ್ರಾಯಕ್ಕೆ ಬಂದ ಉಭಯಭ್ರಷ್ಟ, ಚಿತ್ತದಾರ್ಢ್ಯರಹಿತ ಪೀಳಿಗೆಯ ಮಂಗಮನಸಿನ ಉತ್ತೇಜಿತ ಚಾಂಚಲ್ಯಕ್ಕೆ ಅವರ ನಾಯಕನೊಂದು ದುಷ್ಟಾಂತವಾಗಬಹುದು. ಇದರಲ್ಲಿ ಎಲ್ಲಕ್ಕೂ ವಿಚಿತ್ರವಾದುದೆಂದರೆ ಸ್ವತಃ ಲೇಖಕರಿಗೆ ಈ ಮಾತು ಪ್ರತ್ಯಯಕ್ಕೆ ಬಾರದುದು. ಇಂದಿನ ಯುವ ಜನಾಂಗದ ಈ ಮನಃಸ್ಥಿತಿಯ ಪರಿವೆಯಿದ್ದು ಅವರು ಕಾದಂಬರಿಯನ್ನು ಹೊಸೆದಿದ್ದರೆ ಹೊಸ ಧಾಟಿಯಲ್ಲಿ ಹೊರಟ ಕೀರ್ತಿಯಾದರೂ ಅವರಿಗೆ ಬರುತಿತ್ತು. ಈಗಾಗಿರುವದೇನಂದರೆ, ಈಚೆಗೆ ಪ್ರಗತಿಶೀಲ ಪಂಥದವರು ಕೆಲವರು ಹುಟ್ಟಿಸಿದ ಧ್ಯೇಯರಹಿತ "ಧ್ಯೇಯಾತ್ಮಕ" ಸಾಹಿತ್ಯದ ಇನ್ನೊಂದು ಅವತಾರ ಮುದ್ರಣಕ್ಕಿಳಿದುದು ಮಾತ್ರ.

ಶ್ರೀ ಕೊಪ್ಪರರ ನಾಯಕ ಒಬ್ಬ "ಧ್ಯೇಯವಾದಿ" ಆದರೆ ಒಂದು ಗ್ರಂಥಮಾಲೆ ಹೊರಡಿಸುವದಕ್ಕಿಂತ ದೊಡ್ಡ ಧ್ಯೇಯವಾವುದೂ ಅವನಲ್ಲಿದ್ದಂತಿಲ್ಲ. ಅವನು ಮನೆಬಿಟ್ಟದ್ದು, ಹುಬ್ಬಳ್ಳಿಯಲ್ಲಿ ಮಾಸ್ತರನಾಗಿ ಆಶ್ರಯದಾತ ಗೆಳೆಯನ ಹೆಂಡತಿಯಲ್ಲಿ ಅಪ್ರತ್ಯಕ್ಷ ವ್ಯಭಿಚಾರ ಮಾಡಿದ್ದು, ಮುಂಬಯಿಗೆ ಕಾಲುಕಿತ್ತದ್ದು, ತಿರುಗಿ ಊರಿಗೆ ಬಂದು ತಂದೆ ಹೇಳಿದ ಹುಡುಗಿಯನ್ನು ಒಪ್ಪಿನ್ನದೆ ಮದುವೆಯಾದದ್ದು—ಇಷ್ಟು ಸಂಗತಿಗಳ ಸುತ್ತ ಈ ಕಾದಂಬರಿಯ ಚರ್ಚೆ ತಿರುಪು. ಇದಾವುದರಲ್ಲಿಯೂ ಅವನ ಧ್ಯೇಯವಾದದ ಸಮರ್ಥಕವೂ ಆಗಿಲ್ಲ, ಅವನ ಧ್ಯೇಯವಾದದ ತೇಜಸ್ಸೂ ಕಾಣಿಸುವದಿಲ್ಲ. ಎಲ್ಲವನ್ನೂ ಅವನು ಪರರ ಪ್ರೇರಣೆಯಿಂದ ಮಾಡುತ್ತಾನೆ. ಗೆಳೆಯನ ಹೆಂಡತಿಯೊಡನೆ ಪ್ರಣಯ ಪ್ರಸಂಗ ಕೂಡ ಅವಳ ಒತ್ತಾಯದಿಂದಲೇ ನಡೆಯುತ್ತದೆ. ಬರಿ ಧ್ಯೇಯ ಧ್ಯೇಯವೆನ್ನುವದಲ್ಲದೆ ದಿಟ್ಟತನದ ಕೆಲಸವಾವದೂ ಅವನಿಂದಾಗುವದಿಲ್ಲ. ಮನೋನಿರ್ಧಾರವಂತೂ ಇಲ್ಲವೇ ಇಲ್ಲ. ಗೆಳೆಯನ ಹೆಂಡತಿಯನ್ನು ತೊರೆದು ಅವನು ಓಡಿಹೋದುದಂತೂ ತೀರ ಹೇಡಿತನದ ಕೆಲಸ.

ಇದು ಸ್ವಲ್ಪ ಮಟ್ಟಿಗೆ ತಮ್ಮದೇ ಆತ್ಮ ಕಥೆಯೆಂದು ಮುನ್ನುಡಿಯಲ್ಲಿ ಲೇಖಕರು ಹೇಳಿಕೊಂಡಿದ್ದಾರೆ. ಹಾಗಿದ್ದರೆ ಅದು ತುಂಬ ಕನಿಕರದ ಮಾತು. ಏಕೆಂದರೆ ಪರಿಸ್ಥಿತಿ ಹಾರಿಸಿಕೊಂಡು ಹೋದಂತೆ ಪ್ರತಿಭಟನೆಯಿಲ್ಲದೆ ಹಾರುವದನ್ನೆ ಅವರು ಧ್ಯೇಯವಾದವೆಂದು ತಿಳಿದಂತಿದೆ.

ಅವರ ಭಾಷಾಶುದ್ಧಿ, ಶಬ್ದಾರ್ಥಜ್ಞಾನಗಳೂ ತುಂಬ ಸಂದಿಗ್ಧವಾಗಿವೆ. ಒಂದೇ ಉದಾಹರಣೆ ಹೇಳಬೇಕಾದರೆ ಅವರು "ಊರ್ಧ್ವದೇಹಿ" ಯೆಂಬ ಪದವನ್ನು ದೀರ್ಘದೇಹಿ (?) ಎಂಬರ್ಥದಲ್ಲಿ ಉಪಯೋಗಿಸಿದ್ದಾರೆ! ಇದಕ್ಕಿಂತ ದೊಡ್ಡ ಹಗರಣವಾವುದು? ಸಂಪಾದಕತ್ವದ ಹೊಣೆ ಹೊತ್ತವರು ಭಾಷಾಶುದ್ಧಿಯೇ ಮೊದಲಾದ ಅಂಶಗಳ ಕಡೆಗೆ ಗಮನಕೊಡದಿದ್ದರೆ ಸಾಹಿತ್ಯಕ್ಕೆ ದೊಡ್ಡ ಅಪರಾಧವಾಗುತ್ತದೆಂದು ಶ್ರೀ ಕಲಮದಾನಿ ಗುರುರಾಯರಿಗೆ ಸೂಚಿಸಬೇಕಾಗಿದೆ.

ಸ್ವೀಕಾರ

ವಿರೋಧಿ ಸಂವತ್ಸರದ ಪಂಚಾಂಗಗಳು

ನವಯುಗ ಪಂಚಾಂಗ

ಗುಣಕರು : ಶ್ರೀ ಕೆ. ನರಸಿಂಹ ಉಪಾಧ್ಯಾಯ, ಪ್ರಕಾಶಕರು : ನವಯುಗ ಎಂಟರಪ್ರಾಯಿಸ್ ಲಿಮಿಟೆಡ್, ಉಡುಪಿ. ವರ್ಷ ಭವಿಷ್ಯವನ್ನೊಳಗೊಂಡಿದೆ. ಬೆಲೆ ೫ ಆ.

ಉದ್ಯಾವರ ಪಂಚಾಂಗ

ಗುಣಕರು : ಶ್ರೀ ಉದ್ಯಾವರ ವಿಶ್ವಾಚಾರ್ಯ. ಪ್ರಕಾಶಕರು : ಧರ್ಮಪ್ರಕಾಶ ಛಾಪಖಾನೆ, ಮಂಗಳೂರು. ಬೆಲೆ ೬ ಆಣೆ.

ರವಿಪ್ರಸಾದ ಪಂಚಾಂಗ

ಗುಣಕರು : ಶ್ರೀ ಅತ್ತೂರು ಲಕ್ಷ್ಮೀನಾರಾಯಣ ಉಡುಪ. ಪ್ರಕಾಶಕರು : ರವಿಪ್ರಸಾದ ಜ್ಯೋತಿಷಾಲಯ, ಕೊಯಮತ್ತೂರು ಮತ್ತು ಮೂಲ್ಕಿ (ದಕ್ಷಿಣ ಕನ್ನಡ). ವರ್ಷ ಭವಿಷ್ಯಾದಿಗಳನ್ನೊಳಗೊಂಡಿದೆ. ಬೆಲೆ ೬ ಆಣೆ.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.